JJ-50 (B) 25206

RN

ಸುವರ್ಣ ಕರ್ನಾಟಕ

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹನ್ನೆರಡನೇ ವಿಧಾನಸಭೆ ಐದನೆಯ ಅಧಿವೇಶನ
FIFTH SESSION OF THE TWELFTH LEGISLATIVE ASSEMBLY

ಸಂಪುಟ – ೧ (ಕ್ರಮಾಂಕ–೩)
Volume - 1 (No. 3)

(೨ನೇ ಫೆಬ್ರವರಿ ೨೦೦೭)
(2nd February 2007)

ಭಾಗ–೨
PART-II

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹನ್ನೆರಡನೇ ವಿಧಾನಸಭೆ ಐದನೆಯ ಅಧಿವೇಶನ
FIFTH SESSION OF THE TWELFTH LEGISLATIVE ASSEMBLY

ಸಂಪುಟ – ೧ (ಕ್ರಮಾಂಕ–೩)
Volume - 1 (No. 3)

(೨ನೇ ಫೆಬ್ರವರಿ ೨೦೦೭)
(2nd February 2007)

ಭಾಗ–೨
PART-II

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ
ಐದನೆಯ ಅಧಿವೇಶನ

ಅಧ್ಯಕ್ಷರು
ಶ್ರೀ ಕೃಷ್ಣ

ಉಪಾಧ್ಯಕ್ಷರು
ಶ್ರೀ ಎನ್.ವೈ. ಗೋಪಾಲಕೃಷ್ಣ

ಕರ್ನಾಟಕ ವಿಧಾನಸಭೆ
ವಿಷಯಾನುಕ್ರಮಣಿಕೆ
ಸಂಪುಟ–೧ (ಕ್ರಮಾಂಕ–3)
(2ನೇ ಫೆಬ್ರವರಿ 2007)

ಪುಟ ಸಂಖ್ಯೆ

ಶುಕ್ರವಾರ, ದಿನಾಂಕ 2ನೇ ಫೆಬ್ರವರಿ 2007

1 ನೂತನ ಸಚಿವರ ಪರಿಚಯ 409
– ಶ್ರೀ ಬಿ ಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

2 ಪ್ರಶ್ನೋತ್ತರ 409–516
ಆ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರ
– ಶ್ರೀ ಎಸ್ ಎಸ್ ಪಾಟೀಲ್
– ಶ್ರೀ ಬಸವರಾಜ ರಾಯರೆಡ್ಡಿಯವರ ಪರವಾಗಿ
– ಶ್ರೀ ಸಿದ್ದು ಸಾವದಿ
– ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ
– ಶ್ರೀ ಕೆ ಜಯಪ್ರಕಾಶ್ ಹೆಗ್ಡೆ
– ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್
– ಶ್ರೀ ವಾಟಾಳ್ ನಾಗರಾಜ್
– ಶ್ರೀ ಬಾದರ್ಲಿ ಹಂಪನಗೌಡ
– ಶ್ರೀ ಆರ್ ಧ್ರುವನಾರಾಯಣ
– ಶ್ರೀ ಎಸ್ ಬಾಲರಾಜ್
– ಶ್ರೀಮತಿ ಶಕುಂತಲಾ ಶೆಟ್ಟಿ
– ಶ್ರೀ ಎಸ್ ಎಸ್ ಪಾಟೀಲ್
– ಶ್ರೀ ಡಿ ಆರ್ ಪಾಟೀಲ್
– ಶ್ರೀ ಕುಮಾರ್ ಬಂಗಾರಪ್ಪ

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು
(ಅನುಬಂಧ–1)

ಪುಟ ಸಂಖ್ಯೆ

3 ಸಭೆಯ ಮುಂದಿಡಲಾದ ಕಾಗದ ಪತ್ರಗಳು 516–528

4 ವರದಿಗಳನ್ನೊಪ್ಪಿಸುವುದು 528–530

5 ನಿಲುವಳಿ ಸೂಚನೆ ಅನುಮತಿ ಕೋರಿ ಅರ್ಜಿ 530–537
ವಿಷಯ ಬೆಂಗಳೂರು ನಗರದಲ್ಲಿ ನಡೆದ ಕೋಮು ಗಲಭೆ ಬಗ್ಗೆ
– ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು
– ಶ್ರೀ ಆರ್ ರೋಷನ್ ಬೇಗ್
– ಶ್ರೀ ಕೆ ಆರ್ ರಮೇಶ್ ಕುಮಾರ್
– ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)

6 ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ 537–538
– ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಸ್ತಾವದ ಮಂಡನೆ)
– ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ (ಪ್ರಸ್ತಾವದ ಅನುಮೋದನೆ)

ಪ್ರಸ್ತಾವನೆ ಮಂಡಿಸಲ್ಪಟ್ಟಿತು

7 ಅಧ್ಯಕ್ಷರ ಅಪ್ಪಣೆ ಮೇರೆಗೆ 538–547
ಅ) ವಿಷಯ ಜನವರಿ 2007ನೇ ದಿನಾಂಕ 13 ರಿಂದ 22 ರವರೆಗೆ ಸೊರಬದಲ್ಲಿ ನಡೆದ ಎನ್ ಎಸ್ ಎಸ್ ಕ್ಯಾಂಪ್ ಸಂಬಂಧದಲ್ಲಿ ಸೊರಬ ಸರ್ಕಲ್ ಇನ್‌ಸ್ಪೆಕ್ಟರ್ ರವರ ಅಸಭ್ಯ ವರ್ತನೆ, ದಬ್ಬಾಳಿಕೆ ಬಗ್ಗೆ
– ಶ್ರೀ ಕುಮಾರ್ ಬಂಗಾರಪ್ಪ

ಆ) ವಿಷಯ ಶ್ರೀಮತಿ ಈಸ್ತರ್ ಪ್ರಸನ್ನ ಅವರಿಗೆ ಏಕಲವ್ಯ ಬಿರುದನ್ನು ನೀಡುವ ಬಗ್ಗೆ
– ಶ್ರೀ ಐವಾನ್ ನಿಗ್ಲಿ
– ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಸಂಸದೀಯ ವ್ಯವಹಾರಗಳ ಸಚಿವರು)

ಪುಟ ಸಂಖ್ಯೆ

ಇ) **ವಿಷಯ** Zero Hour Mentioning ಬಗ್ಗೆ
– ಶ್ರೀ ಕೆ ಆರ್ ರಮೇಶ್ ಕುಮಾರ್
– ಶ್ರೀ ಕೆ ಜಯಪ್ರಕಾಶ್ ಹೆಗ್ಡೆ,
– ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಸಂಸದೀಯ ವ್ಯವಹಾರಗಳ ಸಚಿವರು)

ಈ) **ವಿಷಯ** ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾಡಾನೆಗಳ ಹಾವಳಿ ಬಗ್ಗೆ
– ಶ್ರೀ ಆರ್ ಧ್ರುವನಾರಾಯಣ
– ಶ್ರೀ ಸಿ ಚನ್ನಿಗಪ್ಪ (ಅರಣ್ಯ ಸಚಿವರು)

8 ನಿಯಮ 69ರ ಮೇರೆಗೆ ಚರ್ಚೆ 547–590

ವಿಷಯ ರಾಜ್ಯದ 128 ತಾಲ್ಲೂಕುಗಳಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಬಗ್ಗೆ
– ಶ್ರೀ ಜೆ ಸಿ ಮಾಧುಸ್ವಾಮಿ
– ಶ್ರೀ ಮಲ್ಲಿಕಾರ್ಜುನ ಖರ್ಗೆ

9 ಅಧ್ಯಕ್ಷರ ಅಪ್ಪಣೆ ಮೇರೆಗೆ 590–820

ವಿಷಯ ಅ) ಕಾವೇರಿ ವಿವಾದದ ಬಗ್ಗೆ ಫೆಬ್ರವರಿ 5 ರಂದು ಹೊರಬೀಳಲಿರುವ ತೀರ್ಪಿನ ಬಗ್ಗೆ
– ಶ್ರೀ ವಾಟಾಳ್ ನಾಗರಾಜ್

ವಿಷಯ ಆ) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ರವರ ಮಗನಾದ ಶ್ರೀ ವಿಜಯಕುಮಾರ್ ರವರ ಮೇಲೆ ನಡೆದ ಹಲ್ಲೆ ಹಾಗೂ ಅವರು ತೀರಿಕೊಂಡಿರುವ ಬಗ್ಗೆ
– ಶ್ರೀ ಮಲ್ಲಿಕಾರ್ಜುನ ಖರ್ಗೆ
– ಶ್ರೀಎಂ ಪಿ ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)

* * * * *

ಕರ್ನಾಟಕ ವಿಧಾನಸಭೆ
ಶುಕ್ರವಾರ 2ನೇ ಫೆಬ್ರವರಿ 2007ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು
ಅಧ್ಯಕ್ಷರು (ಶ್ರೀ ಕೃಷ್ಣ ರವರು) ಅಧ್ಯಕ್ಷ
ಪೀಠವನ್ನು ಅಲಂಕರಿಸಿದರು

1) ನೂತನ ಸಚಿವರ ಪರಿಚಯ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತಿಗಳು) ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಸಚಿವರುಗಳಾಗಿ ಪಮಾಣವಚನ ಸ್ವೀಕಾರ ಮಾಡಿರುವವರ ಬಗ್ಗೆ ಸದನಕ್ಕೆ ತಿಳಿಸಬಯಸುತ್ತೇನೆ ಹಾಗೂ ಆ ಮೂಲಕ ಸದನಕ್ಕೆ ಪರಿಚಯಿಸುತ್ತೇನೆ ನಮ್ಮ ಬಿಜಾಪುರ ಶಾಸಕರಾದಂಥ ಮಾನ್ಯ ಅಪ್ಪು ಪಟ್ಟಣಶೆಟ್ಟಿಯವರು ಸಚಿವರಾಗಿ ಪಮಾಣವಚನ ಸ್ವೀಕಾರ ಮಾಡಿದ್ದು ಅವರು ಜವಳಿ ಖಾತೆಯನ್ನು ನೋಡಿಕೊಳ್ಳುತ್ತಾರೆ ಇವರಲ್ಲದೇ ತುಮಕೂರು ಶಾಸಕರಾದಂಥ ಮಾನ್ಯ ಶಿವಣ್ಣನವರು ಕೂಡ ಸಚಿವರಾಗಿ ಪಮಾಣವಚನ ಸ್ವೀಕಾರ ಮಾಡಿದ್ದು ರೇಷ್ಮೆ ಇಲಾಖೆಯನ್ನು ನೋಡಿಕೊಳ್ಳುತ್ತಾರೆರಂದು ಸದನಕ್ಕೆ ತಿಳಿಸಿ ಪರಿಚಯಿಸುತ್ತಿದ್ದೇನೆ

ಶೀ ಜಿವಿ ಶೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ನಮ್ಮದೊಂದು ನಿಲುವಳಿ ಸೂಚನೆ ಇತ್ತು

2) ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು ಈಗ ಮೊದಲು ಪಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ ಅದು ಮೊದಲು ಆಗಲಿ ಮೊದಲು ಮಾನ್ಯ ಬಸವರಾಜ ರಾಯರೆಡ್ಡಿಯವರ ಪಶ್ನೆಯನ್ನು ಅವರ ಬದಲು ಮಾನ್ಯ ಎಸ್ ಎಸ್ ಪಾಟೀಲ್‌ರವರು ಕೇಳುತ್ತಾರೆ

ಆತ್ಮಹತ್ಯೆಯಾದ ರೈತರ ಕುಟುಂಬಗಳಿಗೆ ಪರಿಹಾರ ಮತ್ತು ಪುನರ್‌ವಸತಿ ಕಲ್ಪಿಸುವುದು

43(226) ಶ್ರೀ ಬಸವರಾಜ ರಾಯ ರೆಡ್ಡಿ (ಯಲಬುರ್ಗಾ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 2006 ಜನವರಿಯಿಂದ ಡಿಸೆಂಬರ್ 2006ರ ವರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಸಂಖ್ಯೆ ಎಷ್ಟು , (ಜಿಲ್ಲಾವಾರು ಮಾಹಿತಿ ನೀಡುವುದು) ,

ಆ) ಈ ರೈತ ಕುಟುಂಬಗಳಿಗೆ ಸರ್ಕಾರದಿಂದ ಪರಿಹಾರ ಧನವನ್ನು ಮಂಜೂರು ಮಾಡಲಾಗಿದೆಯೇ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು) ,

ಇ) ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳ ಪುನರ್ ವಸತಿಗಾಗಿ ತೆಗೆದುಕೊಂಡ ಕ್ರಮವೇನು ?

ಶ್ರೀ ಬಂಡೆಪ್ಪಕಾಶಂಪುರ ಪರವಾಗಿ ಶ್ರೀ ಎಸ್ ಎಸ್ ಪಾಟೀಲ್ (ಮಾನ್ಯ ಕೃಷಿ ಸಚಿವರು)

ಅ) ದಿನಾಂಕ 11 2006 ರಿಂದ 31–12–2006 ಅವಧಿಯಲ್ಲಿ 217 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿದ್ದು ಇದರ ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಆ) ಇದರ ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲೇ ನೀಡಲಾಗಿದೆ

ಇ) ಸಾಲದ ಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ತಲಾ 1 ಲಕ್ಷ ರೂ ಗಳಂತೆ ಪರಿಹಾರವನ್ನು ನೀಡಲಾಗುತ್ತಿದೆ ಇದರ ಜೊತೆಗೆ ಅತಿ ಹೆಚ್ಚು ಆತ್ಮಹತ್ಯೆ ಪ್ರಕರಣಗಳು ವರದಿಯಾಗಿರುವ ರಾಜ್ಯದ 6 ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಬೆಳಗಾಂ ಹಾಗೂ ಚಿತ್ರದುರ್ಗ ಜಿಲ್ಲೆಗಳ ರೈತರ ಪುನರ್ ವಸತಿಗೆ ಪ್ರಧಾನ ಮಂತ್ರಿಯವರ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 50 ಲಕ್ಷ ರೂ ಗಳನ್ನು ನೇರವಾಗಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು, ಇದರಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದ ಸದಸ್ಯರ ವಿದ್ಯಾಬ್ಯಾಸ ಹಾಗೂ ವೈದ್ಯಕೀಯ ವೆಚ್ಚಗಳಿಗೆ ತಲಾ 10 ಸಾವಿರ ರೂ ಗಳನ್ನು ನೀಡಲಾಗುತ್ತಿದೆ

ANNEXURE-I

District wise information on reported & accepted cases of Farmer sulcide in Karnataka for the period January 2006 to December 2006

Sl No	Name of the District	No of cases reported	No of cases declared eligible & compensation paid	No of cases under inquiry
1	Bagalkote	7	3	0
2	Bangalore Rural	4	5	0
3	Bangalore Urban	0	0	0
4	Bidar	16	7	3
5	Hassan	21	12	2
6	Chamarajanagar	2	2	0
7	Haveri	3	0	3
8	Uttara Kannada	5	3	1
9	Dharwad	0	0	0
10	Koppal	17	5	2

11	Mandya	0	0	0
12	Chickmagalore	19	5	12
13	Raichur	3	4	0
14	Tumkur	11	3	6
15	Shimoga	15	5	0
16	Kolar	3	3	1
17	Mysore	0	0	0
18	Udupi	0	0	0
19	Kodagu	12	0	10
20	Belgaum	23	15	2
21	Davangere	9	1	1
22	Bellary	3	2	1
23	Chitradurga	11	10	1
24	Gulbarga	9	0	0
25	Bijapur	11	7	1
26	D Kannada	4	0	0
27	Gadag	9	7	1
	Total	**217**	**99**	**47**

ಶೀ ಎಸ್ ಎಸ್ ಪಾಟೀಲ್ –ಮಾನ್ಯ ಅಧ್ಯಕ್ಷರೆ, ಉತ್ತರವನ್ನೇನೋ ಒದಗಿಸಿದ್ದಾರೆ ಇದರಲ್ಲಿ ಎಷ್ಟು ಜನ ರೈತರು ಸತ್ತಿದ್ದಾರೆ ಎಂದು ಕೇಳಿರುವುದಕ್ಕೆ ಅಂಕಿಸಂಖ್ಯೆಯನ್ನು ಕೊಟ್ಟಿದ್ದಾರೆ ಆದರೆ ದುರ್ದೈವದಿಂದ ಯಾವುದೋ 6 ಜಿಲ್ಲೆಗಳನ್ನು ಮಾತ್ರ ತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರ ಹೇಳಿರುವ ಕಾರಣ ಆ 6 ಜಿಲ್ಲೆಗಳನ್ನು ಮಾತ್ರ ಸೇರಿಸುತ್ತೇವೆ ಎಂದು ಹೇಳಿದ್ದಾರೆ ಮಾನ್ಯ ಅಧ್ಯಕ್ಷರೆ, ಇವರು ಈ ರೀತಿ ಮಾಡಿರುವುದರಿಂದಲೇ ಈಗ ನನ್ನ ತಾಲ್ಲೂಕಿನಲ್ಲಿಯೇ ಸುಮಾರು 3 ಜನ ರೈತರು ಸತ್ತರು ಏಕೆಂದರೆ ಎಲ್ಲಿ ರೈತರು ಹೆಚ್ಚು ಸಾಯುತ್ತಾರೆ ಅಲ್ಲಿ ಪ್ಯಾಕೇಜ್‌ನ್ನು ನೀವು ಮಾಡುತ್ತೀರಿ ಇದರಲ್ಲಿ ಬಹಳ ದೊಡ್ಡ ತಪ್ಪಾಗಿದೆ ನಿಜವಾಗಿಯೂ ಎಲ್ಲಿ ಬರಗಾಲವಿದೆ, ಎಲ್ಲಿ ತೊಂದರೆ ಇದೆ, ಎಲ್ಲಿ ರೈತರಿಗೆ ಹೆಚ್ಚು ಕಷ್ಟವಾಗಿದೆ ಅವರಿಗೆ ಮಾತ್ರ ಪ್ಯಾಕೇಜ್‌ನ್ನು ಮಾಡಬೇಕು ಕೇಂದ್ರ ಸರ್ಕಾರ ಈ ರೀತಿ ಮಾಡಿದೆ ಎಂದು ಹೇಳಿ ನೀವೂ ಕೂಡ ಅದೇ ರೀತಿ ಮಾಡಿದರೆ ರೈತರಿಗೆ ಪ್ರೋತ್ಸಾಹ ಎಲ್ಲಿ ಕೊಟ್ಟಂತಾಗುತ್ತದೆ ಎಲ್ಲಿ ಬರಗಾಲವಿದೆ ಅಲ್ಲಿಗೆ ಅವರು ಪ್ಯಾಕೇಜ್‌ನ್ನು ಮಾಡುತ್ತಿಲ್ಲ ಆ ಕಾರಣದಿಂದ ಎಲ್ಲಿ ಬರಗಾಲವಿದೆ, ಎಲ್ಲಿ ಮೊದಲಿನಿಂದಲೂ ಹೆಚ್ಚು ತೊಂದರೆಯಿಂದ ರೈತರು ಕಷ್ಟದಲ್ಲಿದ್ದಾರೆ, ಅಲ್ಲಿಗೆಲ್ಲಾ ಪ್ಯಾಕೇಜ್‌ನ್ನು ಮಾಡುತ್ತೀರಾ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ

ಶ್ರೀ ಬಂಡೆಪ್ಪ ಕಾಶ್ಯಂಪೂರ್(ಕೃಷಿ ಸಚಿವರು) – ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಪ್ಯಾಕೇಜ್ ಬಗ್ಗೆ ಹೇಳಿದ್ದಾರೆ, ಅದನ್ನು ನಾವು ಮಾಡಿದ್ದಲ್ಲ ಇದನ್ನು ಕೇಂದ್ರ ಸರ್ಕಾರದವರು ಮಾಡಿದ್ದು ಆ ಮೀಟಿಂಗ್‌ಗೆ ನಾನು ಹೋಗಿದ್ದಾಗ ಕೇಂದ್ರ ಸರ್ಕಾರದ ಕೃಷಿ ಸಚಿವರಾದ ಮಾನ್ಯ ಶರದ್ ಪವಾರ್ ಜೊತೆ ಮಾತನಾಡಿದ್ದೇನೆ ಅವರ ಜೊತೆ ಮಾತನಾಡುವಾಗ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ರೈತರ ಆತ್ಮಹತ್ಯೆ ಪ್ರಕರಣಗಳು ನಡೆದಿವೆ, ಹೀಗಿರುವಾಗ ನೀವು ಕೇವಲ 6 ಜಿಲ್ಲೆಗಳನ್ನು ಮಾತ್ರ ಯಾವ ರೀತಿಯಲ್ಲಿ ಪ್ಯಾಕೇಜ್‌ಗೆ ತೆಗೆದುಕೊಂಡಿರಿ ಎಂದು ಕೇಳಿದಾಗ ಅವರು 2001 ರ ಪ್ರಕರಣಗಳನ್ನು ತೆಗೆದುಕೊಂಡು, ಇತ್ತೀಚೆಗೆ ಆದಂಥ ಪ್ರಕರಣಗಳನ್ನು ಕೂಡ ನೋಡಿ, ಆ ಒಂದು ನಿಟ್ಟಿನಲ್ಲಿ ಒಂದೊಂದು ಜಿಲ್ಲೆಯಲ್ಲಿ ಮಿನಿಮಮ್ 10 ರೈತರ ಆತ್ಮಹತ್ಯೆ ಆಗಿರುವಂಥ ಕೇಸ್‌ಗಳನ್ನು ತೆಗೆದುಕೊಂಡು, ಈ 6 ಜಿಲ್ಲೆಗಳನ್ನು ಸೆಲೆಕ್ಟ್ ಮಾಡಿ, ಈ ಒಂದು ವಿಶೇಷ ಪ್ಯಾಕೇಜ್‌ನ್ನು ಕೇಂದ್ರ ಸರ್ಕಾರದವರು ಮಾಡಿಕೊಟ್ಟಿದ್ದಾರೆ ಆ ಪ್ಯಾಕೇಜ್‌ನಲ್ಲಿ ತಮಗೆ ಹೇಳಬೇಕೆಂದರೆ ನಾವು ಆರು ಜಿಲ್ಲೆಗಳಿಗಿಂತ ಹೆಚ್ಚಿಗೆ ಮಾಡಬೇಕೆಂದು ಹೇಳಿದ್ದೇವೆ ನಮ್ಮ ಬೀದರ್‌ನ ಒಂದು ಭಾಗಕ್ಕೆ ಖುದ್ದಾಗಿ ಸೋನಿಯಾಗಾಂಧಿಯವರೇ ಭೇಟಿ ಮಾಡಿದಂಥ ಸನ್ನಿವೇಶದ ಬಗ್ಗೆ ಕೂಡ ನಾನು ಕೇಂದ್ರ ಕೃಷಿ ಸಚಿವರಿಗೆ ಹೇಳಿದ್ದೇನೆ ಇದೊಂದೇ ಅಲ್ಲ ಉತ್ತರ ಕರ್ನಾಟಕದ ಹಲವಾರು ಭಾಗಗಳಲ್ಲಿ ಬಹಳಷ್ಟು ಜಿಲ್ಲೆಗಳಲ್ಲಿ ರೈತರ ಆತ್ಮಹತ್ಯೆ ಆಗಿದೆ ಮತ್ತು ಬರಗಾಲವಿದೆ ಎಂದು ತಿಳಿಸಿದರೂ ಕೂಡ ಅವರು ಅವರದ್ದೇ ಆದಂಥ ಒಂದು ಕ್ಯಾಲುಕುಲೇಶನ್ ಮಾಡಿ ಈ 6 ಜಿಲ್ಲೆಗಳನ್ನು ಸೆಲೆಕ್ಟ್ ಮಾಡಿದರು ಈ 6 ಜಿಲ್ಲೆಗಳನ್ನು ಸೆಲೆಕ್ಟ್ ಮಾಡಿದಾಗ ನಾವು ನಮ್ಮ ರಾಜ್ಯ ಸರ್ಕಾರದ ಪರವಾಗಿ ಒಂದು ಪ್ಯಾಕೇಜ್‌ಗೋಸ್ಕರ 6903 ಕೋಟಿ ರೂಪಾಯಿಗಳನ್ನು ಕೇಳಿದ್ದೆವು ಆದರೆ ಅವರು 2689 ಕೋಟಿ ರೂಪಾಯಿಗಳನ್ನು ಹಲವಾರು ಇಲಾಖೆಗಳಿಗೆ ಹಲವಾರು ಯೋಜನೆಗಳಡಿಯಲ್ಲಿ ಸ್ಯಾಂಕ್ಷನ್ ಮಾಡಿಕೊಟ್ಟಿದ್ದಾರೆ ನಿನ್ನೆಯ ದಿವಸ ಕೂಡ ಕೆಲವಾರು ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡುತ್ತಾ ಪ್ರಧಾನ ಮಂತ್ರಿಗಳ ಪ್ಯಾಕೇಜ್‌ನಲ್ಲಿ ಹಿಂದೆ ಬಹಳಷ್ಟು ದುಡ್ಡು ಬಂದಿತ್ತಲ್ಲಾ ಅದು ಏನಾಗದೆ ಎಂದು ಕೇಳಿದರು ಇವೊತ್ತು ಇದರಲ್ಲಿ ಭಾರತ ಸರ್ಕಾರದ ಸ್ಯಾಂಕ್ಷನ್ ಗ್ರಾಂಟ್ 1568 ಕೋಟಿ ರೂಪಾಯಿಗಳು ಇದಲ್ಲದೇ ಲೋನ್ ಮುಖಾಂತರ ಕೇಂದ್ರ ಸರ್ಕಾರದವರು 1121 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ ಇದನ್ನೂ ಕೂಡ ಮೂರು ವರ್ಷಕ್ಕೆ ಕೊಡುತ್ತಾರೆ ಈ ಹಣವನ್ನು ಒಂದೇ ವರ್ಷದಲ್ಲಿ ಕೊಡುವುದಲ್ಲ ಈ ಮೂರು ವರ್ಷದ್ದನ್ನೂ ನಾವು ಲೆಕ್ಕ ಹಾಕಿದರೆ, ಅಂದರೆ ಗ್ರಾಂಟ್ ಮತ್ತು ಲೋನ್ ಮೊತ್ತಗಳನ್ನು ಸೇರಿಸಿ ನಾವು ಲೆಕ್ಕ ಹಾಕಿದರೆ ಸುಮಾರು 2699 ಕೋಟಿ

ರೂಪಾಯಿಗಳಾಗುತ್ತದೆ ಇದು ಮೂರು ವರ್ಷಕ್ಕೆ ಸೇರಿರುವುದರಿಂದ ಆ ಪ್ರಕಾರ ಇದನ್ನು ನಾವು ಡಿವೈಡ್ ಮಾಡಬೇಕು ನನ್ನ ಇಲಾಖೆಯಲ್ಲಿಯೇ ತೆಗೆದುಕೊಂಡರೆ, ಯಾವ ರೀತಿ ಕೆಲಸವಾಗುತ್ತಿದೆ ಎಂದು ಹೇಳುತ್ತೇನೆ ಇವೊತ್ತು ಡಿಪ್ ಇರಿಗೇಶನ್‌ನಲ್ಲಿ ಕೇವಲ 8 ಕೋಟಿ ರೂಪಾಯಿಗಳಷ್ಟೇ ನಮಗೆ ಬಂದಿರುವುದು ಇದಲ್ಲದೇ ಹಲವಾರು ಇಲಾಖೆಗಳಲ್ಲಿ ಸ್ವಲ್ಪ ಸ್ವಲ್ಪ ದುಡ್ಡು ಬಂದಿದೆ ಹೀಗಾಗಿ ಕೇವಲ 6 ಜಿಲ್ಲೆಗಳನಲ್ಲದೇ ಇನ್ನೂ 13 ಜಿಲ್ಲೆಗಳನ್ನೂ ಪ್ಯಾಕೇಜ್‌ನಲ್ಲಿ ಸೇರಿಸಬೇಕೆಂದು ಮಾನ್ಯ ಮುಖ್ಯಮಂತಿಗಳ ನೇತೃತ್ವದಲ್ಲಿ ನಿಯೋಗ ಹೋಗಿ ಕೇಂದ್ರ ಸರ್ಕಾರದ ಸಚಿವರಿಗೆ ಈಗಾಗಲೇ ನಾವು ಮನವಿಯನ್ನು ಕೊಟ್ಟಿದ್ದೇವೆ ಅವರು ಅದಕ್ಕೆ ಮೊದಲನೆಯ ಹಂತದಲ್ಲಿ 6 ಜಿಲ್ಲೆಗಳನ್ನು ತೆಗೆದುಕೊಳ್ಳುತ್ತಿದ್ದೇವೆ, ಮುಂದಿನ ದಿನಗಳಲ್ಲಿ ನಾವು ನಿಮ್ಮ ಮನವಿಯನ್ನು ಕನ್ಸಿಡರ್ ಮಾಡುತ್ತೇವೆ ಎನ್ನುವ ನಿಟ್ಟಿನಲ್ಲಿ ಹೇಳಿದ್ದಾರೆ

ಶೀ ಅರಗ ಜ್ಞಾನೇಂದ – ಮಾನ್ಯ ಅಧ್ಯಕ್ಷರೆ, ಸರ್ಕಾರ ಒದಗಿಸಿರುವ ಲಿಖಿತ ಉತ್ತರದಲ್ಲಿ ಒಂದು ತಪ್ಪಾಗಿದೆ ದಯವಿಟ್ಟು ತಿದ್ದುಪಡಿ ಮಾಡಿಕೊಳ್ಳಬೇಕು ರಿಪೋರ್ಟ್ ಆದಂಥ ಕೇಸ್‌ಗಿಂತ ಪರಿಹಾರ ಡಿಕ್ಲೇರ್ ಮಾಡಿದ ಕೇಸ್ ಜಾಸ್ತಿ ಇದೆ ನೀವು ಬೇಕಾದರೆ ನೋಡಬಹುದು ಬೆಂಗಳೂರು ರೂರಲ್‌ನಲ್ಲಿ 4 ಕೇಸ್ ರಿಪೋರ್ಟ್ ಆಗಿದೆ ಆದರೆ 5 ಕೇಸ್‌ಗೆ ಇವರು ಪರಿಹಾರ ಕೊಟ್ಟಿದ್ದೇವೆಂದು ಉತ್ತರದಲ್ಲಿ ತೋರಿಸಿದ್ದಾರೆ ಅದನ್ನು ಯಾರಿಗೆ ಕೊಟ್ಟಿದ್ದಾರೆ ಯಾವ ರೀತಿ ಕೊಟ್ಟಿದ್ದಾರೆ ಎಂಬುದನ್ನು ನೋಡಬೇಕು

ರಾಯಚೂರಿನಲ್ಲಿ ಮೂರು ಕೇಸ್ ರಿಪೋರ್ಟ್ ಆಗಿದೆ, ನಾಲ್ಕು ಕೇಸ್‌ಗೆ compensation ಕೊಟ್ಟಿದ್ದೇವೆ ಎಂದು ಕೊಟ್ಟಿದ್ದಾರೆ ಅದು ತಪ್ಪಾಗಿದ್ದರೆ ಮಾನ್ಯ ಸಚಿವರು ತಿದ್ದುಪಡಿ ಮಾಡಿಕೊಳ್ಳಬೇಕು ಇಲ್ಲದಿದ್ದರೆ ತಪ್ಪು ಮಾಹಿತಿ ದಾಖಲೆಗೆ ಹೋಗುತ್ತದೆ ಅಂದರೆ ಸಾಯದೆ ಇದ್ದವರಿಗೆಲ್ಲ ಪರಿಹಾರ ಕೊಟ್ಟಿದ್ದೇವೆ ಎಂದು ಆಗುತ್ತದೆ

ಶೀ ಎಸ್ ಎಸ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಆ ವಿಚಾರವನ್ನು ನಾನೆ ಕೇಳಬೇಕೆಂದು ಇದ್ದೆ, ಅವರೆ ಕೇಳಿದ್ದಾರೆ ಇಲ್ಲಿ ಉತ್ತರದಲ್ಲಿ ಕೂಡ ತಪ್ಪಾಗಿದೆ ಮೂರು ಮಂದಿ ರೈತರು ಸತ್ತಿದ್ದಾರೆ ಎಂದು ಇದ್ದರೆ ನಾಲ್ಕು ಮಂದಿಗೆ ಕೊಡುವುದು ನಾಲ್ಕು ಮಂದಿ ರೈತರು ಸತ್ತಿದ್ದಾರೆಂದರೆ ಐದು ಮಂದಿಗೆ ಕೊಟ್ಟಿದ್ದಾರೆ ಇನ್ನು ಕೆಲವು ಕಡೆ ಎಂಟು, ಹತ್ತು, ಹದಿನೈದು ಮಂದಿ ಸತ್ತರೂ ಕೂಡ ಪರಿಹಾರ ಕೊಟ್ಟಿರುವುದು ಮೂರು ಅಥವಾ ನಾಲ್ಕು ಮಂದಿಗೆ ಮಾತ್ರ ಇದಕ್ಕೆ ಒಂದು Enquiry Committee ಮಾಡಿದ್ದಾರೆ ರೈತ ಯಾರೂ ಕೂಡ ಯಾವುದೋ ಒಂದು ಕಷ್ಟಕ್ಕೆ ಸಾಲ ಮಾಡಿದ್ದೇನೆಂದು ಸುಳ್ಳು ಸುಳ್ಳು ಹೇಳಿ ಸರ್ಕಾರದ ಹಣ ತೆಗೆದುಕೊಂಡು ಸಾಯುವುದಕ್ಕೆ

ಹೋಗುವುದಿಲ್ಲ ನಾನು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ, ಮಾನ್ಯ ಜೆ ಹೆಚ್ ಪಟೇಲ್ ರವರು ಹಾಗೂ ಮಾನ್ಯ ದೇವೇಗೌಡರು ಇದ್ದಾಗ ನಾವು ಹಿಂದೆ ರೈತ ಸತ್ತ ತಕ್ಷಣ ಅವರ ಮನೆಗೆ ಹೋಗಿ ಜಿಲ್ಲಾ ಉಸ್ತುವಾರಿಯಿಂದ ಒಂದು ಲಕ್ಷ ರೂಪಾಯಿ ಪರಿಹಾರ ಕೊಟ್ಟು ಬರುತ್ತಿದ್ದೆವು ಆದರೆ ದುರ್ದೈವದಿಂದ, ಇವತ್ತು enquire ಮಾಡಿ ಆರು ತಿಂಗಳಿಂದ ಒಂದು ವರ್ಷ, ಎರಡು ವರ್ಷದವರೆಗೆ ನಿಂತಿದೆ ಆಮೇಲೆ ಅವನದು ಆ ಸಾಲ ಇಲ್ಲ, ಈ ಸಾಲ ಇಲ್ಲ, ಅವನು ಒಕ್ಕಲುತನಕ್ಕೆ ಸಾಲ ತೆಗೆದುಕೊಂಡಿಲ್ಲವೆಂದು ಏನೇನೋ ನೆವ ಹೇಳಿಕೊಂಡು ನಮ್ಮ ತಾಲ್ಲೂಕಿನಲ್ಲಿ ಎಂಟು, ಹತ್ತು ಮಂದಿ ಸತ್ತರೂ ಕೂಡ ಮೂರು, ನಾಲ್ಕು ಮಂದಿಗೆ ಮಾತ್ರ ಪರಿಹಾರ ಕೊಡುತ್ತಿದ್ದೀರಿ ಆ ಕಾರಣದಿಂದ ರೈತ ಸತ್ತ ಮೇಲೆ enquire ಮಾಡುವುದೇನಿದೆ ಅದನ್ನು ತೆಗೆದು ಹಾಕಿ ತಕ್ಷಣ ಅವನ ಮನೆಗೆ ಹೋಗಿ, ಈಗ ಏನು ಒಂದು ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳಿದ್ದೀರಿ, ಅದನ್ನು ಎರಡು ಲಕ್ಷ ರೂಪಾಯಿ ಮಾಡುತ್ತೀರಾ ಎನ್ನುವುದನ್ನು ಹೇಳಬೇಕು ನಂತರ ಅವರ ಮನೆಯವರಿಗೆ ಇರುವಂತಹ ಸಾಲವನ್ನೆಲ್ಲ ತಕ್ಷಣ ತುಂಬಬೇಕು ಸಾಲ ಎಂದರೆ ಕೇವಲ ಬ್ಯಾಂಕಿನಿಂದ ತೆಗೆದುಕೊಂಡಿರುವುದನ್ನು ಮಾತ್ರ ನೋಡುತ್ತೀರಿ ಇವತ್ತು ಅವರು ಕೈಸಾಲ ಮಾಡಿದ್ದಾರೆ, ಅದರಿಂದ ಕೂಡ ಅವರು ಸಾಯುತ್ತಿದ್ದಾರೆ ಈಗ ಬ್ಯಾಂಕ್‌ನಲ್ಲಿ ಸಾಲ ಹುಟ್ಟುವುದಿಲ್ಲ ನಾಲ್ಕು ರೂಪಾಯಿ ಐದು ರೂಪಾಯಿ ಬಡ್ಡಿಯಂತೆ ಕೈಸಾಲ ಮಾಡಿ ಅದಕ್ಕೆ ಹೆಚ್ಚು ಜನ ರೈತರು ಸಾಯುತ್ತಿರುವುದು ಅದನ್ನು ಕೂಡ ಯಾವ ರೀತಿಯಾಗಿ ನಿಲ್ಲಿಸುತ್ತೀರಿ? ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು

ಶೀ ಅಮರೇಗೌಡ ಪಾಟೀಲ್ ಬಯ್ಯಾಪುರ್ ಸಾಲವನ್ನು renewal ಮಾಡಿಕೊಂಡಿದ್ದರೂ ಕೂಡ ಪರಿಹಾರ ಕೊಡುವುದಕ್ಕೆ ಬರುವುದಿಲ್ಲವೆಂದು ಅಧಿಕಾರಿಗಳು application reject ಮಾಡುತ್ತಿದ್ದಾರೆ ಇದು ಏನಾಗಿದೆ ಎಂದರೆ ಸರ್ಕಾರ ಕೊಡುವುದಕ್ಕೆ ತಯಾರಾಗಿದ್ದರೂ ಕೂಡ ಅಧಿಕಾರಿಗಳು ತಮ್ಮದೆ ಆದಂತಹ ನೀತಿಯನ್ನು ರೂಪಿಸಿಕೊಂಡು ರೈತರಿಗೆ ಅನ್ಯಾಯ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ ಅದನ್ನು ಕೂಡಲೇ ಸರಿಪಡಿಸತಕ್ಕಂಥ ಕೆಲಸವಾಗಬೇಕು

ಶೀ ಬಿ ಶಿವರಾಂ ಮಾನ್ಯ ಅಧ್ಯಕ್ಷರೆ, ಹಾಸನ ಆತ್ಮಹತ್ಯೆ ಪ್ರಕರಣದಲ್ಲಿ ಎರಡನೆ ಸ್ಥಾನಕ್ಕೆ ಬಂದಿದೆ 21 ಪ್ರಕರಣಗಳಲ್ಲಿ 12 ಪ್ರಕರಣಕ್ಕೆ ತಾವು ಪರಿಹಾರವನ್ನು ಕೊಟ್ಟಿದ್ದೀರಿ ಇನ್ನು ಎರಡು ಮಾತ್ರ ಬಾಕಿ ಇದೆ ಎಂದು ಹೇಳಿದ್ದೀರಿ ಉಳಿದ ಪ್ರಕರಣದ ಬಗ್ಗೆ ಏನಾಗಿದೆ ಎನ್ನುವುದು ಸ್ಪಷ್ಟವಾಗಿಲ್ಲ ಈಗ ನನ್ನ ಸ್ನೇಹಿತರು, Prime Minister package ನಲ್ಲಿ ಬಡ್ಡಿ ಮನ್ನಾ ಎಂದು ಬಂದಿದೆ ಇವತ್ತಿನವರೆಗೂ ಕೂಡ ಜಿಲ್ಲೆಗಳಲ್ಲಿ ಬ್ಯಾಂಕ್‌ನವರು

ಸಮರ್ಪಕವಾದಂತಹ ಉತ್ತರಗಳನ್ನು ಅಸಲನ್ನು ಕಟ್ಟುವುದಕ್ಕೆ ಕೊಡುತ್ತಿಲ್ಲ ಅವರು ಏನು ಹೇಳುತ್ತಾರೆಂದರೆ ನಾವು clarification ಕೇಳಿದ್ದೇವೆ, State level nodal bank ನಿಂದ ಸ್ಪಷ್ಟೀಕರಣ ಬರಬೇಕೆಂದು ಹೇಳುತ್ತಿದ್ದಾರೆ ಹೊರತು, ಇವತ್ತಿನವರೆಗೂ ಸರಿಯಾದ ಮಾರ್ಗದರ್ಶನ ಸಿಗದೇ ಅವರು ಯಾವ ಸ್ಥಿತಿಗೆ ತಲುಪುತ್ತಿದ್ದಾರೆ ಎನ್ನುವುದನ್ನು ಯೋಚನೆ ಮಾಡಬೇಕು ಒಂದು ಕಡೆ ಸಾಲ ಮನ್ನಾ ಮಾಡುತ್ತೇವೆ ಎನ್ನುವ ಬಗ್ಗೆ ಗೊಂದಲ ಅದೇನೆ ಇರಲಿ, ಅದು ಸಹಕಾರಿ ಕ್ಷೇತಕ್ಕೆ ಸೀಮಿತವಾಗಿ ಮಾತ ಎಂದು ಸ್ಪಷ್ಟವಾಗಿದೆ ಆದರೆ ಈ ಬ್ಯಾಂಕ್‌ಗಳಿಗೆ ನೀವು ಸರಿಯಾದರತಹ ಆದೇಶಗಳನ್ನು ಹೊರಡಿಸಿ, ರೈತರಿಗೆ ಬಡ್ಡಿ ಮನ್ನಾ ಮಾಡಿ ಅಸಲವನ್ನು ಕಟ್ಟಿ reschedule ಮಾಡುವುದಕ್ಕೆ, renewal ಮಾಡುವುದಕ್ಕೆ provision ಮಾಡದೇ ಹೋದರೆ ಇದು ಮುಂದುವರಿಯುತ್ತದೋ ಇಲ್ಲವೋ? ಜೊತೆಗೆ ತಮ್ಮ ಇತರೆ ಯೋಜನೆ ಏನಿವೆ water shedಗೆ ಇರಬಹುದು, ಕೃಷಿ ಯೋಜನೆಗೆ, ಸಣ್ಣ ನೀರಾವರಿಗೆ, ಇಲ್ಲಿವರೆಗೂ ಆ ಯೋಜನೆಗಳಿಗೆ ಮಂಜೂರಾತಿ ದೊರೆತಿಲ್ಲ, ಆ ಯೋಜನೆಗಳನ್ನು ಕೈಗೆತ್ತಿಕೊಂಡಿಲ್ಲ ಇದೇ ಪರಿಸ್ಥಿತಿ ಮುಂದುವರೆದರೆ, ಬಹುಷ ಆರು ಜಿಲ್ಲೆಗೆ ಈ ಸ್ಥಿತಿಯಾದರೆ, ನಮ್ಮ ಸ್ನೇಹಿತರು ಬೇರೆ ಜಿಲ್ಲೆಗಳ ಬಗ್ಗೆ ಕೇಳುತ್ತಾರೆ ಏನಾಗುತ್ತದೆ? ಯೋಜನೆ ಬಂದರೂ ಕೂಡ ಬೆಳಗಾಂ ಮತ್ತು ಹಾಸನ ಸೇರಿದರೂ, ಬೆಳಗಾಂ ಆತ್ಮಹತ್ಯೆಯ ಮೊದಲನೆ ಸ್ಥಾನದಲ್ಲಿ ಇದೆ, ಹಾಸನ ಎರಡನೇ ಸ್ಥಾನದಲ್ಲೆ ಇದೆ ಇದೆ ಪರಿಸ್ಥಿತಿ ಮುಂದುವರೆದರೆ ಬಹುಷ ನಿಮ್ಮ Prime Minister package ಕೂಡ ಏನೂ ಉಪಯೋಗಕ್ಕೆ ಬರುವುದಿಲ್ಲ ಎಲ್ಲಿಯವರೆಗೆ ರಾಜ್ಯ ಸರ್ಕಾರ ಆಸಕ್ತಿ ವಹಿಸಿ ಕೂಡಲೇ ತ್ವರಿತಗತಿಯಿಂದ ಆ ಯೋಜನೆಯನ್ನು ಅನುಷ್ಠಾನಗೊಳಿಸದೇ ಹೋದರೆ ಅದು ನಿರುಪಯುಕ್ತವಾಗುತ್ತದೆ ಆದ್ದರಿಂದ ಸರ್ಕಾರ ಕೂಡಲೆ ಈ ವಿಚಾರದ ಬಗ್ಗೆ ಗಮನ ಹರಿಸಬೇಕು ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ

ಶೀ ಬಂಡೆಪ್ಪ ಕಾಶಂಪೂರ್ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪಾಟೀಲ್‌ರವರು ಇದರಲ್ಲಿ ವಿಳಂಬವಾಗುತ್ತಿದೆಯೆಂದು ಹೇಳಿದರು ಹಲವಾರು ಕಡೆ ನಾನೇ ಪತ್ಯಕ್ಷವಾಗಿ ಹೋಗಿ, ಅಲ್ಲಿ ಕುಟುಂಬಗಳನ್ನು ಭೇಟಿ ಮಾಡಿ, ಅಧಿಕಾರಿಗಳ ಜೊತೆ ಮಾತನಾಡಿದಾಗ, ಕೆಲವು ಸಂದರ್ಭದಲ್ಲಿ, postmortem report ಬರುವುದಕ್ಕೆ ಸುಮಾರು ಒಂದು ತಿಂಗಳು ಆದಂತಹ ಸಂದರ್ಭ ಇದೆ ಅದರ ಜೊತೆಗೆ ಮಾನ್ಯ ಸದಸ್ಯರು ಹೇಳಿದಂತೆ ಆರು ತಿಂಗಳು, ಒಂದು ವರ್ಷ ವಿಳಂಬವಾಗಿದ್ದರೆ ಆ ಬಗ್ಗೆ ನಾನು ಕಮ ತೆಗೆದುಕೊಳ್ಳುತ್ತೇನೆ ಇದರ ಬಗ್ಗೆ ಆದಷ್ಟು ಬೇಗ settle ಮಾಡಬೇಕೆರೆದು ಹೇಳುತ್ತೇನೆ ಅಲ್ಲದೆ ಪರಿಹಾರವನ್ನು ಎರಡು ಲಕ್ಷ ರೂಪಾಯಿ ಕೊಡಬೇಕೆಂದು ಏನು ಕೇಳಿದ್ದಾರೆ, ಅದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ ಮಾನ್ಯ ಬಯ್ಯಾಪುರ್ ರವರು ಹೇಳಿದಂತಹ ವಿಚಾರದಲ್ಲೂ

ಕೂಡ ನಾನು ಕಮ ತೆಗೆದುಕೊಳ್ಳುತ್ತೇನೆ ಇನ್ನು ಹಾಸನಕ್ಕೆ ಸಂಬಂಧಪಟ್ಟ ಹಾಗೆ ಬಾಕಿ ಏನಾಗಿದೆ ಎಂದು ಕೇಳಿದರು, ಅದು reject ಆಗಿದೆ ಇದರಲ್ಲಿ ಕಾಲಂ ಏನಿದೆ, ಅದರಲ್ಲಿ ಮೊದಲನೆಯದು reported, ಎರಡನೆಯದು compensation paid, ಮೂರನೆಯದು enquiry pending ಆಗಿರುವುದು, ಉಳಿದಿರುವುದು reject ಆಗಿರುವುದು ತಮಗೆ ಗೊತ್ತಿದೆ ಹಿಂದೆ ಇದಕ್ಕೆ ಒಂದು norms ಮಾಡಿ, ಇದು ಯಾವ norms ನಲ್ಲಿ fit ಆಗುತ್ತದೆಂದು ನೋಡುವುದಕ್ಕೆ ಎಂದು AC ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದೆ ಬಾಕಿ ಕೇಸ್‌ಗಳು reject ಆಗಿದೆ Prime Minister package ನಲ್ಲಿ interest waiver ಬಗ್ಗೆ ಕೇಳಿದಿರಿ, ಈಗಾಗಲೇ ಇವತ್ತು ಇಡೀ ಆರು ಜಿಲ್ಲೆಗಳಲ್ಲಿ 209 ಕೋಟಿ ರೂಪಾಯಿ interest package ನಲ್ಲಿ ಕೊಡಬೇಕೆಂದು ತೀರ್ಮಾನವಾಗಿದೆ ಹಲವಾರು cabinet sub committee ಮೀಟಿಂಗ್ ಆಗಿದೆ ಯಾವುದೇ ಕಾರಣಕ್ಕೂ ಕೇಂದ್ರ ಸರ್ಕಾರದಿಂದ Prime Minister package ನಲ್ಲಿ ಬಂದಂತಹ ಹಣವನ್ನು ಕೊಡುವುದಕ್ಕೆ ವಿಳಂಬ ಮಾಡುವುದಿಲ್ಲ ಪತಿ ಜಿಲ್ಲೆಗೆ 50 ಲಕ್ಷ ರೂಪಾಯಿ Prime Minister relief fund ನಲ್ಲಿ ಹೋಗಿದೆ ಅದರ ಕೆಲಸ ಕಾರ್ಯಗಳು ನಡೆಯುತ್ತಿವೆ ಇನ್ನು ಬಾಕಿ ಹಣ ಬರುತ್ತಿದೆ ನಾವು plan of action ರೂಪಿಸಿಕೊಂಡು ಕೆಲಸ ಮಾಡುತ್ತಿದ್ದೇವೆ

ಅಧ್ಯಕ್ಷರು ಈಗ ಸಿದ್ದು ಸವದಿಯವರು ಪಶ್ನೆ ಕೇಳಿ

ಶ್ರೀ ಬಿ ಶಿವರಾಂ 50 ಲಕ್ಷ ರೂಪಾಯಿ ಬಿಡುಗಡೆ ಮಾಡಿರುವುದು ಖಾಸಗಿ ಲೇವಾದೇವಿ ಮತ್ತು ಇತರೆ ವೆಚ್ಚಕ್ಕೆ ಆದರೆ ಬ್ಯಾಂಕಿನ ಬಗ್ಗೆ ನಾನು specific ಆಗಿ ಕೇಳುತ್ತಿದ್ದೇನೆ ಆ ಬ್ಯಾಂಕಿಗೆ direction ಹೋಗಬೇಕು

ಅಧ್ಯಕ್ಷರು ಪ್ರಶ್ನೆ ಮುಗಿಸಿದ್ದೇನೆ ಎಂದು ಹೇಳಿದರೂ ಕೂಡ ನೀವು ಉತ್ತರ ಹೇಳುತ್ತಿದ್ದೀರಿ ಮಂತ್ರಿಗಳಿಂದಲೇ ಅರ್ಧ ನಿಧಾನವಾಗುವುದು

ಕಬ್ಬು ಬೆಳೆಗಾರರಿಗೆ ಯೋಗ್ಯ ಬೆಲೆ ನೀಡುವುದು

47(235) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಬ್ಬು ಬೆಳೆಯುವ ರೈತರು ಕಷ್ಟದಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಕಬ್ಬು ಬೆಳೆಗಾರರ ಸಮಸ್ಯೆಗಳಿಂದ ಸಮಯಕ್ಕೆ ಸರಿಯಾಗಿ ಕಟಾವು, ನೀರಿನ ತೊಂದರೆ ಮತ್ತು ಉಣ್ಣೆ ರೋಗ ಇವುಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದೇ ,

ಇ) ಬೆಳೆಗಾರರಿಗೆ ಯೋಗ್ಯ ಬೆಲೆ ಪಡೆಯುವಲ್ಲಿ ತೊಂದರೆ ಕೊಡುತ್ತಿರುವ ಕಾರ್ಖಾನೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದೇ ,

ಈ) ಈ ಕಾರ್ಖಾನೆ ಮತ್ತು ರೈತರ ನಡುವೆ ಇರುವ ನಿಯಮಾವಳಿಗಳಾವುವು , ಹಾಗಿದ್ದಲ್ಲಿ ನಿಯಮಗಳನ್ನು ಜಾರಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ ,

ಉ) ರೈತರಿಗೆ ಸರಿಯಾಗಿ ಬಿಲ್ಲಿನ ಹಣ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಊ) ನಿಯಮ ಬಾಹಿರವಾಗಿ ಕಬ್ಬಿನ ಕಟಾವಿಗೆ ಆದೇಶಿಸುವುದು ಹಾಗೂ ಶೇ 15 ರಿಂದ ಶೇ 25 ಸೂಟ ಬಿಡುವಂತೆ ರೈತರಿಗೆ ಬಲಾತ್ಕಾರ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಋ) ಬಂದಿದ್ದಲ್ಲಿ, ಬಿಲ್ಲಿನ ಹಣ ಪಾವತಿಗಾಗಿ ಹಾಗೂ ನಿಯಮ ಬಾಹಿರ ಕ್ರಮವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಹೌದು

ಆ) ಪ್ರತಿಯೊಂದು ಕಾರ್ಖಾನೆಯಲ್ಲೂ ಕಬ್ಬು ಬೆಳೆ ಹಾಗೂ ಸರಬರಾಜು ನಿರ್ವಹಣೆಗಾಗಿ ಒಂದು ಪ್ರತ್ಯೇಕ ವಿಭಾಗವನ್ನು ಅಳವಡಿಸಿಕೊಂಡಿರುತ್ತವೆ ಈ ವಿಭಾಗವು ಕಾರ್ಖಾನೆಯ ಸಾಮರ್ಥ್ಯಕ್ಕನುಗುಣವಾಗಿ ಕಬ್ಬಿನ ನಿರಂತರ ಸರಬರಾಜು ಮಾಡಲು ವೇಳಾ ಪಟ್ಟಿ ರಚಿಸಿ, ಆ ಪ್ರಕಾರ ಸಮಯಕ್ಕೆ ಸರಿಯಾಗಿ ಕಟಾವು ಮಾಡಲು ಕ್ರಮವಹಿಸುತ್ತಿವೆ ರಾಜ್ಯದಲ್ಲಿ ಸಧ್ಯಕ್ಕೆ ಉಣ್ಣೆ ರೋಗವನ್ನು ನಿಯಂತ್ರಿಸಲಾಗಿದ್ದು, ಯಾವುದೇ ಸಮಸ್ಯೆ ಇರುವುದಿಲ್ಲ

ಇ) ಕಬ್ಬು ಬೆಳೆಗಾರರಿಗೆ ಯೋಗ್ಯ ಬೆಲೆ ದೊರಕಿಸಿ ಕೊಡುವಲ್ಲಿ ರಾಜ್ಯ ಸರ್ಕಾರವು ನಿರಂತರ ಕ್ರಮ ವಹಿಸುತ್ತಿವೆ ಕಬ್ಬಿನ ಶಾಸನಬದ್ಧ ಕನಿಷ್ಠ ಬೆಳೆಯನ್ನು ಕೇಂದ್ರ ಸರ್ಕಾರವು ಹಲವು ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ನಿಗಧಿಗೊಳಿಸುತ್ತದೆ ಆ ಪ್ರಕಾರ ಕೇಂದ್ರ ಸರ್ಕಾರವು ನಿಗಧಿಪಡಿಸಿದ ಶಾಸನಬದ್ಧ ಕನಿಷ್ಠ ಬೆಳೆಗಿಂತ ಕಡಿಮೆ ಇಲ್ಲದಂತೆ ಖಾತ್ರಿಯಾಗಿ ಪಾವತಿಸಲು ಕ್ರಮವಹಿಸಲಾಗುತ್ತಿದೆ ಮುಂದುವರೆದು ಕಬ್ಬು (ನಿಯಂತ್ರಣ) ಕಾಯ್ದೆ 1966ರ ಕಲಂ 5(ಎ) ರನ್ವಯ ಕಾರ್ಖಾನೆಯು ಹೆಚ್ಚುವರಿಯಾಗಿ ಕಬ್ಬು ಬೆಲೆ ಪಾವತಿಸಲು ಬಂದಿಲ್ಲಿ ಅದನ್ನು ಪಾವತಿಸಲು ಕ್ರಮವಹಿಸಲಾಗುವುದು

ಈ) ಕಾರ್ಖಾನೆ ಮತ್ತು ರೈತರು ಕಬ್ಬು ದರ ನಿಗಧಿ ಮತ್ತು ಕಬ್ಬು ಸರಬರಾಜಿಗಾಗಿ ಪರಸ್ಪರ ಒಪ್ಪಂದ ಮಾಡಿಕೊಂಡು ಆ ಪ್ರಕಾರ ನಡೆದುಕೊಳ್ಳುತ್ತಿವೆ ಹೌದು

ಉ) ರೈತರು ಮತ್ತು ಕಾರ್ಖಾನೆಗಳ ಪರಸ್ಪರ ಒಪ್ಪಂದದ ಅನ್ವಯದ ಕಬ್ಬಿನ ಬಿಲ್ಲಿನ ಹಣ ಪಾವತಿಯಾಗುತ್ತಿರುತ್ತವೆ

ಊ) ಇಲ್ಲ

ಋ) ಉದ್ಭವಿಸುವುದಿಲ್ಲ

ಶೀ ಸಿದ್ದು ಸವದಿ ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಸಮಸ್ಯೆ ತಮಗೆ ತಿಳಿದ ಹಾಗೆ ಕಬ್ಬಿನ ಕಟಾವನ್ನು ಯಾವುದೇ ಕಾರ್ಖಾನೆಯವರು ಮಾಡುತ್ತಿಲ್ಲ ಸುಮಾರು ಎರಡು ವರ್ಷ ಕಳೆದರೂ ಸಹ ಯಾವುದೋ ಒಂದು ನೆಪ ಹೇಳಿ ನೂರಕ್ಕೆ 15 ರಿಂದ 25 ಪರ್ಸೆಂಟ್‌ನವರೆಗೆ cut ಮಾಡಿ ರೈತರು ಹಾನಿ ಅನುಭವಿಸುವಂತಹ ಪರಿಸ್ಥಿತಿ ಬಂದೊದಗಿದೆ ಸರ್ಕಾರ ರೈತರ ಸಹಾಯಕ್ಕೆ ಬಂದು ಅವರಿಗೆ ಪರಿಹಾರ ಒದಗಿಸಿಕೊಡಬೇಕೆಂದು ಮಾನ್ಯ ಸಕ್ಕರೆ ಸಚಿವರಿಗೆ ಪರಿಹಾರವನ್ನು ಕೇಳಬಯಸುತ್ತೇನೆ

ಶೀ ಎಸ್ ಎ ರವೀಂದನಾಥ್ ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ ನನ್ನ ಗಮನಕ್ಕೆ ಬಂದರೆ ಯಾವ ಸಕ್ಕರೆ ಕಂಪನಿಯವರು ಆ ರೀತಿ 15 ರಿಂದ 25 ಪರ್ಸೆಂಟ್ cut ಮಾಡುತ್ತಿದ್ದಾರೆ, ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಕಮ ತೆಗೆದುಕೊಳ್ಳುತ್ತೇನೆ

ಶೀ ಸಿದ್ದು ಸವದಿ IC ಅಗರ ಜಾತಿ ಕಬ್ಬಿಗೆ 15 ರಿಂದ 25 ಪರ್ಸೆಂಟ್‌ವರೆಗೆ ಕಟಾವು ಮಾಡಿದ್ದಾರೆ, ಅದರ ಬಗ್ಗೆ ತಾವು ಮಾಹಿತಿಯನ್ನು ತರಿಸಿಕೊಳ್ಳಬೇಕು

ಅಧ್ಯಕ್ಷರು ನಿಖರವಾಗಿ ತಾವು ಯಾರ ಮೇಲೆ ದೂರು ಇದೆ ಎಂದು ಮಾಹಿತಿ ಕೊಡಿ ಅವರಿಗೆ ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ ಅವರು enquiry ಮಾಡುವುದಕ್ಕೆ ready ಇದ್ದಾರಲ್ಲ

ಶೀ ಸಿದ್ದು ಸವದಿ ಸಮೀರ್‌ವಾಡಿ factory, ಪಭುಲಿಂಗೇಶ್ವರ factory ಮತ್ತು ಜಮಖಂಡಿ sugar factory ಈ ರೀತಿ ಎಲ್ಲಾ factories 8011 ಕಬ್ಬಿಗೆ 15 ರಿಂದ 25 ಪರ್ಸೆಂಟ್ ಕಬ್ಬು ಕಟಾವ್ ಮಾಡಿ ಕಬ್ಬನ್ನು ಸಾಗಾಣಿಕೆಗೆ order ಕೊಡುತ್ತಿದ್ದಾರೆ ಅದರ ಬಗ್ಗೆ ತಾವು ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿಯನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ

ಶೀ ಎಸ್ ಎ ರವೀಂದನಾಥ್ ತಾವು ಬರೆದುಕೊಟ್ಟರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತಹ ಪಯತ್ನ ಮಾಡುತ್ತೇನೆ

ರಾಜ್ಯದ ರೈತರಿಗೆ ಬೆಳೆವಿಮೆ ವಿತರಿಸುವ ಬಗ್ಗೆ

49(249) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದ ರೈತರಿಗೆ ಕಳೆದ ಒಂದು ವರ್ಷದಿಂದ (ದಿನಾಂಕ 15 01 2007 ರವರೆಗೆ) ಎಷ್ಟು ಮೊತ್ತದ ಬೆಳೆ ವಿಮೆಯನ್ನು ವಿತರಣೆ ಮಾಡಲಾಗಿದೆ (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು) ,

ಆ) ಈ ಅವಧಿಯಲ್ಲಿ ಎಷ್ಟು ಮೊತ್ತದ ಬೆಳೆ ವಿಮೆಯನ್ನು ಪಾವತಿ ಮಾಡಲು ಉದ್ದೇಶಿಸಲಾಗಿತ್ತು ,

ಇ) ಬೀದರ್ ಜಿಲ್ಲೆಯಲ್ಲಿ ಎಷ್ಟು ಬೆಳೆ ವಿಮೆ ಬಾಕಿ ಇದೆ (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು) ,

ಈ) ಬೆಳೆ ವಿಮೆ ನಿಗದಿತ ಸಮಯದಲ್ಲಿ ಪಾವತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಬಂಡೆಪ್ಪ ಕಾಶಂಪೂರ (ಮಾನ್ಯ ಕೃಷಿ ಸಚಿವರು)

ಅ) 2005–06 ಸಾಲಿನಿಂದ 15 01 2007 ರವರೆಗೆ ರಾಜ್ಯದಲ್ಲಿ ಒಟ್ಟು 2 52 ಲಕ್ಷ ರೈತರಿಗೆ ಒಟ್ಟು ರೂ 82 75 ಕೋಟಿಗಳ ಬೆಳೆ ವಿಮಾ ನಷ್ಟ ಪರಿಹಾರವನ್ನು ವಿತರಣೆ ಮಾಡಲಾಗಿದ್ದು, ಇದರ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಈ ಅವಧಿಯಲ್ಲಿ ರಾಜ್ಯದಲ್ಲಿ ಒಟ್ಟು ರೂ 88 26 ಕೋಟಿಗಳ ಬೆಳೆ ವಿಮಾ ನಷ್ಟ ಪರಿಹಾರ ಪಾವತಿ ಮಾಡಬೇಕಾಗಿತ್ತು ಆದರೆ ಇದರ ಪೈಕಿ ರೂ 82 75 ಕೋಟಿಗಳನ್ನು ಪಾವತಿಸಲಾಗಿದೆ

ಇ) ಬೀದರ್ ಜಿಲ್ಲೆಯಲ್ಲಿ ವಿಧಾನ ಸಭಾ ಕ್ಷೇತ್ರವಾರು ಪಾವತಿಸಬೇಕಾದ ಬೆಳೆ ವಿಮಾ ಪ್ರಕರಣ ವಿವರಗಳು ಹೀಗಿವೆ

ವಿಧಾನ ಸಭಾ ಕ್ಷೇತ್ರ	ಫಲಾನುಭವಿ ರೈತರ ಸಂಖ್ಯೆ	ಬೆಳೆವಿಮಾ ನಷ್ಟ ಪರಿಹಾರ (ಲಕ್ಷ ರೂ)
1 ಹುಲಸೂರು	30	0 82
2 ಭಾಲ್ಕಿ	132	6 76
3 ಬೀದರ್	2	0 02
4 ಔರಾದ್	–	–
5 ಹುಮ್ನಾಬಾದ್	–	–
6 ಬಸವ ಕಲ್ಯಾಣ	–	–
ಒಟ್ಟು	164	7 60

ಈ) ಇಳುವರಿ ಮಾಹಿತಿಯನ್ನು ನಿಗದಿತ ಅವಧಿಯೊಳಗಾಗಿ ವಿಮಾ ಸಂಸ್ಥೆಗೆ ಕಳುಹಿಸುವ ಮೂಲಕ ವಿಮೆ ಹಣವನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

Annexure-1

2005–06ನೇ ಸಾಲಿನಿಂದ 15–01–2007ರವರೆಗೆ ರಾಜ್ಯದ ರೈತರಿಗೆ ವಿತರಿಸಲಾದ ಬೆಳೆ ವಿಮಾ ನಷ್ಟ ಪರಿಹಾರದ ಜಿಲ್ಲಾವಾರು ವಿವರ

ಸಂಖ್ಯೆ	ಜಿಲ್ಲೆಯ ಹೆಸರು	ಪಾಲ್ಗೊಂಡ ರೈತರ ಸಂಖ್ಯೆ	ಫಲಾನುಭವಿ ರೈತರ ಸಂಖ್ಯೆ	ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷರೂ ಗಳಲ್ಲಿ)
1	ಬೆಂಗಳೂರು	937	18	1 39
2	ಬೆಳಗಾವಿ	185543	9433	211 58

3	ಬಳ್ಳಾರಿ	19157	3278	234 43
4	ಬೀದರ್	234080	89218	1361 42
5	ಬಿಜಾಪುರ	49990	4226	186 90
6	ಚಿಕ್ಕಮಗಳೂರು	33692	474	19 82
7	ಚಿತ್ರದುರ್ಗ	24735	5745	240 64
8	ದಕ್ಷಿಣ ಕನ್ನಡ	824	0	0 00
9	ಧಾರವಾಡ	225510	22853	1103 85
10	ಗುಲ್ಬರ್ಗಾ	300953	14473	308 33
11	ಹಾಸನ	112151	43530	1703 89
12	ಕೋಲಾರ	5525	1077	13 78
13	ಮಂಡ್ಯ	3626	0	0 00
14	ಮೈಸೂರು	17722	5663	56 41
15	ರಾಯಚೂರು	66955	6291	287 86
16	ಶಿವಮೊಗ್ಗ	86251	2980	55 46
17	ತುಮಕೂರು	24244	10514	622 41
18	ಉತ್ತರ ಕನ್ನಡ	71653	313	3 76
19	ಕೊಡಗು	24560	0	0 00
20	ಕೊಪ್ಪಳ	34468	3509	89 99
21	ಚಾಮರಾಜನಗರ	20525	453	18 86
22	ದಾವಣಗೆರೆ	61987	990	35 34
23	ಬಾಗಲಕೋಟೆ	31830	3358	73 51
24	ಗದಗ	102054	10487	1154 36
25	ಹಾವೇರಿ	193577	13191	491 23
26	ಉಡುಪಿ	1876	0	0 00
	ಒಟ್ಟು	**1934425**	**252074**	**8275 22**

ಪ್ರಶ್ನೆ ಸಂಖ್ಯೆ 249 ಉತ್ತರ ಲಗತ್ತಿಸಲಾಗಿದೆ

ಶೀ ಗುರುಪಾದಪ್ಪ ನಾಗಮಾರಪಲ್ಲಿ ಮಾನ್ಯ ಅಧ್ಯಕ್ಷರೆ, ಈ ವರ್ಷದ ವಿಮೆ ಕೂಡ ಬಂದಿಲ್ಲ ಅದನ್ನು ಯಾವಾಗ ಕೊಡುತ್ತೀರಿ? ಈ ವಿಮೆ ಸಿಸ್ಟಂ ಏನಿದೆ ಅದನ್ನು ಸ್ವಲ್ಪ change ಮಾಡಬೇಕಾಗುತ್ತದೆ ಏನಾಗಿದೆ ಎಂದರೆ ಒಂದು ಊರಿನಲ್ಲಿ ಮಳೆ ಬಿದ್ದರೆ, ಇನ್ನೊಂದು ಊರಿನಲ್ಲಿ ಮಳೆ ಬೀಳುವುದಿಲ್ಲ ಇದನ್ನು village-wise ಮಾಡುವುದಕ್ಕೆ ಏನಾದರೂ ಒಂದು ನೀತಿ ತಯಾರು ಮಾಡುತ್ತೀರಾ? ನಿಮ್ಮ ಕಡೆಯಿಂದ ನೀವು ಪ್ರಯತ್ನ ಮಾಡಬೇಕಲ್ಲ, Central Governmentದು ವಿಮೆ ಇದೆ, ಅದು ನನಗೂ ಗೊತ್ತಿದೆ ನೀವು ಮೀಟಿಂಗ್‌ನಲ್ಲಿ ಹೇಳಬೇಕು, ನಮಗೆ ತೊಂದರೆಯಾಗುತ್ತಿದೆ ಎಂದು ನೀವು proposal ಕಳುಹಿಸಬೇಕು ಆದರೆ ತಾವು ಹೇಳಬೇಕಲ್ಲ ಇದನ್ನು ಹೇಳಿ ಏನಾದರೂ ಮಾಡಿ, ಇದನ್ನು ತಾವು ಬದಲಾಯಿಸಲಿಲ್ಲವೆಂದರೆ ಯಾರಿಗೂ ಲಾಭವಾಗುವುದಿಲ್ಲ ಒಂದು ಊರಿನಲ್ಲಿ

ಪೂರ್ತಿ ಬೆಳೆ ಹೋಗುತ್ತಿದೆ ಒಂದು ಹೋಬಳಿಯಲ್ಲಿ ನೋಡಿಕೊಂಡು ಬಂದೆ, ಅಲ್ಲಿ ಏನೂ ಉಪಯೋಗವಾಗುತ್ತಿಲ್ಲ ಹೋಬಳಿಯಾದರೆ ಆಗುತ್ತದೆ ಇಲ್ಲದಿದ್ದರೆ ಇಲ್ಲ, ಇದು ಸರಿಯಾದುದಲ್ಲ ಮೊದಲು ತಾಲ್ಲೂಕು ಇತ್ತು, ಈಗ ಹೋಬಳಿ ಆಗಿದೆ ಅದು village-wise ಆಗುವುದಕ್ಕೆ ತಾವು ಏನಾದರೂ ಪಯತ್ನ ಮಾಡಬೇಕು ಮತ್ತು ಮುಂದಿನ ವರ್ಷದ ವಿಮೆ ಯಾವಾಗ ಕೊಡುತ್ತೀರಿ ? ಈ ವರ್ಷದ್ದು ಇನ್ನು ಬಂದಿಲ್ಲ ಇದು ಯಾವಾಗ ಬರುತ್ತದೆ? ಅದನ್ನು ಯಾವಾಗ ವಿತರಣೆ ಮಾಡುತ್ತಿರಾ?

ಶೀ ಬಂಡೆಪ್ಪ ಕಾಶಂಪೂರ್ ಸನ್ಮಾನ್ಯ ಅಧ್ಯಕ್ಷರೆ, ಈ ಬೆಳೆ ವಿಮೆ ವಿಷಯ ಬಹಳ ಮುಖ್ಯವಾದದ್ದು ಆಗಿದೆ ಸನ್ಮಾನ್ಯ ಸದಸ್ಯರು ಕೇಳಿದ ಪಶ್ನೆಗೆ ಈಗಾಗಲೇ 2005-06ನೇ ಸಾಲಿನ ಖರಿಫ್ ಹಣವನ್ನು ಡಿಪಾಸಿಟ್ ಮಾಡಲಾಗಿದೆ ಈಗ ಪೆಂಡಿಂಗ್ ಇರುವಂಥಾದ್ದು 2004-05ನೇ ಸಾಲಿನದು ರಬಿ ಹಣ 3ಕೋಟಿ 69ಲಕ್ಷ ಹಾಗೂ summer crop ನದು 13ಲಕ್ಷ ರೂಪಾಯಿಗಳು ಇದೆ ಅದು ಬಿಟ್ಟರೆ 2005-06ನೇ ಸಾಲಿನದು ರಬಿ ಹಾಗೂ summer crop ಎರಡು ಸೇರಿ ಒಂದು ಕೋಟಿ 49ಲಕ್ಷ ರೂಪಾಯಿಗಳು ಇದೆ ತಾವು ಈಗ ಕೇಳಿದ್ದು 2006-07ನೇ ಸಾಲಿನ ಖಾರಿಫ್ ಹಣ ಸುಮಾರು 9ಕೋಟಿ ರೂಪಾಯಿಗಳು ಪ್ರೀಮಿಯಮ್ ಬಂದಿದೆ ಈಗ ಅದರ ಈಲ್ಡ್ ಅಸ್ಸೆಸ್‌ಮೆಂಟ್ ನಡೆಯುತ್ತಿದೆ ತಮಗೆ ಗೊತ್ತಿರುವಂತೆ crop cutting experiments ಎಲ್ಲಾ ಬಹಳಷ್ಟು ವಿಳಂಬವಾಗುತ್ತಿದೆ ಇಂತಹ ಸಂದರ್ಭದಲ್ಲಿ ನಾನು ಸಾಕಷ್ಟು ಮೀಟಿಂಗ್‌ಗಳನ್ನು ಮಾಡಿ, ಇದರಲ್ಲಿ ಸಾಕಷ್ಟು ಬದಲಾವಣೆಯನ್ನು ಮಾಡುವ ಕೆಲಸವನ್ನು ಮಾಡುತ್ತಿದ್ದೇವೆ ಇನ್ನು ಮಾನ್ಯ ವಿರೋಧಪಕ್ಷದ ನಾಯಕರು ಈ ಬರಗಾಲದ ಬಗ್ಗೆ ಚಿಂತನೆಯನ್ನು ಮಾಡಿ ಹೇಳಿದಾಗ ನಮಗೂ ಏನು ಅನಿಸುತ್ತದೆಂದರೆ, ಮುಂದಿನ ದಿವಸಗಳಲ್ಲಿ ರೈತರ ಸಂಕಷ್ಟದಲ್ಲಿ ಈ ಬೆಳೆ ವಿಮೆ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗುತ್ತದೆ ಅದುದರಿಂದ ನಾವು ಏನು ಮಾಡಿದ್ದೇವೆಂದರೆ ಇದಕ್ಕೆ ಸಂಬಂಧಪಟ್ಟ "ನ್ಯಾಷನಲ್ ಇನ್ಸುರೆನ್ಸ್ ಕಂಪನಿ' ಯವರನ್ನು ಕರೆಸಿ, ಈ ಖರಿಫ್‌ನಲ್ಲಿ ಎರಡು ಬೆಳೆಯನ್ನು ಮಾಡಬೇಕು ಒಂದು short duration crops ಮತ್ತೊಂದು long duration crops ಎಂದು ಮಾಡಬೇಕು ಇದರಲ್ಲಿ short duration crops ನಮ್ಮ ಇಲಾಖೆ ಕಡೆಯಿಂದ ಈಲ್ಡ್ ಡಾಟಾ ಎಲ್ಲಾ ಡಿಸೆಂಬರ್ ತಿಂಗಳ ಕೊನೆಯಲ್ಲಿ ಕೊಟ್ಟಿದ್ದೇವೆ ಆ ಬಗ್ಗೆ ಅವರು ತೀರ್ಮಾನವನ್ನು ತೆಗೆದುಕೊಂಡು, ಅದನ್ನು ಕೇಂದ ಸರ್ಕಾರಕ್ಕೆ ಕಳುಹಿಸಿ, ಅದರದೇ ಆದಂತಹ ಪ್ರೀಮಿಯಮ್ ಅನ್ನು ಹೇಳಿದರೆ, ನಾವು ಅದಕ್ಕೆ ಅರ್ಧ ಭಾಗ ಏನು ಕೊಡಬೇಕು ಅದನ್ನು ನಾವು ಕೊಡುತ್ತೇವೆ. ನಾವು ಇದರಲ್ಲಿ ಸಾಕಷ್ಟು ಬದಲಾವಣೆಗಳನ್ನು ತರಬೇಕಾಗಿದೆ ಇದರ ಬಗ್ಗೆ ಕೇಂದ ಸರ್ಕಾರದ ಚಿಂತನೆ ಏನು ಇದೆ, ಅದರ ಬಗ್ಗೆ ಅವರು ಲೆಕ್ಕವನ್ನು

ಹಾಕಬೇಕೆಂಬ ನಿಟ್ಟಿನಲ್ಲಿ ನಾನು ಹೇಳಬಯಸುತ್ತೇನೆ ನಮ್ಮ ಕಡೆಯಿಂದ ಯಾವುದೇ ರೀತಿಯಿಂದಲೂ ವಿಳಂಬವಾಗುತ್ತಿಲ್ಲ ನಾವು ಈಗ ಜನವರಿ, ಮಾರ್ಚ್ ತಿಂಗಳಲ್ಲಿ ಕೊಡುವ ಡಾಟಾವನ್ನು ಈ short duration cropನ ಹಣವನ್ನೆಲ್ಲಾ ಡಿಸೆಂಬರ್‌ನಲ್ಲೆ ಕೊಟ್ಟಿದ್ದೇವೆ ಇನ್ನು ಬಾಕಿ ಇರುವ long duration crop ನದು ಈಗ ಕಟಿಂಗ್ ನಡೆಯುತ್ತಿದೆ ತಾವು ಏನು ಹೋಬಳಿವಾರು ಹೇಳಿದ್ದೀರಿ, ಈಗ ಪದ್ಧತಿ ಇರುವಂಥಾದ್ದು ಹೋಬಳಿವಾರು crop cutting experiments 20 ಮಾಡಬೇಕೆಂದು ಇದೆ ಅದರಲ್ಲಿ ನಾವು ಮೊದಲನೆಯ ಹಂತದಲ್ಲಿ ಅದಕ್ಕಿಂತ ಶೇ 20 ಹೆಚ್ಚಿಗೆ ತೆಗೆದುಕೊಳ್ಳಿಯೆಂದು ನಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ ಆದರೆ ನಮ್ಮಲ್ಲಿ ಪಂಚಾಯತ್‌ವಾರು ಮಾಡಬೇಕೆಂಬ ವಿಚಾರ ಪರಿಶೀಲನೆಯಲ್ಲಿ ಇದೆ ಅದಕ್ಕೆ ಇನ್ನು ಹೆಚ್ಚಿನ ಪ್ರಮಾಣದ ಬಜೆಟ್ ಬೇಕಾಗುತ್ತದೆಂದು ಹೇಳಿ, ಅದನ್ನು ಹಾಗೆ ಇಟ್ಟಿದ್ದೇವೆ ಈ ಮುಂದಿನ ದಿವಸಗಳಲ್ಲಿ ಇದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇವೆ

ಶೀ ಎನ್ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಶೀ ಶರತ್ ಪವಾರ್‌ರವರು ಹೈದರಾಬಾದ್‌ನಲ್ಲಿ ದಕ್ಷಿಣ ಭಾರತದ Agriculture Ministers' Conference ಅನ್ನು ಕರೆದಿದ್ದರು ಅದಕ್ಕೆ ತಾವು ಕೂಡ ಹೋಗಿದ್ದೀರಿ ಇವೆಲ್ಲಾ ವಿಚಾರಗಳು ಪ್ರಸ್ತಾಪವಾಗಿ, ಏನಾದರೂ ಡಿಸ್‌ಕಷನ್ ಆಗಿರಬೇಕು ನನಗೆ ತಿಳಿದಮಟ್ಟಿಗೆ ಇಡೀ ನಮ್ಮ ರಾಷ್ಟ್ರ ಮಟ್ಟದಲ್ಲಿ ಪಪ್ರಥಮವಾಗಿ Agriculture Minister ಶೀ ಶರತ್ ಪವಾರ್‌ರವರು ಈ ಸಮ್ಮೇಳನವನ್ನು ಮಾಡಿದ್ದಾರೆ ಅವರು ಒಬ್ಬ agriculturist ಆಗಿದ್ದಾರೆ, ಮತ್ತೆ ರೈತರ ಸಮಸ್ಯೆ ಬಗ್ಗೆ, ವಿಮೆಯ ಬಗ್ಗೆ, ಎಲ್ಲದ್ದರ ಬಗ್ಗೆ ಹೆಚ್ಚು ಚಿಂತನೆಯನ್ನು ಮಾಡಿದ್ದಾರೆ ಅದಕ್ಕೆ ತಾವು ಹೈದರಾಬಾದ್‌ಗೆ ಹೋಗಿದ್ದೀರಿ ಅಲ್ಲಿ ಡಿಸ್‌ಕಷನ್ ಏನು ಆಯಿತು? ತಾವು ಪಾಲುಗೋಂಡಿದ್ದೀರಿ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಏನೇನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ? ಇಲ್ಲಿನ ಸಮಸ್ಯೆಗಳ ಏನು ವಿಚಾರ ಮಾಡಿದ್ದೀರಿ? What is the outcome of that meeting

ಶೀ ಬಂಡೆಪ್ಪ ಕಾಶಂಪೂರ್ ಸನ್ಮಾನ್ಯ ಅಧ್ಯಕ್ಷರೆ, ಹಿರಿಯರಾದ ಮಾನ್ಯ ವಿರೋಧಪಕ್ಷದ ನಾಯಕರು, ಹೇಳಿದ ಹಾಗೆ ಹೈದರಾಬಾದ್‌ನಲ್ಲಿ ಮೀಟಿಂಗ್ ಆದಂತಹ ಸಂದರ್ಭದಲ್ಲಿ

ಶೀ ಗುರುಪಾದಪ್ಪ ನಾಗಮಾರಪಲ್ಲಿ ಮಾನ್ಯ ಅಧ್ಯಕ್ಷರೆ, ನಾನು ಒಂದು ಪಶ್ನೆಯನ್ನು ಪ್ರಸ್ತಾಪ ಮಾಡುತ್ತೇನೆ, ನಂತರ ಮಾನ್ಯ ಮಂತಿಯವರು ಉತ್ತರವನ್ನು ಕೊಡಲಿ ಈ ಯೋಜನೆಯ ಬಗ್ಗೆ ಮೊದಲು ಪಂಚಾಯತ್‌ವಾರು ಚರ್ಚೆಯಾಗುತ್ತಿತ್ತು ಈಗ ನಾನು ವಿಲೇಜ್‌ವಾರು ಎಂದು ಏಕೆ ಹೇಳುತ್ತಿದ್ದೇನೆಂದರೆ, ಒಂದು ಊರಿನಲ್ಲಿ ಮಳೆ ಬಿದ್ದರೆ,

ಇನ್ನೊಂದು ಊರಿನಲ್ಲಿ ಮಳೆಯಾಗುವುದಿಲ್ಲ ಈ ಪಾಬ್ಲಂ ಇದೆ ಅದಕ್ಕೆ ನಾನು village-wise proposal ಅನ್ನು ಕಳುಹಿಸಿ ಎಂದು ಹೇಳುತ್ತಿದ್ದೇನೆ ಅದಕ್ಕೆ ತಾವು village-wise proposal ಅನ್ನು ಕಳುಹಿಸುತ್ತಿರಾ? ಅದನ್ನು ತಾವು ಹೇಳಿ

ಶ್ರೀ ಬಂಡೆಪ್ಪ ಕಾಶಂಪೂರ್ ಮಾನ್ಯ ಅಧ್ಯಕ್ಷರೆ, ಹೈದರಾಬಾದ್‌ನಲ್ಲಿ ಮೀಟಿಂಗ್ ನಡೆದಂಧಾದ್ದು, ವಿಶೇಷವಾಗಿ ರೈತರ ಆತ್ಮಹತ್ಯೆಯ ಪ್ಯಾಕೇಜ್ ಬಗ್ಗೆ ನಮಗೆಲ್ಲಾ ಗೊತ್ತಿರುವ ಹಾಗೆ ವಿಶೇಷವಾಗಿ ನಮ್ಮ ರಾಜ್ಯದಲ್ಲಿ 6 ಜಿಲ್ಲೆಗಳಿಗೆ ಈ ಪ್ಯಾಕೇಜ್ ಬಂದಿದೆ ಈ ಬೆಳೆ ವಿಮೆ ಬಗ್ಗೆ ಹೇಳಬೇಕೆಂದರೆ, ನಾನು ಮತ್ತು ಮಾನ್ಯ ಮುಖ್ಯಮಂತ್ರಿಯವರು ಕೇಂದ ಸರ್ಕಾರದ ಕೃಷಿ ಸಚಿವರಿಗೆ ಮನವಿಯನ್ನು ಕೊಟ್ಟಿದ್ದೇವೆ ನಮ್ಮದು ಜುಲೈ 31ನೇ ತಾರೀಖಿಗೆ ನಮ್ಮ cut off date ಇತ್ತು ನಮಗೆ ಇನ್ನು ಒಂದು ತಿಂಗಳು extention ಕೊಡಬೇಕೆಂದು ಮನವಿಯನ್ನು ಮಾಡಿಕೊಂಡಿದ್ದೆವು ಇನ್ನು ಒಂದು ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಏನು ಆಗುತ್ತಿದೆಯೆಂದರೆ, ಲೋನ್ ಅನ್ನು ತೆಗೆದುಕೊಳ್ಳುವ ಜನರೇ ಹೆಚ್ಚು ಬೆನಿಫಿಟ್ ಅನ್ನು ಪಡೆಯುತ್ತಿದ್ದಾರೆ ನಾನ್ ಲೋನ್‌ನವರು ಮುಂದೆ ಬರುತ್ತಿಲ್ಲ ಆದರೆ ಇವತ್ತು ಈ ಬರಿಗಾಲದ ಪರಿಸ್ಥಿತಿಯನ್ನು ನೋಡಿದರೆ, ಇದರಲ್ಲಿ ರೈತರು ಆಸಕ್ತಿಯನ್ನು ವಹಿಸಿ, ಆ cut off date ಏನು ಇದೆ, ಅದರೊಳಗೆ ಇನ್‌ಶ್ಯೂರೆನ್ಸ್ ಅನ್ನು ಮಾಡಿಸಿದರೆ, ಇವತ್ತು ಇಡೀ ರಾಷ್ಟ್ರದಲ್ಲಿ ನಮ್ಮ ಕರ್ನಾಟಕ ರಾಜ್ಯ ಬೆಳೆ ವಿಮೆಯನ್ನು ಪಡೆದಿರುವುದರಲ್ಲಿ ಎರಡನೇಯ ಸ್ಥಾನದಲ್ಲಿ ಇದೆ ಗುಜರಾತ್ ಮೊದಲನೇಯ ಸ್ಥಾನದಲ್ಲಿ ಇದೆ, ನಮ್ಮ ಕರ್ನಾಟಕ ರಾಜ್ಯ ಎರಡನೆಯ ಸ್ಥಾನದಲ್ಲಿ ಇದೆ ನಾವು 2000ನೇ ಇಸವಿಯಿಂದ ಇಲ್ಲಿಯವರೆಗೂ ವಿಮೆ ಹಣ 250 ಕೋಟಿ ಪ್ರೀಮಿಯಮ್‌ನಲ್ಲಿ ಸುಮಾರು 1,050 ಕೋಟಿ ರೂಪಾಯಿಗಳು ಸೆಟಲ್‌ಮೆಂಟ್ ಆಗಿದೆ ಇದನ್ನು ಇನ್ನು ಹೆಚ್ಚಿನ ಪ್ರಮಾಣದಲ್ಲಿ ಬೆನಿಫಿಟ್ ತೆಗೆದುಕೊಳ್ಳಬೇಕಾಗಿದೆ ಇದರಲ್ಲಿ crop cutting experiments ಇನ್ನು ಪಂಚಾಯತ್‌ವಾರಿನಲ್ಲೆ ಪರಿಶೀಲನೆಯಲ್ಲಿ ಇದೆ ಅದುದರಿಂದ ವಿಲೇಜ್‌ವಾರು ದೂರ ಉಳಿದಿದೆ ಮೊದಲು ಪಂಚಾಯತ್‌ವಾರಿನಲ್ಲೆ ತೆಗೆದುಕೊಳ್ಳುವುದಕ್ಕೆ ಇನ್ನು ಪರಿಶೀಲನೆಯಲ್ಲಿ ಇದೆ ಆದುದರಿಂದ ಮುಂದಿನ ದಿವಸಗಳಲ್ಲಿ ಪರಿಣಾಮಕಾರಿ ಬದಲಾವಣೆಯನ್ನು ತರೋಣವೆಂದು ತಮ್ಮ ಮುಖಾಂತರ ತಿಳಿಸಬಯಸುತ್ತೇನೆ

ಅಧ್ಯಕ್ಷರು ಮಾನ್ಯ ಜಿ ವಿ ಶ್ರೀರಾಮರೆಡ್ಡಿಯವರ ಪ್ರಶ್ನೆಯನ್ನು ತೋಟಗಾರಿಕೆ ಇಲಾಖೆಯಿಂದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ವರ್ಗಾವಣೆಗೊಂಡಿದೆ

ಮೀನುಗಾರಿಕೆ ನೀಡುವ ಅಧಿಕಾರ ಕುರಿತು

51(133) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದ ಕೆರೆಗಳಲ್ಲಿ ಒಳನಾಡು ಮೀನುಗಾರಿಕೆಗೆ ಅವಕಾಶ ನೀಡಲಾಗಿದೆಯೇ ,

ಆ) ಒಳನಾಡು ಮೀನುಗಾರಿಕೆಯ ಹಕ್ಕು ಯಾವ ಇಲಾಖೆಯ ವ್ಯಾಪ್ತಿಗೆ ಬರುತ್ತದೆ ,

ಇ) ಬೆಂಗಳೂರು ನಗರದ ಕೆರೆಗಳಲ್ಲಿ ಮೀನುಗಾರಿಕೆಯನ್ನು ಕೆರೆ ಅಭಿವೃದ್ಧಿ ಪ್ರಾಧಿಕಾರದವರು ಅಡಚಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ರಾಜ್ಯದ ಕೆರೆಗಳಲ್ಲಿ ಒಳನಾಡು ಮೀನುಗಾರಿಕೆಗೆ ಅವಕಾಶ ನೀಡಲಾಗಿದೆ ರಾಜ್ಯದಲ್ಲಿ 3291 ಇಲಾಖಾ ವ್ಯಾಪ್ತಿಯ ಕೆರೆಗಳು, 74 ಜಲಾಶಯಗಳು ಹಾಗೂ 5813 ಕಿ ಮೀ ಉದ್ದದ ನದಿಗಳು ಇರುತ್ತವೆ ಮತ್ತು 22,624 ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆಗಳು ಇರುತ್ತವೆ ಈ ಒಳನಾಡು ಜಲಸಂಪನ್ಮೂಲಗಳಲ್ಲಿ ಮೀನುಗಾರಿಕೆಗೆ ಅವಕಾಶ ನೀಡಲಾಗಿದೆ

ಆ) 40 ಹೆಕ್ಟೇರ್ ಮೇಲ್ಪಟ್ಟು ಅಚ್ಚುಕಟ್ಟು ಹೊಂದಿರುವ ರಾಜ್ಯದ ಎಲ್ಲಾ ಕೆರೆಗಳ - (ಸಂಖ್ಯೆ–3291) ಮೀನುಗಾರಿಕೆ ಅಭಿವೃದ್ಧಿಪಡಿಸುವ ಹಕ್ಕು ಮೀನುಗಾರಿಕೆ ಇಲಾಖೆಯ ವ್ಯಾಪ್ತಿಗೆ ಬರುತ್ತವೆ 40 ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟು ಪ್ರದೇಶವುಳ್ಳ ಎಲ್ಲಾ ಕೆರೆಗಳು (ಸಂಖ್ಯೆ–22,624) ಸಂಬಂಧಪಟ್ಟ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುತ್ತದೆ

ಇ) ಬೆಂಗಳೂರು ನಗರ ವ್ಯಾಪ್ತಿಯ ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಕೆರೆ ಅಭಿವೃದ್ಧಿ ಪ್ರಾಧಿಕಾರದಿಂದ ಕೆರೆಯನ್ನು ಗುತ್ತಿಗೆಗೆ ಪಡೆದ ಖಾಸಗಿ ಬಂಡವಾಳವಾರು ಸಂಸ್ಥೆಯು ಅಡಚಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಕೆರೆ ಅಭಿವೃದ್ಧಿ ಪ್ರಾಧಿಕಾರದಿಂದ ಕೆರೆ ಅಭಿವೃದ್ಧಿ ಕಾರ್ಯವನ್ನು ಪಡೆದ ಖಾಸಗಿ ಬಂಡವಾಳದಾರ ಸಂಸ್ಥೆಗಳು ಆ ಕೆರೆಗಳಲ್ಲಿ ಮೀನುಗಾರಿಕೆ ನಡೆಸಲು ವಿರೋಧ ವ್ಯಕ್ತಪಡಿಸಿದ್ದರಿಂದ, ದಿನಾಂಕ 14 12 2006 ರಂದು ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೆರೆಯ ಅಭಿವೃದ್ಧಿ ವಿಷಯವನ್ನು ಸಮಗ್ರವಾಗಿ ಚರ್ಚಿಸಿ, ಕೆರೆಗಳ ಮೀನು ಪಾಶುವಾರು ಹಕ್ಕನ್ನು ಮೀನುಗಾರಿಕೆ ಇಲಾಖೆಯೇ ನಿರ್ವಹಿಸಿಕೊಂಡು ಹೋಗಲು ಮತ್ತು ಆಯ್ದ ಕೆರೆಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮೀನುಗಾರಿಕೆ ಇಲಾಖೆ

ಕೈಗೊಳ್ಳುವುದು ಸೂಕ್ತವೆಂದು ತೀರ್ಮಾನಿಸಲಾಗಿದ್ದು, ಇದನ್ನು ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಯಪಡಿಸಲಾಗಿದೆ ಈ ಬಗ್ಗೆ ಮುಂದಿನ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಉತ್ತರವನ್ನು ಕೊಟ್ಟಿದ್ದಾರೆ ಅವರು ಉತ್ತರದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರದವರು ಮೀನುಗಾರರಿಗೆ ತೊಂದರೆಯನ್ನು ಕೊಡುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಕೊಟ್ಟಿದ್ದಾರೆ, ಹಾಗಾದರೆ ಅದನ್ನು ನೀವೇ ವಾಪಸ್ಸು ತೆಗೆದುಕೊಂಡು ಅಭಿವೃದ್ಧಿ ಪಡಿಸುತ್ತಿರಾ ? ಏಕೆಂದರೆ ಕೋಟ್ಯಾಂತರ ರೂಪಾಯಿಗಳನ್ನು World Bank ನಿಂದ ಅಭಿವೃದ್ಧಿ ಮಾಡಲೆಂದು ತೆಗೆದುಕೊಂಡಿದ್ದಾರೆ ಆದರೆ ಅಲ್ಲಿರುವ weeds ಅನ್ನು ತೆಗೆಯುತ್ತಿಲ್ಲ ಈಗಾಗಲೇ ಗುತ್ತಿಗೆಯನ್ನು ಸಣ್ಣ ನೀರಾವರಿ ಇಲಾಖೆ, ಜಿಲ್ಲಾ ಪಂಚಾಯತ್‌ನಲ್ಲಿದ್ದ ಕೆರೆಗಳನ್ನು ಇಲಾಖೆಯವರೇ ಟೆಂಡರ್ ಅನ್ನು ಕರೆಯುತ್ತೀರಿ ಈಗ ಕೆರೆ ಅಭಿವೃದ್ಧಿ ಪ್ರಾಧಿಕಾರದವರು ಮೀನು ಹಿಡಿಯುವುದಕ್ಕೆ ಬಿಡುತ್ತಿಲ್ಲ ಇದರ ಬಗ್ಗೆ ತಾವು ಸಭೆಯನ್ನು ಮಾಡಿ, ಮುಂದಿನ ತೀರ್ಮಾನ ಮಾಡುವುದಾಗಿ ಹೇಳಿದ್ದೀರಿ ತಾವು ಅರಣ್ಯ ಸಚಿವರನ್ನು ಕರೆದು ಫೈನಲ್ ತೀರ್ಮಾನವನ್ನು ತೆಗೆದುಕೊಂಡು, ತಮ್ಮ ಇಲಾಖೆಯಲ್ಲಿ ಇಟ್ಟುಕೊಂಡು ಮೀನುಗಾರರಿಗೆ ತೊಂದರೆಯಾಗದ ಹಾಗೆ ನೋಡಿಕೊಳ್ಳಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ

ಶ್ರೀ ಬಿ ನಾಗರಾಜ ಶೆಟ್ಟಿ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ಒಳ್ಳೆಯ ವಿಚಾರವನ್ನು ತಿಳಿಸಿದ್ದಾರೆ ಈ ವಿಚಾರ ಈಗಾಗಲೇ ನಮ್ಮ ಗಮನಕ್ಕೆ ಬಂದಿದೆ ಈ ಕೆರೆ ಅಭಿವೃದ್ಧಿ ಪ್ರಾಧಿಕಾರರವರು Lake Authority of India ದವರು ನಮ್ಮ ಬೆಂಗಳೂರು ನಗರದಲ್ಲಿರುಂತಹ ಕೆರೆಗಳನ್ನು ದುರಸ್ಥಿ ಮಾಡುತ್ತೇವೆಂದು ಹೇಳಿ, ಕೋಟ್ಯಾಂತರ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿರುವ ವಿಚಾರವು ನಮ್ಮ ಗಮನಕ್ಕೆ ಬಂದಿದೆ ಆದರೆ ಮೀನು ಹಿಡಿಯುವ ವ್ಯವಸ್ಥೆಗೆ ಮೀನುಗಾರಿಕೆ ಇಲಾಖೆಗೆ ಸಂಪೂರ್ಣ ಅಧಿಕಾರ ಇರುವುದರಿಂದ ಯಾವುದೇ ತೊಂದರೆಯನ್ನು ಕೊಡಬಾರದೆಂದು ನಾನು ದಿ 14 12 2006ರಂದು ಸಭೆಯನ್ನು ಕರೆದಿದ್ದೆ ಆ ಸಭೆಯಲ್ಲಿ ಅವರು ಒಪ್ಪಿಗೆಯನ್ನು ಕೊಟ್ಟು ಹೋಗಿದ್ದಾರೆ ಅದು ಆದ ನಂತರ ಅವರು ಯಾವುದೇ ವಿಚಾರವನ್ನು ತಿಳಿಸಿಲ್ಲ ಈ ವಿಚಾರ ಸಂಬಂಧಪಟ್ಟ ಅರಣ್ಯ ಮಂತ್ರಿಯವರಿಗೆ ಬರುತ್ತದೆ ನಾನು ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು, ಇಲ್ಲಿ ಕೆರೆಗಳು ಏನಿವೆ, ಅದನ್ನು ವಾಪಸ್ಸು ತೆಗೆದುಕೊಳ್ಳುವ ವ್ಯವಸ್ಥೆ ಆಗಬೇಕೇ ಅಥವಾ ಅದು ಅವರೇ ಮುಂದುವರೆಸಬೇಕೇ ಅದು ಏನೇ ಇದ್ದರೂ ನಮ್ಮ ಮೀನುಗಾರಿಕೆ ಇಲಾಖೆಗೆ ಸಂಬಂಧಪಟ್ಟ ವಿಚಾರದಲ್ಲಿ ನಮ್ಮ ಮೀನುಗಾರರಿಗೆ ತೊಂದರೆಯಾಗದ ಹಾಗೆ

ನೋಡಿಕೊಳ್ಳುವುದು, ನಮ್ಮ ಜವಾಬ್ದಾರಿಯಾಗಿದೆ ಅದಕ್ಕೆ ಬೇಕಾದ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ

ಮಾನ್ಯ ಸದಸ್ಯರು ಮೀನುಗಾರರಿಗೆ ಮನೆಗಳನ್ನು ಕೊಡುವ ವಿಚಾರದಲ್ಲಿ ನಮ್ಮ ಕ್ಷೇತ್ರದಲ್ಲಿ ಕೇವಲ 10 ಮನೆಗಳನ್ನು ಕೊಟ್ಟಿದ್ದಾರೆ ಬೇರೆ ಕ್ಷೇತ್ರಗಳಲ್ಲಿ 100 ಮನೆಗಳನ್ನು ಕೊಟ್ಟಿದ್ದಾರೆ ಈ ರೀತಿ ಏಕೆ ತಾರತಮ್ಯವಾಗಿದೆ ಮೀನುಗಾರರು ಎಲ್ಲರೂ ಒಂದೇ ಅಲ್ಲವೇ ?

ಶ್ರೀ ಬಿ ನಾಗರಾಜ ಶೆಟ್ಟಿ ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ ಈ ವಿಷಯ ಬೇರೆ ಆಗಿದೆ ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಕೇಳಿದರೆ ಉತ್ತರ ಕೊಡುತ್ತೇವೆ

ಅಧ್ಯಕ್ಷರು ಮಾನ್ಯ ಸಚಿವರ ಬಳಿ ಈಗ ಮಾಹಿತಿ ಇಲ್ಲ ತಾವು ಬೇರೆ ಪ್ರಶ್ನೆಯನ್ನು ಕಳುಹಿಸಿ, ಅಥವಾ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಹೋಗಿ ಮಾತನಾಡಿ

ಹಳದಿಪಡಿತರ ಚೀಟಿ ವಿತರಣೆ

52(264) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ ಕಡುಬಡವರಿಗೆ, ದೀನದಲಿತರಿಗೆ, ಹಿಂದುಳಿದವರಿಗೆ ಹಳದಿ ಪಡಿತರ ಚೀಟಿ ಹಂಚುವಲ್ಲಿ ಅವ್ಯವಸ್ಥೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಪಾಲಿಕೆ ವ್ಯಾಪ್ತಿಯಲ್ಲಿ ಹಳದಿ ಪಡಿತರ ಚೀಟಿಗಾಗಿ ಬಂದಿರುವ ಅರ್ಜಿಗಳು ಎ[illegible] ,

ಇ) ಹಳದಿ ಪಡಿತರ ಚೀಟಿ ನೀಡುವುದಕ್ಕೆ ಸರ್ಕಾರ ವಿಧಿಸಿರುವ ಮಾನದಂಡ ಯಾವುದು ,

ಈ) ಶ್ರೀಮಂತರಿಗೆ ಹಳದಿ ಪಡಿತರ ಚೀಟಿ, ಬಡತನ ರೇಖೆಗಿಂತ ಕೆಳಗಿರುವವರಿಗೆ ನೀಲಿ ಪಡಿತರ ಚೀಟಿ ನೀಡಿರುವುದು ಸರಿಯೇ ,

ಉ) ಈ ರೀತಿ ತಪ್ಪೆಸಗಿದ ಅಧಿಕಾರಿ ಹಾಗೂ ಸಿಬ್ಬಂದಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಗೋವಿಂದ ಎಂ ಕಾರ್ಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯಾದ್ಯಂತ ಕೈಗೊಳ್ಳಲಾದ ಮನೆ ಮನೆ ಸಮೀಕ್ಷೆಯ ಪ್ರಕಾರ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿಯೂ ವಿವಿಧ ವರ್ಗವಾರು ಪಡಿತರ ಚೀಟಿಗಳ ವಿತರಣೆಗೆ ಫಲಾನುಭವಿಗಳನ್ನು ಗುರುತಿಸಲಾಗಿರುತ್ತದೆ ಈ ರೀತಿ ಗುರುತಿಸಲಾದ ಫಲಾನುಭವಿಗಳಿಗೆ ಆಯಾ

ವರ್ಗವಾರು ತಾತ್ಕಾಲಿಕ ಪಡಿತರ ಕೂಪನ್‌ಗಳನ್ನೂ ಸಹ ವಿತರಿಸಲಾಗಿರುತ್ತದೆ ಆದರೆ, ಈ ರೀತಿ ವಿತರಿಸಲಾಗಿರುವ ಕೂಪನ್‌ಗಳಲ್ಲಿ ಲೋಪದೋಷಗಳುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಆ) ಮನೆ ಮನೆ ಸಮೀಕ್ಷೆಯ ವೇಳೆ ವಿವಿಧ ವರ್ಗವಾರು ಗುರುತಿಸಲಾದ ಫಲಾನುಭವಿಗಳ ವಿವರ ಕೆಳಕಂಡಂತಿದೆ

ಪಡಿತರ ಪ್ರದೇಶ	ಗುರುತಿಸಲಾದ ಫಲಾನುಭವಿಗಳು				
	ಅನ್ನಪೂರ್ಣ	ಅಂತ್ಯೋದಯ ಅನ್ನ	ಅಕ್ಷಯ	ಎಪಿಎಲ್	ಒಟ್ಟು
ದಾರವಾಡ	147	2626	21568	31714	56055
ಹುಬ್ಬಳ್ಳಿ	286	5590	47804	60101	113781

ಮೇಲ್ಕಂಡಂತೆ ಗುರುತಿಸಲಾದ ಫಲಾನುಭವಿಗಳಿಗೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದ್ದು, ಆ ನಂತರ ಸಾರ್ವಜನಿಕರಿಂದ ವಿವಿಧ ವರ್ಗವಾರು ಪಡಿತರ ಚೀಟಿಯನ್ನು ಕೋರಿ ಅಹವಾಲನ್ನು ಸ್ವೀಕರಿಸಲಾಗಿರುತ್ತದೆ

ಪಡಿತರ ಪ್ರದೇಶ	ಪಡಿತರ ಚೀಟಿ ಕೋರಿ ಸ್ವೀಕರಿಸಿರುವ ಅಹವಾಲುಗಳು				
	ಡೆಮೊ ಗ್ರಾಫಿಕ್	ವರ್ಗ ಬದಲಾವಣೆ	ಹೊಸ ಪ ಚೀಟಿ ಕೋರಿ	ಇತರೆ	ಒಟ್ಟು
ಧಾರವಾಡ	2278	4372	44512	1281	52443
ಹುಬ್ಬಳ್ಳಿ	6726	10348	81970	682	99726

ಇ) ಕುಟುಂಬದ ವಾರ್ಷಿಕ ಆದಾಯವು ಗ್ರಾಮಾಂತರ ಪ್ರದೇಶದಲ್ಲಿ ರೂ 12,000/– ಮತ್ತು ಪಟ್ಟಣ ಪ್ರದೇಶಗಳಲ್ಲಿ ರೂ 17,000/– ಎಂಬುದಾಗಿ ನಿಗಧಿ ಪಡಿಸಲಾಗಿದೆ ಇದರ ಜೊತೆಗೆ ಕುಟುಂಬವು ಬಿಪಿಎಲ್ (ಅಕ್ಷಯ) ಪಡಿತರ ಚೀಟಿ ಹೊಂದಲು ಹಲವು ಮಾನದಂಡಗಳನ್ನು ನಿಗದಿ ಪಡಿಸಲಾಗಿದ್ದು ಕೆಳಕಂಡ ಅರ್ಹತೆಗಳನ್ನುಳ್ಳ ಕುಟುಂಬಗಳಿಗೆ ಎಪಿಎಲ್ ವರ್ಗ ಎಂಬುದಾಗಿ ಪರಿಗಣಿಸಲು ಸೂಚನೆಗಳನ್ನು ನೀಡಲಾಗಿರುತ್ತದೆ

(1) ಮೂರು ಹೆಕ್ಟೇರ್ ಖುಷ್ಕಿ ಜಮೀನು ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹೊಂದಿರುವವರು ,

(2) ಸ್ಥಿರ ದೂರವಾಣಿ ಹೊಂದಿರುವವರು ,

(3) ಸ್ವಂತವಾಗಿ ಯಾರೇ ಡೀಸಲ್ / ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು (ಲೂನಾ / ಟಿವಿಎಸ್ ಮೊಪೆಡ್‌ಗಳನ್ನು ಹೊಂದಿರುವವರನ್ನು ಹೊರತುತಪಡಿಸಿ) ,

(4) ಬ್ಯಾಂಕ್ / ಸಹಕಾರಿ ಸಂಘಗಳಲ್ಲಿ 100 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು ,

(5) ಒಂದು ಚಾಲ್ತಿಯಲ್ಲಿರುವ ಬೋರ್‌ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು ,

(6) ತಿಂಗಳಿಗೆ ರೂ 1,000/–ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ / ಸರ್ಕಾರೇತರ / ಖಾಸಗಿ ಸಿಬ್ಬಂದಿಗಳು ,

(7) ಅದಾಯ ತೆರಿಗೆ ಪಾವತಿಸುವವರು ,

(8) ರಿಜಿಸ್ಟ್ರಡ್ ಕಾಂಟ್ರಾಕ್ಟರ್, ಎಪಿಎಂಸಿ ಟ್ರೇಡರ್ಸ್ / ಕಮೀಷನ್ ಏಜೆಂಟ್ಸ್ / Dealers in seeds / Fertilizers, etc ,

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸುವುದು

ತದನಂತರ ನಗರ ಪ್ರದೇಶದಕ್ಕೆ ನೀಡಿದ ಮಾರ್ಗಸೂಚಿಗಳಲ್ಲಿ ಈ ಕೆಳಕಂಡ ಮಾನದಂಡಗಳನ್ನು ನಿಗಧಿ ಪಡಿಸಲಾಗಿರುತ್ತದೆ

1) 20' x 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು

2) ರಸ್ತೆ ಬದಿಯಲ್ಲಿ ಹಾಗೂ ಸಣ್ಣ ಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವವರು

3) ವಾಸದ / ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ 2000/– ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ

ಮೇಲ್ಕಂಡ ಮಾನದಂಡಗಳಿಗೆ ಒಳಪಟ್ಟಲ್ಲಿ ಅಂತಹವರು ಅಕ್ಷಯ ಪಡಿತರ ಚೀಟಿಯನ್ನು ಹೊಂದಲು ಅನರ್ಹರಾಗಿರುತ್ತಾರೆ

ಈ) ಇಲ್ಲ, ಪ್ರಸ್ತುತ ಸಮಗ್ರ ಗಣಕೀಕರಣ ಯೋಜನೆಯಡಿ ಸಾರ್ವಜನಿಕ ಅಹವಾಲುಗಳಿಗೆ ಅವಕಾಶ ಮಾಡಿಕೊಡಲಾಗಿದ್ದು ಅಹವಾಲುಗಳನ್ನು ಪರಿಶೀಲನೆಗೆ ಒಳಪಡಿಸಿ ಸರಿಪಡಿಸಲು ಕ್ರಮ ವಹಿಸಲಾಗಿರುತ್ತದೆ

ಉ) ಪ್ರಸ್ತುತ ಸಮಗ್ರ ಗಣಕೀಕರಣ ಯೋಜನೆಯಡಿ ಸಾರ್ವಜನಿಕ ಅಹವಾಲುಗಳಿಗೆ ಅವಕಾಶ ಮಾಡಿಕೊಡಲಾಗಿದ್ದು ಅಹವಾಲುಗಳನ್ನು ಪರಿಶೀಲನೆಗೆ ಒಳಪಡಿಸಿ ಸರಿಪಡಿಸಲು ಕ್ರಮ ವಹಿಸಲಾಗಿರುತ್ತದೆ ಈ

ಕ್ರಮವನ್ನು ಸಮೀಕ್ಷಾ ತಂಡದ ಮುಖಾಂತರವೇ ಕೈಗೊಳ್ಳಲಾಗಿದ್ದು ನಿರ್ದಿಷ್ಟವಾಗಿ ತಪ್ಪನ್ನೆಸಗಿರುವ ಅಧಿಕಾರಿ / ಸಿಬ್ಬಂದಿಯ ಮೇಲೆ ಕ್ರಮ ಕೈಗೊಳ್ಳಲಾಗುವುದು'

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯತ್ ಖಾನ್ ಮಾನ್ಯ ಅಧ್ಯಕ್ಷತೆ, ಸರ್ಕಾರದಿಂದ ಉತ್ತರವನ್ನು ಕೊಟ್ಟಿದ್ದಾರೆ ಆದರೆ ಹಳದಿ ಕಾರ್ಡ್ ಏನು ಇದೆ ಇದರಲ್ಲಿ ಬಹಳ ಲೋಪದೋಷಗಳು ಇದ್ದು,- ಇದು ಸರ್ಕಾರದ ಗಮನಕ್ಕೆ ಬಂದಿದ್ದರೂ ಕೂಡ ಇದನ್ನು 9 ತಿಂಗಳುಗಳಾದರೂ ಸರಿಪಡಿಸಲು ಆಗದೇ ಇರುವುದಕ್ಕೆ ಕಾರಣ ಏನು ? ಎರಡನೆಯದಾಗಿ, ಕಳೆದ 9 ತಿಂಗಳುಗಳಿಂದ ನನ್ನ ಮಹಾನಗರದಲ್ಲಿ ಸೀಮೆಎಣ್ಣೆ ಮತ್ತು ಆಹಾರಧಾನ್ಯಗಳನ್ನು ಪೂರೈಸಲಿಲ್ಲ ಇದಕ್ಕೆ ಕಾರಣವೇನು? ಹಲವು ಕಾರ್ಡ್‌ಗಳಲ್ಲಿ ಬಹಳ ಲೋಪದೋಷಗಳಿವೆ ಅದರಲ್ಲಿ ಗಂಡುಮಕ್ಕಳು ಹೆಣ್ಣು ಮಕ್ಕಳಾಗಿದ್ದಾರೆ, ಹೆಣ್ಣು ಮಕ್ಕಳು ಗಂಡು ಮಕ್ಕಳಾಗಿದ್ದಾರೆ ಈ ರೀತಿಯಾಗಿರುವುದನ್ನು ಇದುವರೆಗೂ ಸರಿಪಡಿಸಿಲ್ಲ ನಿಮ್ಮ ಇಲಾಖೆಯ ಸಿಬ್ಬಂದಿಯವರು ಹಳೆಯ ಕಾರ್ಡುಗಳನ್ನೂ ತೆಗೆದುಕೊಂಡಿದ್ದಾರೆ, ಹೊಸ ಕಾರ್ಡುಗಳನ್ನೂ ತೆಗೆದುಕೊಂಡಿದ್ದಾರೆ, ಇದುವರೆಗೂ ಯಾವ ಕಾರ್ಡನ್ನೂ ಹಂಚಿಲ್ಲ ಬಡವರ ಪರಿಸ್ಥಿತಿ ಬಹಳ ಕೆಟ್ಟಿದೆ ಆದ್ದರಿಂದ, ಯಾವಾಗ ಆಹಾರಧಾನ್ಯಗಳನ್ನು ಪೂರೈಸುತ್ತೀರಿ, ಇದೆಲ್ಲವನ್ನು ಯಾವಾಗ ಸರಿಪಡಿಸುತ್ತೀರಿ ಎನ್ನುವುದನ್ನು ಹೇಳಬೇಕು ಅಗ್ಗದ ದರದ ಅಂಗಡಿಗಳು ಖರ್ಚು ಹಾಕಿಕೊಂಡು ಹೋಗುತ್ತಿವೆ ಆದರೆ ಜನರಿಗೆ ಸೀಮೆಎಣ್ಣೆಯಾಗಲೀ, ಆಹಾರ ಧಾನ್ಯಗಳಾಗಲೀ ಯಾವುದೂ ಸಿಗುತ್ತಿಲ್ಲ ಆದ್ದರಿಂದ, ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ವಿವರವಾಗಿ ಹೇಳಬೇಕು

ಶೀ ಗೋವಿಂದ ಎಂ ಕಾರಜೋಳ ಸನ್ಮಾನ್ಯ ಅಧ್ಯಕ್ಷರೇ, 2005ರ ಡಿಸೆಂಬರ್ ನಲ್ಲಿ ಮನೆ ಮನೆ ಸರ್ವೆ ಮಾಡಿದ ಆಧಾರದ ಮೇಲೆ ನಾವು ಕಾರ್ಡುಗಳನ್ನು ವಿತರಣೆ ಮಾಡಿದೆವು ವಿತರಣೆ ಮಾಡಿದ ನಂತರ, ಅದರಲ್ಲಿ ಲೋಪದೋಷಗಳಾಗಿವೆ ಎನ್ನುವ ಕೂಗು ಇಡೀ ರಾಜ್ಯದ ತುಂಬ ಎದ್ದಮೇಲೆ, ಮತ್ತೆ ಅರ್ಜಿ ಕೊಡಲಿಕ್ಕೆ ನಾವು ಅವಕಾಶ ಮಾಡಿಕೊಟ್ಟೆವು ಹೀಗೆ ಅವಕಾಶ ಮಾಡಿಕೊಟ್ಟಂಥ ಸಂದರ್ಭದಲ್ಲಿ 64 ಲಕ್ಷ 70 ಸಾವಿರ ಹೊಸ ಅರ್ಜಿಗಳು ಬಂದಿವೆ ಬಿ ಪಿ ಎಲ್ ಕಾರ್ಡ್ ಕೇಳಿದವರ ಸಂಖ್ಯೆಯೇ ಹೆಚ್ಚಿದೆ ಆದರೆ, ಈಗಾಗಲೇ ರಾಜ್ಯದಲ್ಲಿ ಬಿ ಪಿ ಎಲ್ ಕಾರ್ಡ್ ಕೊಟ್ಟಿರುವಂಥಾದ್ದು 65 ಲಕ್ಷ 55 ಸಾವಿರ ಈಗ ಬಂದಿರುವ ಹೊಸ ಅರ್ಜಿಗಳ ಸಂಖ್ಯೆ 64 ಲಕ್ಷ 70 ಸಾವಿರ ಎಂದರೆ, ನಾವು ಯಾವ ರೀತಿಯಲ್ಲಿ ಕಾರ್ಡುಗಳನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ ಬೆಂಗಳೂರು ಹೊರತುಪಡಿಸಿ, ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು 1 ಕೋಟಿ 10 ಲಕ್ಷ

ಕುಟುಂಬಗಳಿದ್ದರೆ, 1 ಕೋಟಿ 28 ಲಕ್ಷ ಅರ್ಜಿಗಳು ಬಿ ಪಿ ಎಲ್ ಕಾರ್ಡುಗಳಿಗಾಗಿ ಬಂದರೆ, ಎಷ್ಟು ಬೋಗಸ್ ಅರ್ಜಿಗಳು ಬರುತ್ತಿವೆ ಎನ್ನುವುದನ್ನು ತಾವು ಆರ್ಥಮಾಡಿಕೊಳ್ಳಬೇಕಾಗುತ್ತದೆ ಅದಕ್ಕಾಗಿ ನಾನು ಈ ಸದನದ ಎಲ್ಲ ಸದಸ್ಯರಲ್ಲಿ ವಿನಂತಿ ಮಾಡುತ್ತಿದ್ದೇನೆ, ಈಗಾಗಲೇ ನಾವು ಮನೆ ಮನೆಗೆ ಹೋಗಿ ಮತ್ತೆ ಅರ್ಜಿಗಳನ್ನು ಸ್ವೀಕರಿಸಿದ್ದು, ಅವುಗಳನ್ನು ಪರಿಶೀಲನೆ ಮಾಡತಕ್ಕಂಥ ಕೆಲಸ ಮಾಡಿದ್ದೇವೆ ಈಗಾಗಲೇ ಶೇ 80ಕ್ಕಿಂತಲೂ ಹೆಚ್ಚಿನ ಅರ್ಜಿಗಳು ಪರಿಶೀಲನೆಯಾಗಿವೆ ಜನವರಿ 30ನೇ ತಾರೀಖಿನೊಳಗೆ ಎಲ್ಲ ಅರ್ಜಿಗಳ ಪರಿಶೀಲನೆ ಆಗಬೇಕು ಎಂದು ನಾವು ಕೊನೆಯ ದಿನಾಂಕವನ್ನು ಕೊಟ್ಟಿದ್ದೆವು ಈಗಾಗಲೇ ಪರಿಶೀಲನೆ ಮಾಡಿದ್ದಾರೆ ಜನವರಿ 30 ಕೊನೆಯ ದಿನಾಂಕ ಎಂದರೆ, ಅದು ಮುಗಿದು ಕೇವಲ 2 ದಿವಸವಷ್ಟೇ ಆಗಿದೆ ಉಳಿದ ಶೇ 20ರ ಬಗ್ಗೆಯೂ ಕೂಡ ಮಾಹಿತಿ ತರಿಸಿ ಆದಷ್ಟು ಬೇಗನೆ ಕಾರ್ಡುಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ

ಶೀ ಜಿ ವಿ ಶೀರಾಮರೆಡ್ಡಿ ಕಾರಜೋಳರವರೇ, ಜನವರಿ 30ನೇ ತಾರೀಖು ಎಂದು ಲಾಸ್ಟ್ ಡೇಟ್ ಕೊಟ್ಟಿದ್ದಿರಿ ಇವತ್ತು ಫೆಬವರಿ 2 ತಾವು ಏನು ಮಾಹಿತಿ ತರಿಸಿದ್ದೀರಿ? ಮೂರು ವರ್ಷವಾಯಿತು, ಇದುವರೆಗೂ ಈ ಸರ್ಕಾರಕ್ಕೆ ಕಾರ್ಡ್ ವ್ಯವಸ್ಥೆ ಸರಿ ಮಾಡಲಿಕ್ಕಾಗಲಿಲ್ಲ

(ಗೊಂದಲ)

(ವಿರೋಧ ಪಕ್ಷಗಳ ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಈ ರೀತಿ ಎಲ್ಲರೂ ಒಟ್ಟಿಗೇ ಎದ್ದು ನಿಂತುಕೊಂಡರೆ ಹೇಗೆ? ದಯಮಾಡಿ ಒಬ್ಬೊಬ್ಬರಾಗಿ ಮಾತನಾಡಿ ದಯಮಾಡಿ ಕುಳಿತುಕೊಳ್ಳಿ, ಅವರು ಉತ್ತರ ಹೇಳುತ್ತಾರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ನಿಮ್ಮ ನಾಯಕರು ನಿಂತಿದ್ದಾರೆ ವಿರೋಧ ಪಕ್ಷ ನಾಯಕರು ನಿಂತಾಗ ಎಲ್ಲರೂ ನಿಂತುಕೊಂಡುಬಿಟ್ಟರೆ ಹೇಗೆ? ಎಲ್ಲರಿಗೂ ನಾವು ಟೈಮಿಂಗ್ ಕೊಟ್ಟಾಯಿತು, ಎಲ್ಲವನ್ನೂ ಕೊಟ್ಟಾಯಿತು ಏನೂ ಪ್ರಯೋಜನವಾಗಲಿಲ್ಲ

ಶೀ ಎನ್ ಧರಂಸಿಂಗ್ ಮಾನ್ಯ ಅಧ್ಯಕ್ಷರೇ, ನಮ್ಮ ಸುದೈವಕ್ಕೆ ಮಾನ್ಯ ಯಡಿಯೂರಪ್ಪನವರು ಈಗ ಸದನದಲ್ಲೇ ಇದ್ದಾರೆ ಹಿಂದೆ ನಾನು ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ, ಯಡಿಯೂರಪ್ಪನವರು ಪ್ರತಿಪಕ್ಷದ ನಾಯಕರಾಗಿ ನನ್ನ ಜಾಗದಲ್ಲಿ ಕುಳಿತು, ಮೊಟ್ಟಮೊದಲನೆಯದಾಗಿ ಪಡಿತರ ಚೀಟಿ ವಿತರಣೆ ಬಗ್ಗೆ ಪ್ರಸ್ತಾಪ ಮಾಡಿದ್ದರು ಎಲ್ಲ ಸದಸ್ಯರು ಕೂಡ ಚರ್ಚೆಯಲ್ಲಿ ಭಾಗವಹಿಸಿದ್ದರು 3ನೇ ತಾರೀಖಿಗೆ ಇವರ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷ ತುಂಬುತ್ತಿದೆ ಇವತ್ತು ಕಾರಜೋಳರವರು ಹೇಳುತ್ತಿರತಕ್ಕಂಥಾದ್ದರ ಬಗ್ಗೆ ನಮ್ಮ ಆಕ್ಷೇಪಣೆ ಇಲ್ಲ ಅದು ವ್ಯವಹಾರಿಕವಾಗಿ ಸರಿ ಇರಬಹುದು ಆದರೆ

ಸ್ಪಷ್ಟವಾದಂಥ ಒಂದು ನಿರ್ಧಾರವನ್ನು, ಈ ರಾಜ್ಯದ ಬಡಜನತೆಗೆ ಹೇಳಬೇಕಾಗಿದೆ ಅವರ ಹೊಟ್ಟೆಗೆ ಅನ್ನ ಮುಟ್ಟತಕ್ಕಂಥ ರೀತಿಯಲ್ಲಿ ಪಡಿತರ ಚೀಟಿ ವಿತರಣೆ ಮಾಡತಕ್ಕಂಥ ಕೆಲಸ ಆಗಬೇಕು ರೈತರ ಬಗ್ಗೆ, ಬಡವರ ಬಗ್ಗೆ ಮಾತನಾಡತಕ್ಕಂಥ ಈ ಸಮ್ಮಿಶ್ರ ಸರ್ಕಾರದ ಉಪಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಈ ಸದನದಲ್ಲಿದ್ದು, ಅವರು ಒಂದು ನಿರ್ದಿಷ್ಟವಾದಂಥ ಹೇಳಿಕೆಯನ್ನು ಈ ಸದನಕ್ಕೆ ಕೊಡಬೇಕು ಎಲ್ಲಿಯವರೆಗೆ ಡಿಮ್ಯಾಂಡ್ ಸರ್ವೆ ಆಗುತ್ತಿದೆ? ಎಲ್ಲಿಯವರೆಗೆ ಅದನ್ನು ಮಾಡುತ್ತಾ ಹೋಗುತ್ತೀರಿ? ಇದು ಶೀರಾಮರೆಡ್ಡಿಯವರು ಮತ್ತು ಎಲ್ಲ ಸದಸ್ಯರೂ ಕೇಳತಕ್ಕಂಥ ಪಶ್ನೆ ಅದನ್ನು ಇಲ್ಲಿ ಜಬ್ಬಾರ್ ಖಾನೆ ಹೊನ್ನಾಳಿಯವರು ಕೇಳಿದ್ದಾರೆ ಇವತ್ತು ಈ ರಾಜ್ಯದ ಜನತೆಗೆ ಹೊಟ್ಟೆಗೆ ಅನ್ನವಿಲ್ಲ ಕೇವಲ ಸಮಾವೇಶದ ಮೂಲಕ, ಹೇಳಿಕೆ ಮೂಲಕ ಹೊಟ್ಟೆ ತುಂಬುವುದಿಲ್ಲ ಈ ಕಾರ್ಯಕಮದ ಬಗ್ಗೆ ಯಾವಾಗ ನಿರ್ಧಾರ ತೆಗೆದುಕೊಳ್ಳುತ್ತೀರಿ, ಯಾವಾಗ ಮಾಡುತ್ತೀರಿ ಎನ್ನತಕ್ಕಂಥಾದ್ದನ್ನು ಹೇಳಬೇಕು ಈ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವೇನು ಎನ್ನುವುದನ್ನು ಸ್ಪಷ್ಟಪಡಿಸಬೇಕು

ಶೀ ಜಿ ವಿ ಶೀರಾಮರೆಡ್ಡಿ ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಹಾಗೆ ನನ್ನದೂ ಒಂದು ಪಶ್ನೆ ಇದೆ

ಅಧ್ಯಕ್ಷರು ಇದರ ಬಗ್ಗೆ ಬಹಳ ಜನ ಮಾತನಾಡುವವರಿದ್ದಾರೆ ಆದ್ದರಿಂದ ಇದನ್ನು ಅರ್ಧ ಗಂಟೆ ಚರ್ಚೆಯಾಗಿ ನಾಳೆ ತೆಗೆದುಕೊಳ್ಳುತ್ತೇನೆ ಆಯಿತು, ಇದನ್ನು ಅರ್ಧ ಗಂಟೆ ಚರ್ಚೆಯನ್ನಾಗಿ ಕನ್ವರ್ಟ್ ಮಾಡೋಣ

ಕೊಬ್ಬರಿಗೆ ಬೆಂಬಲ ಬೆಲೆ ನಿಗದಿ ಮಾಡುವುದು

53(422) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕೊಬ್ಬರಿ ಬೆಲೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಕೊಬ್ಬರಿಗೆ ಬೆಂಬಲ ಬೆಲೆ ನಿಗದಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ,

ಇ) ಇದುವರೆಗೂ ಕೊಬ್ಬರಿಗೆ ಬೆಂಬಲ ಬೆಲೆ ನೀಡಿರುವುದೆಷ್ಟು ?

ಶ್ರೀ ಶರಣ ಬಸಪ್ಪ ದರ್ಶನಾಪೂರ್ (ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು

ಆ) ಕೊಬ್ಬರಿಗೆ ಬೆಂಬಲ ಬೆಲೆಯನ್ನು ಪ್ರತಿ ವರ್ಷ ಕೇಂದ್ರ ಸರ್ಕಾರವು ನಿಗದಿ ಮಾಡುತ್ತದೆ 2006-07ನೇ ಸಾಲಿನಲ್ಲಿ ಉಂಡೆ ಕೊಬ್ಬರಿಗೆ ಕ್ವಿಂಟಾಲ್ ಒಂದಕ್ಕೆ ರೂ 3840/- ಹಾಗೂ ಮಿಲ್ಲಿಂಗ್ ಕೊಬ್ಬರಿಗೆ ರೂ 3590/- ಗಳ ಬೆಂಬಲ ಬೆಲೆ ನಿಗದಿಪಡಿಸಿದೆ ರಾಜ್ಯ ಸರ್ಕಾರ ರೈತರ

ಹಿತದೃಷ್ಟಿಯಿಂದ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ರೈತರು ತಂದ ಕೊಬ್ಬರಿಯನ್ನು ಟೆಂಡರ್ / ಹರಾಜು ಮುಖಾಂತರ ಗರಿಷ್ಟ ರೂ 4700 ಕ್ಕಿಂತ ಕಡಿಮೆ ಬೆಲೆಗೆ ಮಾರಾಟವಾದಾಗ ವ್ಯತ್ಯಾಸದ ಹಣವನ್ನು ಪರಿಹಾರವಾಗಿ ಗರಿಷ್ಟ ರೂ 600–00 ರವರೆಗೆ ದಿನಾಂಕ 11/01/2007 ರಿಂದ 24/01/2007 ರವರೆಗೆ ನೀಡಿದೆ

ಇ) ಪರಿಹಾರ ಧನವನ್ನಾಗಿ ಗರಿಷ್ಟ ರೂ 600–00 ರವರೆಗೆ ನೀಡಲು, ಅವರ್ತ ನಿಧಿಯಿಂದ ರೂ 6 25 ಕೋಟಿ ರೂ ಗಳನ್ನು ಬಿಡುಗಡೆ ಮಾಡಲಾಗಿದೆ

ಪ್ರಶ್ನೆ ಸಂಖ್ಯೆ 422

ಶೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ, ಇವರು ಬೆಂಬಲ ಬೆಲೆಯ ಬಗ್ಗೆ ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿದರೆ ಇದು ನಿಜಕ್ಕೂ ಅತ್ಯಂತ ಅಪಾಯಕಾರಿ ಬೆಳವಣಿಗೆ ಕೊಬ್ಬರಿ ಬೆಳೆವ ರೈತರಿಗೆ ಮತ್ತು ಕೊಬ್ಬರಿ ವ್ಯಾಪಾರಸ್ಥರಿಗೆ ಇವರಿಂದ ಯಾವ ರಕ್ಷಣೆಯೂ ಇಲ್ಲ ಪ್ರಾಮಾಣಿಕವಾಗಿ ಹೇಳುವುದಾದರೆ ಅವರು ನೆಲ ಕಚ್ಚಿದ್ದಾರೆ ಅವರು ಒಂದೇ ಸಮನೆ ಕೂಗುತ್ತಿದ್ದಾರೆ ಇವರ ಬಗ್ಗೆ ಸರ್ಕಾರದವರು ಬರೀ ಮಾತನಾಡುತ್ತಾರೆ, ಹೇಳುತ್ತಾರೆ, ಘೋಷಣೆ ಮಾಡುತ್ತಾರೆ ಇವರು ಏನು ಬೆಂಬಲ ಬೆಲೆಯನ್ನು ಕೊಟ್ಟಿದ್ದಾರೆ, ಎಷ್ಟು ಕೊಟ್ಟಿದ್ದಾರೆ, ಎಷ್ಟು ವರ್ಷದಿಂದ ಕೊಡುತ್ತಿದ್ದಾರೆ, ಯಾವ ರೀತಿ ಕೊಡುತ್ತಿದ್ದಾರೆ ? ಇವರ ಬಗ್ಗೆ ಯಾವುದೇ ಪಾಮಾಣಿಕ ಪಯತ್ನವಿಲ್ಲ ಆದ್ದರಿಂದ ಅವರನ್ನು ಉಳಿಸಲು ಏನು ವ್ಯವಸ್ಥೆ ಮಾಡಿದ್ದಾರೆ ಎನ್ನುವುದನ್ನು ತಾವು ಹೇಳಬೇಕು

ಶೀ ಶರಣಬಸಪ್ಪ ದರ್ಶನಾಪುರ್ ಸನ್ಮಾನ್ಯ ಅಧ್ಯಕ್ಷರೇ, ಕೊಬ್ಬರಿ ಬೆಲೆ ಕುಸಿದಂಥ ಸಂದರ್ಭದಲ್ಲಿ ಸರ್ಕಾರ ಆ ಭಾಗದ ಕೊಬ್ಬರಿ ಬೆಳೆಗಾರರಿಗೆ ದಿನಾಂಕ 11–01–2007 ರಿಂದ 24–01–2007ರವರೆಗೆ ಮಾರಾಟವಾಗಿರತಕ್ಕಂಥ ಕೊಬ್ಬರಿಗೆ ಪತಿ ಕ್ವಿಂಟಾಲ್‌ಗೆ 600 ರೂ ಗಳವರೆಗೆ difference amount ಕೊಡತಕ್ಕಂಥ ಕೆಲಸ ಮಾಡಿದ್ದೇವೆ ಈಗಾಗಲೇ ಸುಮಾರು ಒಂದು ಲಕ್ಷ ಕ್ವಿಂಟಾಲ್ ಖರೀದಿಯಾಗಿದ್ದು, 6 ಕೋಟಿ 25 ಲಕ್ಷ ರೂ ಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಕೊಡಲಾಗಿದೆ

ಶೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಈ ಸರ್ಕಾರದ ಗೊಂದಲದಿಂದಾಗಿ ಆ ಭಾಗದ ರೈತರು ನಾಶವಾಗಿದ್ದಾರೆ ಸಚಿವರು ಮೀಟಿಂಗ್ ಕರೆದು, ಡಿ ಸಿ ಯವರು 4,900 ರೂ ಗಳನ್ನು ಕೊಡುತ್ತಾರೆ ಎಂದು ಹೇಳಿದರು ಇನ್ನೊಂದು ಸಲ 4,775 ರೂ ಗಳನ್ನು ಕೊಡುತ್ತೇವೆ ಎಂದು ಡಿಕ್ಲೇರ್ ಮಾಡಿದರು ಮತ್ತೊಂದು ಸಲ, ನಾವು ಈ ಹೇಳಿಕೆಯನ್ನು ಮಾಡಿಯೇ ಇಲ್ಲ ಎಂದು ಹೇಳಿದರು ಆಮೇಲೆ ಉಪ ಮುಖ್ಯಮಂತಿಗಳು ಹೇಳಿಕೆ ಕೊಟ್ಟು, ನಾವು 600 ರೂ ಗಳನ್ನು ಸಬ್ಸಿಡೈಸ್ಡ್ ಮಾಡುತ್ತೇವೆ ಎಂದು

ಹೇಳಿದರು ಇವತ್ತು ಇವರು ಅಲ್ಲಿ ಕೊಬ್ಬರಿಯನ್ನು ಕೊಳ್ಳಬೇಕಾಗಿತ್ತು ಅಥವಾ ಇವರು ನಫೆಡ್‌ಗೆ ಮೊದಲೇ ಬರೆಯಬೇಕಾಗಿತ್ತು ಅದ್ಯಾವುದನ್ನೂ ತಾವು ಮಾಡಲಿಲ್ಲ ವರ್ತಕರು ಕೊಳ್ಳುವುದು, ಇವರು ದುಡ್ಡು ಕೊಡುವುದು ಎಂದು ಆಯಿತು ಹಿಂದೆ ನಾನು ಈ ಶಾಸನಸಭೆಯಲ್ಲಿ ಹೇಳಿದ್ದೆ, ನಂಬರ್ ಟೂನಲ್ಲಿ ಹೋಗುತ್ತಿದೆ, ತಿಪಟೂರು ಮಾರುಕಟ್ಟೆಯನ್ನು ಮುಚ್ಚುತ್ತೀರಿ, ನೀವು ನಿರ್ನಾಮ ಮಾಡುತ್ತಿದ್ದೀರಿ, ನಿಮ್ಮ ಎದುರಿಗೇ ಕುಳಿತುಕೊಂಡು, ನಾನು ನಂಬರ್ ಟೂನಲ್ಲಿ ಮಾಡುತ್ತೇನೆ ಎಂದು ಮಾತನಾಡುತ್ತಾರೆ, ನಿಮಗೆ ಮಂತಿಗಿರಿ ಮಾಡಲು ಶಕ್ತಿಯಿಲ್ಲ, ತಿಪಟೂರು ಮಾರುಕಟ್ಟೆ ನಾಶವಾಗಿ ಹೋಯಿತು, outside APMC ಕೊಬ್ಬರಿ ತುಂಬುತ್ತಿದ್ದಾರೆ ಎಂದು ನಾನು ಕಳೆದ ಅಧಿವೇಶನದಲ್ಲಿ ಹೇಳಿದ್ದೆ ತಾವು ರೆಕಾರ್ಡ್ ತೆಗೆಸಬೇಕು ಈಗ ಏನಾಗಿದೆ ಎಂದರೆ, entire trading community ಇವರಿಂದ ಆಚೆ ಉಳಿದು ಬಿಟ್ಟಿದೆ ಇಬ್ಬರೋ, ಮೂರು ಜನರೋ ತಿಪಟೂರಿನಲ್ಲಿ ಕೊಬ್ಬರಿ ಕೊಳ್ಳುವಂಥ ಸ್ಥಿತಿ ನಿರ್ಮಾಣವಾಗಿ ಹೋಯಿತು ಯಾರು regular business ಮಾಡುತ್ತಿದ್ದರು, ಅವರ್ಯಾರೂ ದಂಧೆ ಮಾಡುವ ಹಾಗಿಲ್ಲ ಈ ಇಬ್ಬರು ಮೂವರು ಜನರಿಗೆ constraint ಇದೆ ಒಂದು ಲಕ್ಷ ಕ್ವಿಂಟಾಲ್ ಕೊಬ್ಬರಿ ಬಂದರೆ, ಬಂಡವಾಳ ಹಾಕಿ ಅದನ್ನು ಕೊಳ್ಳುವಂಥ ವರ್ತಕ ಯಾರಿದ್ದಾನೆ ತಿಪಟೂರಿನಲ್ಲಿ? ಅದನ್ನಾದರೂ ಸರ್ಕಾರ ಯೋಚನೆ ಮಾಡಬೇಕಲ್ಲವೇ? ಅದನ್ನು ಮಾಡಲೇ ಇಲ್ಲ ಇವರು 600 ರೂಗಳನ್ನು ಕೊಡುತ್ತಿದ್ದ ಹಾಗೇ, ಕೊಬ್ಬರಿ ಬೆಲೆಯನ್ನು 4,100 ರಿಂದ 3,400 – 3,200 ರೂಗಳಿಗೆ ಇಳಿಸಿಬಿಟ್ಟರು ರೈತರ ಹತ್ತಿರ 260 ರೂಗಳನ್ನು ಡಿಡಕ್ಟ್ ಮಾಡಿದರು ನಮಗೆ CST ಇಷ್ಟು ಹೋಗುತ್ತದೆ, ಸೆಸ್ ಇಷ್ಟು ಹೋಗುತ್ತದೆ, ಇಷ್ಟು ದಿವಸ ನಾವು ಅದನ್ನೆಲ್ಲ ಕಟ್ಟುತ್ತಿರಲಿಲ್ಲ ಎಂದು ಹೇಳಿ ವರ್ತಕರು ರೈತರಿಂದ ವಾಪಸ್ಸು ತೆಗೆದುಕೊಂಡರು ತಾವು 600 ರೂಗಳನ್ನು ಡಿಕ್ಲೇರ್ ಮಾಡಿದ ಮೇಲೆ, 250 ರೂಗಳಿಂದ 300 ರೂಗಳವರೆಗೆ ಡಿಡಕ್ಟ್ ಮಾಡಿದ್ದಾರೆ ಇದಾದ ಮೇಲೆ ನಫೆಡ್ ಓಪನ್ ಮಾಡಿದರು 26ನೇ ತಾರೀಖು ನಫೆಡ್ ಕೊಬ್ಬರಿ ಕೊಳ್ಳುತ್ತದೆ ಎಂದರೆ, 25ನೇ ತಾರೀಖು 4,200 ರೂಗಳಿಗೆ ಕೊಬ್ಬರಿಯನ್ನು ತಿಪಟೂರಿನಲ್ಲಿ ಕೊಳ್ಳುತ್ತಾರೆ ಎಂದರೆ ಈ ಸರ್ಕಾರ ಬದುಕಿದೆಯೇ? ಸತ್ತಿದೆಯೇ? ನೀವು ಇನ್ನೂ ಇದ್ದೀರಾ? The day NAFED had started purchases, ಅಲ್ಲಿ 4,200 ರೂ ಗಳಿಗೆ ಟೆಂಡರ್ ಹಾಕುತ್ತಾರೆ ಅಲ್ಲಿಯವರೆಗೆ ನೀವು ಹೋಗುತ್ತೀರಿ, ನಿಮ್ಮ ಡಿ ಸಿ ಹೋಗುತ್ತಾರೆ ಇವರೆಲ್ಲ ಕಾಡಿ ಬೇಡಿ 5 ಮೀಟಿಂಗ್‌ಗಳನ್ನು ಮಾಡಿದರೂ ಒಬ್ಬ ವರ್ತಕನನ್ನೂ ನೀವು ತಾಕೀತು ಮಾಡಲು ಆಗಲಿಲ್ಲ, ಕೊಬ್ಬರಿ ಖರೀದಿಸಲು ಆಗಲಿಲ್ಲ ಆವತ್ತು ಹೇಗೆ ತೆಗೆದುಕೊಂಡರು? ನಫೆಡ್ ಓಪನ್

ಆಗಲು ಬಿಡಕೂಡದು ಎಂದು ಶಾಮೀಲಾಗಿ ಕೆಲಸ ಮಾಡುತ್ತಾರೆ ತಾವು ಬಿಗಿಯಾಗದೇ ಹೋದರೆ, ರೈತರು ನಿರ್ನಾಮವಾಗಿ ಬಿಡುತ್ತಾರೆ

ಅಧ್ಯಕ್ಷರು ಇದು ಒಂದು ವಿಷ ವೃತ್ತ ಅದನ್ನು ಯಾವ ರೀತಿಯಲ್ಲಿ ಸರಿಪಡಿಸಬಹುದು ಎನ್ನುವ ಬಗ್ಗೆ ಏನಾದರೂ ಸಲಹೆ ಇದ್ದರೆ ಹೇಳಿ

ಶೀ ಜೆ ಸಿ ಮಾಧುಸ್ವಾಮಿ . ನಿಮಗೆ ನಂಬರ್ ಟೂ ಕಂಟೋಲ್ ಮಾಡಲಿಕ್ಕೆ ಆಗಲಿಲ್ಲ CST, C Form ತೆಗೆದುಬಿಡಿ ಎಂದು ನಾನು ಇಲ್ಲಿ ಆವತ್ತು ಬೇಡಿಕೊಂಡೆ ಯಾರೂ C Formನಲ್ಲಿ ತೆಗೆದುಕೊಂಡು ಹೋಗುತ್ತಿಲ್ಲ, ಯಾರೂ CST ಕೊಡುತ್ತಿಲ್ಲ ಮರ್ಯಾದೆಯಾಗಿ ಬಾಳುವ ವರ್ತಕರ್ಯಾರಾದರೂ, ನಾನು C Form ಕೊಡಬೇಕು, CST ಕೊಡಬೇಕು ಎಂದು ಹೋದರೆ, ವ್ಯಾಪಾರ ಮಾಡುವುದನ್ನು ನಿಲ್ಲಿಸಿ, 90 – 100 ಜನರು ಕೊಬ್ಬರಿ ಕೊಳ್ಳುವ ಕಡೆ ಇಬ್ಬರು, ಮೂವರಿಗೆ ಬಂದು ನಿಂತುಕೊಂಡರೆ ಮಾರುಕಟ್ಟೆಗಳಲ್ಲಿ ವ್ಯಾಪಾರವಾಗುತ್ತದೆಯೇ? ಇವತ್ತು ತೆಂಗಿನ ಕಾಯಿ ಸುಲಿಯುತ್ತಿದ್ದ ವ್ಯಾಪಾರ ಬಂದ್ ಆಯಿತು ಎಳನೀರು ವ್ಯಾಪಾರ ಬಂದ್ ಆಯಿತು 20–25 ಸಾವಿರ ಚೀಲ ಕೊಬ್ಬರಿ ಬರುವ ಕಡೆ ಲಕ್ಷ ಚೀಲದಷ್ಟು ಕೊಬ್ಬರಿ ಇವತ್ತು ತಿಪಟೂರಿಗೆ ಹರಾಜುಗೋಸ್ಕರ ಬರುತ್ತಿದೆ ಕೊಳ್ಳುವುದಕ್ಕೆ ಯಾರಿಗೆ ಶಕ್ತಿ ಇಲ್ಲ, ಅವರ ಹತ್ತಿರ ದುಡ್ಡು ಎಷ್ಟು ಇರುತ್ತದೋ ಅಷ್ಟಕ್ಕೆ ಕೊಳ್ಳುತ್ತಾರೆ ಇಲ್ಲಿಂದ ರವಾನೆಯಾಗಿ ಅವನು ದುಡ್ಡು ಕೊಟ್ಟ ಮೇಲೆ ಇವರು ಇಲ್ಲಿ payment ಮಾಡಬೇಕಾಗಿದೆ ಇದನ್ನು ಎಲ್ಲಾದರೂ ನೀವು ಯೋಚನೆ ಮಾಡಿದ್ದೀರಾ? ವರ್ತಕರು ಕೊಳ್ಳುವುದಕ್ಕೆ ನೀವು 600 ರೂಪಾಯಿ subsidy ಕೊಡುತ್ತೇವೆಂದು ಸರ್ಕಾರದ ಒಂದು scheme ಮಾಡಿದರೆ, ಎಲ್ಲಾದರೂ ನೀವು ಈ ಬಗ್ಗೆ ಕೇಳಿದ್ದೀರಾ? ನೀವು purchase ಮಾಡುತ್ತೀರಾ? ಅವರ ಅಂಗಡಿಯಲ್ಲಿ ಕೊಳ್ಳುವುದಂತೆ, ಇವರು 600 ರೂಪಾಯಿಗಳನ್ನು ಆ ಚೀಟಿ ಮೇಲೆ ಅವರಿಗೆ pass on ಮಾಡುವುದಂತೆ ಇದು ಸರ್ಕಾರದ ಯೋಜನೆಯೇ? ಯಾವ ಅಧಿಕಾರದಲ್ಲಿ ನೀವು ಅದನ್ನು ಮಾಡಿದಿರಿ? How could you pass on the difference? ನೀವು ಹೇಳಿದ ದಿವಸ ಅರಸೀಕೆರೆಯಲ್ಲಿ 3400 ರೂಪಾಯಿಗಳಿಗೆ ಅಲ್ಲಿ ಹಾಕಿದರು ಇಡೀ ಅರಸೀಕೆರೆ ಬಂದ್ ಆಯಿತು ರಾತ್ರಿ 10 ಗಂಟೆಯವರೆಗೆ strike ಆಯಿತು ನೀವು ಯಾರಾದರೂ ಅಲ್ಲಿಗೆ ಹೋಗಿದ್ದೀರಾ?

(ಗೊಂದಲ)

ಶೀ ವಾಟಾಳ್ ನಾಗರಾಜ್ ಕೊಬ್ಬರಿ ವ್ಯಾಪಾರ ನಾಶವಾಗುತ್ತಿದೆ ತಿಪಟೂರು ನಾಶವಾಗುತ್ತಿದೆ ಇವರು ವ್ಯಾಪಾರಸ್ಥರ ಪರ ಇದ್ದಾರೆಯೇ ಹೊರತು ರೈತರ ಪರ ಇಲ್ಲ

(ಗೊಂದಲ)

ಅಧ್ಯಕ್ಷರು ವಾಟಾಳ್ ನಾಗರಾಜ್‌ರವರೆ, ದಯಮಾಡಿ ಕೇಳಿ ಪಶ್ನೋತ್ತರ ಕಾಲದಲ್ಲಿ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ ದಯಮಾಡಿ ನಾನು ಹೇಳುವುದನ್ನು ಕೇಳಿ

(ಗೊಂದಲ)

ಶೀ ಜೆ ಸಿ ಮಾಧುಸ್ವಾಮಿ ನಾನು ಹೇಳುವುದನ್ನು ದಯವಿಟ್ಟು ಸ್ವಲ್ಪ ಕೇಳಿ ಒಂದು ವಾರಕ್ಕೆ close ಮಾಡಿಬಿಡುತ್ತೇವೆಂದರು ಒಂದು ತಿಂಗಳವರೆಗೆ subsidy ಕೊಡುತ್ತೇವೆಂದು ಹೇಳುವುದಕ್ಕೆ ನಿಮಗೇನಾಗಿತ್ತು? ಎಲ್ಲರೂ ಮುಗಿಬಿದ್ದುಬಿಟ್ಟರು ಕೊಬ್ಬರಿ ಸುಲಿಯುವುದಕ್ಕೆ ಸಿಗುತ್ತಾರೆಯೇ? ಕೊಬ್ಬರಿ ಒಡೆಯುವುದಕ್ಕೆ ಸಿಗುತ್ತಾರೆಯೇ? ನೀವು declare ಮಾಡಿ ಒಂದು week ನಲ್ಲಿ ನಾವು subsidy close ಮಾಡುತ್ತೇವೆಂದು ಹೇಳುತ್ತಾರಲ್ಲಾ? ಇದು ಸರ್ಕಾರ ನಡೆಸುವ ರೀತಿಯೇ? ಒಂದು ವಾರದೊಳಗೆ ಲಕ್ಷಾಂತರ ಚೀಲ ಕೊಬ್ಬರಿಯನ್ನು ನಾವು ಸುಲಿದು ಒಡೆದು yardಗೆ ತಂದು ಹಾಕುವುದಕ್ಕೆ ಆಗುತ್ತದೆಯೇ? ಎಲ್ಲಿ store ಮಾಡುತ್ತೀರಿ? ಯಾರು tender ಹಾಕುತ್ತಾರೆ? ಆಮೇಲೆ ಇವರು ಹೋಗಿ APMC ಯಲ್ಲಿ ಕುಳಿತುಕೊಂಡು ವರ್ತಕರಿಗೆ command ಮಾಡುತ್ತಾರೆ ಇದು ಎಲ್ಲೂ ನಾವು ಕೇಳಿಲ್ಲ ವರ್ತಕರು 3600 ರೂಪಾಯಿ ಎಂದು tender ಹಾಕಿದರೆ ನಿಮ್ಮ officers 3,750 ಕ್ಕೆ ಹಾಕೆಂದು ಹೇಳುತ್ತಾನೆ Purchase ಮಾಡುವವರು ಯಾರು? ಅವನಿಗೆ ಇಷ್ಟ ಇರುವುದಕ್ಕೆ ಹಾಕುತ್ತಾನೆ ಮಿಕ್ಕಿದ್ದು ಮಾಡುವುದು ನಿಮ್ಮ ಕೆಲಸವಲ್ಲವೇ? ಏನೂ ಗೊತ್ತಿಲ್ಲ ಇವರು yard ಗೆ ಹೋಗಿ 3,750ಕ್ಕೆ ತಿದ್ದು tender ಹಾಕು ಎಂದು ಹೇಳುವುದು ನಿಮಗೆ ಅಧಿಕಾರವಿದೆಯೇ? Tender ತಿದ್ದಿಸುವುದಕ್ಕೆ ತಮಗೆ ಅಧಿಕಾರವೇ ಇಲ್ಲ ಯಾವ ಕಾನೂನಿನಲ್ಲಿ ತಿದ್ದುತ್ತೀರಿ? ನೀವು ಹೋಗಿ ಟೆಂಡರ್‌ನಲ್ಲಿ ಇಷ್ಟಕ್ಕೇ ಹಾಕು ಎಂದು ಹೇಳುವುದಕ್ಕೆ ನೀವೇನು ವ್ಯಾಪಾರಸ್ಥರೇ? ಎಲ್ಲಾ ಆದಮೇಲೆ ನೀವು ಕೊಡುತ್ತೀರಾ?

ಶೀ ಜೆ ವಿ ಶೀರಾಮರೆಡ್ಡಿ ಈ ಸರ್ಕಾರ ಕೊಬ್ಬರಿ ಬೆಳೆಯತಕ್ಕಂಥ ರೈತರ ಬಗ್ಗೆ ಮಾತಿಗೆ ತಪ್ಪಿದಂಥ ಸರ್ಕಾರ ಇದು ಆ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಮುಖ್ಯಮಂತಿಗಳು ಸಭೆ ಕರೆದಿದ್ದರು ನಾನು ಸಹ ಆ ಸಭೆಗೆ ಹಾಜರಾಗಿದ್ದೆನು ಮಂತಿಗಳಾದಂಥ ಮಾನ್ಯ ದರ್ಶನಾಪುರರವರು ಆ ಸಭೆಯಲ್ಲಿ ಇದ್ದರು ವಲ್ಲರು ಸಭೆಯಲ್ಲಿ ಇದ್ದಾಗ ನಾವು 4775 ರೂಪಾಯಿಗಳಿಗೆ ತೆಗೆದುಕೊಳ್ಳುತ್ತೇವೆಂದು ಮುಖ್ಯ ಮಂತಿಗಳು ಸ್ವತ ತೀರ್ಮಾನ ಮಾಡಿ ಹೇಳಿದರು 4775 ರೂಪಾಯಿಗಳನ್ನು ಕೊಡಲು ಸರ್ಕಾರ ತೀರ್ಮಾನ ಮಾಡಿದೆ ಎಂದು ಸಂಬಂಧಪಟ್ಟ ಮಂತಿಗಳಾದ ಮಾನ್ಯ ದರ್ಶನಾಪುರರವರೇ ಹೊರಗೆ ಬಂದು ಪತಿಕಾ ಮಿತರಿಗೆಲ್ಲ ಹೇಳಿದರು ಇದು ಚಾಮುಂಡೇಶ್ವರಿ ಕ್ಷೇತದ ಚುನಾವಣೆಗೆ ಮೊದಲು ಆದಂಥದ್ದು ಇದೇನಾಯಿತೋ ನಮಗೆ ಗೊತ್ತಿಲ್ಲ ಚಾಮುಂಡೇಶ್ವರಿ ಕ್ಷೇತದ ಚುನಾವಣೆ ಮುಗಿದ ತಕ್ಷಣ 2ನೇ ಸಲ ಇನ್ನೂ ಸಹ ನೀವು ಹೇಳಿದರತೆ ಜಾರಿ ಮಾಡಿಲ್ಲವೆಂದು ನಾನೂ ಸೇರಿಂದಂತೆ ರೈತರು ಮುಖ್ಯಮಂತಿಗಳ ಹತ್ತಿರ ಹೋದರೆ, ನಾವು ಆ ರೀತಿ ಹೇಳಲೇ ಇಲ್ಲ ಎಂದು ಹೇಳಿಬಿಟ್ಟರು

ಇದೇನು ಸರ್ಕಾರವೇ? ಒಬ್ಬ ಮುಖ್ಯಮಂತಿ ಅಧ್ಯಕ್ಷತೆಯಲ್ಲಿ ನಡೆದಂಥ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ, ತುಮಕೂರು DC office ನಲ್ಲಿ ಆದಂಥದು, ಅದಕ್ಕೆ ಮೊದಲು ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಒಂದು meeting ಮಾಡಿದ್ದರು

(ಗೊಂದಲ)

ಅಧ್ಯಕ್ಷರು ಮಾನ್ಯ ಶೀರಾಮರೆಡ್ಡಿಯವರೇ, ಪಶ್ನೋತ್ತರ ವೇಳೆಯಲ್ಲಿ ಈ ತರಹ ಎಲ್ಲ ಮಾತನಾಡಿದರೆ ಆಗುವುದಿಲ್ಲ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಅಲ್ಲದಿದ್ದರೆ ಮಾನ್ಯ ಮಂತಿಗಳು ಎಲ್ಲರನ್ನು ಕರೆದು ಸಮಗವಾಗಿ ಚರ್ಚೆ ಮಾಡಿ ಸರಿಪಡಿಸಲಿ (ಗೊಂದಲ) ಪ್ರಶ್ನೋತ್ತರ ಕಾಲದಲ್ಲಿ ಈ ರೀತಿ ಮಾಡುವುದಕ್ಕೆ ಆಗುವುದಿಲ್ಲ

(ಗೊಂದಲ)

ಶೀ ಜೆ ಸಿ ಮಾಧುಸ್ವಾಮಿ ಈ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ

ಅಧ್ಯಕ್ಷರು ಈ ಬಗ್ಗೆ half an hour ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇನೆ

ಜಲನಿರ್ಮಲ ಯೋಜನೆ

54(24) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯ ಸರ್ಕಾರ ಜಲ ನಿರ್ಮಲ ಯೋಜನೆಗೆ ಪಡೆದಿರುವ ಸಾಲದ ಮೊತ್ತವೆಷ್ಟು,

ಆ) ಈವರೆಗೆ ಖರ್ಚಾದ ಹಣವೆಷ್ಟು , ಎಷ್ಟು ಹಂತಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆ ,

ಇ) ಕೈಗೆತ್ತಿಕೊಂಡಿರುವ ಮೊದಲನೆಯ ಹಂತದಲ್ಲಿರುವ ಕಾಮಗಾರಿಗಳಿಗೆ ಖರ್ಚಾದ ಹಣವೆಷ್ಟು (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರಗಳನ್ನು ನೀಡುವುದು) ,

ಈ) ಎರಡನೇಯ ಹಂತದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ಮತ್ತು ಖರ್ಚಾದ ಹಣವೆಷ್ಟು (ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು) ?

ಶ್ರೀ ಎಸ್ ಎ ರವೀಂದ್ರ ನಾಥ (ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಜಲ ನಿರ್ಮಲ ಯೋಜನೆಯು ಒಟ್ಟು ರೂ 929 67 ಕೋಟಿಗಳ ಯೋಜನೆಯಾಗಿದ್ದು, ವಿಶ್ವಬ್ಯಾಂಕ್‌ನಿಂದ ರೂ 728 59 ಕೋಟಿಗಳ ನೆರವನ್ನು ಪಡೆಯಲಾಗಿರುತ್ತದೆ

ಆ) ಯೋಜನಾ ಪ್ರಾರಂಭದಿಂದ ಡಿಸೆಂಬರ್–2006 ಮಾಸಾಂತ್ಯದವರೆಗೂ ರೂ 511 35 ಕೋಟಿಗಳನ್ನು ಕುಡಿಯುವ ನೀರು ಸರಬರಾಜು, ಗ್ರಾಮೀಣ ಆಂತರಿಕ ರಸ್ತೆ ಮತ್ತು ಚರಂಡಿ, ಗ್ರಾಮ

ಪಂಚಾಯತ್ ಸಬಲೀಕರಣ, ಸಮುದಾಯ / ವೈಯಕ್ತಿಕ ಶೌಚಾಲಯಗಳು ಹಾಗೂ ಇತರೆ ಯೋಜನಾ ಚಟುವಟಿಕೆಗಳಿಗಾಗಿ ವೆಚ್ಚ ಮಾಡಲಾಗಿದೆ ಯೋಜನೆಯನ್ನು ಈ ಕೆಳಗೆ ನೀಡಲಾಗಿರುವ ತಂಡಗಳಂತೆ ಅನುಷ್ಠಾನಗೊಳಿಸಲಾಗುತ್ತಿದೆ

ತಂಡ / ಯೋಜನೆ	ಜಿಲ್ಲೆಗಳ ಸಂಖ್ಯೆ	ಯೋಜನೆ / ಜನವಸತಿಗಳ ಸಂಖ್ಯೆ
ಪ್ರಾಯೋಗಿಕ	3	35
ತಂಡ–1	8	851
ತಂಡ–2	3	331
ಸಮಗ್ರ ತಾಂಡ ಅಭಿವೃದ್ಧಿ ಯೋಜನೆ–1	4	131
ಸರಳಜಲ–1	1	75
ಝರಿ	1	72
ಬಹು ಗ್ರಾಮ ನೀರು ಸರಬರಾಜು ಯೋಜನೆ	3	283
ತಂಡ–3	11	943
ಸಮಗ್ರ ತಾಂಡ ಅಭಿವೃದ್ಧಿ ಯೋಜನೆ–2	3	190
ಸರಳಜಲ–2	3	245
ಒಟ್ಟು		3156

ಇ) ಜಲ ನಿರ್ಮಲ ಯೋಜನೆಯಡಿ ಕೈಗೆತ್ತಿಕೊಂಡಿರುವ ಪ್ರಾಯೋಗಿಕ ತಂಡ, ತಂಡ–1, ತಂಡ–2, ಸರಳಜಲ–1, ಝರಿ, ಸಮಗ್ರ ತಾಂಡ ಅಭಿವೃದ್ಧಿ ಯೋಜನೆ–1 ರ ತಂಡಗಳಲ್ಲಿ ಕುಡಿಯುವ ನೀರು ಸರಬರಾಜು, ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಡಿಸೆಂಬರ್–2006 ರವರೆಗೆ ರೂ 282 926 ಕೋಟಿಗಳನ್ನು ವೆಚ್ಚ ಮಾಡಲಾಗಿದ್ದು, ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರಗಳನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ ಉಳಿದಂತೆ ಈ ತಂಡಗಳಲ್ಲಿಯ ಗ್ರಾಮ ಪಂಚಾಯತಿಗಳ ಸಬಲೀಕರಣ, ಸಮಾಲೋಚನ ಸೇವೆಗಳು ಹಾಗೂ ಆಡಳಿತ ವೆಚ್ಚಗಳನ್ನೂ ನಿರ್ವಹಿಸಲಾಗಿದೆ

ಪ್ರಾಯೋಗಿಕವಾಗಿ ಬಹಳ ಕಷ್ಟಸಾಧ್ಯವಾದ ಕೆಲಸಗಳು ಬಹಳ ಪ್ರಮುಖವಾಗಿ ನೀರು ಬೇಕು ನೀರನ್ನು ಎಲ್ಲಿಂದ ತರುತ್ತೀರಿ? ಅಲ್ಲಿ Team of Doctors ಇರಬೇಕು ಏಕೆಂದರೆ ಸಾವಿರಾರು ದನಕರುಗಳು ಬಂದಿರುತ್ತವೆ Team of Doctorsನ್ನು ಎಲ್ಲಿಂದ ತರುತ್ತೀರಿ? ಆಸ್ಪತ್ರೆಗಳಲ್ಲಿ Doctorsಗಳೇ ಇಲ್ಲ ಮಾನ್ಯ ರೇವೂನಾಯುಕ್ ರವರು doctors ನ್ನು ಕೊಡುತ್ತೇನೆ ಕೊಡುತ್ತೇನೆ ಎಂದು ಕೊಡಲೇ ಇಲ್ಲ Doctors ಇಲ್ಲ ಅವರನ್ನು ಎಲ್ಲಿಂದ ತರುತ್ತೀರಿ? ಸಣ್ಣ ಕರುಗಳು ಇರುತ್ತವೆ ಆದ್ದರಿಂದ ಇದು ಪ್ರಾಯೋಗಿಕವಲ್ಲ ಅದರ ಬದಲು ಸರ್ಕಾರ ಹುಲ್ಲನ್ನು ತೆಗೆದುಕೊಂಡು ಬಂದು ಜಾನುವಾರುಗಳನ್ನು ಸರ್ವೆ ಮಾಡಬೇಕು ಅದರ ಪ್ರಕಾರ ಹುಲ್ಲನ್ನು ಹಂಚಿದರೆ ಅದು ಸ್ವಲ್ಪ ಪ್ರಯೋಜನವಾಗುತ್ತದೆಯೇ ಹೊರತು ಗೋಶಾಲೆಗಳಿಂದ ಪ್ರಯೋಗಿಕವಾಗಿ ಸಾಧ್ಯವಿಲ್ಲ

ಶ್ರೀ ಜೆ.ಸಿ.ಮಾಧುಸ್ವಾಮಿ ತಾವು ಆ ಕಡೆ ಗಮನಕೊಡಬೇಕು ಪ್ರಮುಖವಾಗಿ ತಾವು ಒಂದೆರಡು ತೀರ್ಮಾನಗಳನ್ನು ತೆಗೆದುಕೊಳ್ಳಬೇಕು Worksನ್ನು monitwer ಮಾಡುವುದಕ್ಕೆಂದು third party ಎಂದು ಯಾರೋ ಒಬ್ಬರನ್ನೇನು ನೇಮಕ ಮಾಡುತ್ತೀರಿ ಅಥವಾ nodel officwer ಎಂದು ಏನು ನೇಮಕ ಮಾಡುತ್ತಿದ್ದೀರಿ , ನಿಮ್ಮ Assistant commissionwer, Thasildar, ಜಿಲ್ಲಾ ಆಡಳಿತ ವ್ಯವಸ್ಥೆಯನ್ನೇನು ಈ ಕಾರ್ಯಕ್ರಮದ ಕೆಳಗಡೆ ಇಟ್ಟಿದ್ದೀರಿ, ಇದರಿಂದ delay ಆಗುತ್ತದೆ ಎಂಬುದು ಬಿಟ್ಟರೆ ಮತ್ತೆ ಯಾವ ಸಾಧನೆಯೂ ಆಗಲಿಲ್ಲ ಖಂಡಿತವಾಗಿ ಯಾವ ಸಾಧನೆಯೂ ಆಗಿಲ್ಲ ಯಾರೊ endineer collegeನಲ್ಲಿ ಪಾಠ ಮಾಡುವವರ ಹತ್ತಿರ ಹೋಗಿ ಸಹಿ ಮಾಡಿಸಿಕೊಂಡು ಬರಲು 15 ದಿವಸವಾಗುತ್ತಿದೆ. ಇದೆಲ್ಲಾ warfootingನಲ್ಲಿ ಆಗುವಂಥ ಕೆಲಸಗಳು, estimate ಇಲ್ಲ, ನಿಮ್ಮ quality control ಒಪ್ಪಿಲ್ಲ, ಆ inspection ಈ inspection ಆಗಿಲ್ಲ, ಇದೆಲ್ಲ ಬರಪರಿಹಾರ ಕಾಮಗಾರಿ ಮಾಡುವ ರೀತಿಯಲ್ಲ ಈ ಬಗ್ಗೆ ಯಾರು ನಿಮಗೆ advise ಮಾಡಿದರೋ ನಮಗೆ ಗೊತ್ತಿಲ್ಲ ಕೆಲವು ಕಾರ್ಯಕ್ರಮಗಳನ್ನು ತಾವು N G O ಗಳ ಮೇಲೆ depend ಆಗಿ ಮಾಡುತ್ತಿದ್ದೀರಿ ಅವೆಲ್ಲಾ ಇದಕ್ಕೆ ಪೂರಕವಾಗಿ ಇರಬೇಕು ಎಂಬ

ಉದ್ದೇಶದಿಂದ ನಾನು ಮಾತನಾಡುತ್ತಿದ್ದೇನೆ Water shed ಕೆಲಸವಾಗುತ್ತಿದ್ದರೆ weast land development, dry land development ಕೆಲಸಗಳು ಆ ಭಾಗದಲ್ಲಿ ಆಗುತ್ತಿದ್ದರೆ ಇಷ್ಟೊಂದು stress ನಿಮ್ಮ Government ಮೇಲೆ ಬೀಳುತ್ತಿರಲಿಲ್ಲ NGO ದವರು ಮೊದಲನೆಯ ವರ್ಷಕ್ಕೆ ಸೀಮಿತವಾಗಿಬಿಟ್ಟಿದ್ದಾರೆ 2ನೇ ವರ್ಷ 3ನೇ ವರ್ಷ ಯಾವ NGOದವರೂ ಕೆಲಸ ಮಾಡುತ್ತಿಲ್ಲ ನಾವೂ ಏಕೆ ಮಾಡಲಿಲ್ಲವೆಂದು ಕೇಳುವಂತೆ ಇಲ್ಲ ಕೊಟ್ಟವರು ಯಾರೋ ತೆಗೆದುಕೊಂಡವರು ಯಾರೋ, "ಕೊಟ್ಟವನು ಕೊಡಂಗು ಈಸಿಕೊಂಡವನು ಈರಭದ್ರ" ಎಂದು ನಮ್ಮ ಕಡೆ ಹೇಳುತ್ತಾರೆ ಆ ರೀತಿಯಾಗಿದೆ ಈ ರಾಜ್ಯದ ಸ್ಥಿತಿ ಯಾರು NGO ಅದರ stuff ಏನು? trained personal ಎಷ್ಟು ? qualified ಎಷ್ಟು ? ಎಲ್ಲಾದರು ಕೇಳುತ್ತಿದ್ದೀರ ? ಇಡೀ ಸುಜಲಾದಲ್ಲಿ ಮೊದಲ ವರ್ಷ ಮಾತ್ರ ನಮ್ಮ ಹತ್ತಿರ ಬಿಎಸ್ಸಿಎಜಿ ಗ್ರಾಜ್ಯುಯೇಟ್ಸ ಬರುವುದು Training ಮಾಡುತ್ತಿರಿ Lead NGO ದವರಿಗೆ ಒಂದೊಂದು districtಗೆ ಒಬ್ಬರನ್ನು ಇಟ್ಟುಕೊಂಡು ಯಾರಿಗೋ ಹಣವನ್ನು ಕೊಟ್ಟುಬಿಡುತ್ತೀರಿ Nexe year ಅವರ್ಯಾರೂ ಇರುವುದಿಲ್ಲ Training ಆದವರೊಬ್ಬರೂ ಇರುವುದಿಲ್ಲ ಅವರು ಹೇಳಿದಂತೆ ಇದೊಂದು ರ್ಯಾಕೇಟ್ ನಾನು ಏನಾದರು ಸುಲಭವಾಗಿ ದುಡ್ಡು ಮಾಡಬೇಕೆಂದರೆ ಒಂದು NGO register ಮಾಡಿಕೊಂಡು ನಿಮ್ಮ ಹತ್ತಿರ ಬಂದು ಜಗದೀಶ್ ಶೆಟ್ಟರ್ ರವರೇ ನೀವು ನಮಗೆ ಚೆನ್ನಾಗಿ ಇದ್ದೀರಿ, ನನಗಿ ಕೊಡುವುದರ ಬದಲು ನಮ್ಮ NGO ಗೆ ಕೊಡಿ ಎಂದು ಹಾಕಿಸಿಕೊಂಡು ಹೋಗಬಹುದು ಇದು indirect ಆಗಿ ಇಡೀ ಸಂಪನ್ಮೂಲವನ್ನು ಹಾಳು ಮಾಡುತ್ತಿರುವುದು ಸ್ವಲ್ಪ ಆ ಕಡೆ ಗಮನಕೊಟ್ಟು ಪೂಲ್ ಮಾಡುವ ವ್ಯವಸ್ಥೆ ಮಾಡಬೇಕು ಈ distress ಮುಗಿಯುವವರೆಗೆ ಎಲ್ಲಾ ದುಡ್ಡು, ಅದು ZP ದ್ದು ಇರಬಹುದು, TPದ್ದು ಇರಬಹುದು, ನಾವು ಕೊಡುವುದು ಇರಬಹುದು, ಇದೆಲ್ಲಾ ಎಲ್ಲಾದರೂ ಒಂದು ಕಡೆ ಪೂಲ್ ಮಾಡಿಕೊಟ್ಟರೆ ಕೆಲಸ ಕಾರ್ಯವನ್ನು ಒಂದು ಕಡೆ assetನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಇದರಲ್ಲಿ ತಾವು ಹೆಚ್ಚು ಆದ್ಯತೆಯನ್ನು ಸಣ್ಣ ನೀರಾವರಿಗೆ ಕೊಡಬೇಕು ಏಕೆಂದರೆ ಕರ್ನಾಟಕಕ್ಕೆ

ಬೇರೆ ಮಾರ್ಗವೇ ಇಲ್ಲ ನೀವು ಏನಾದರೂ Minier irrigationಗೆ ಆದ್ಯತೆಯನ್ನು ಕೊಟ್ಟು ಕಾಲುವೆಗಳನ್ನು ಕುಲ್ಲಾ ಮಾಡುವ ವ್ಯವಸ್ಥೆ, ಹೂಳನ್ನು ತೆಗೆಯುವ ವ್ಯವಸ್ಥೆಯನ್ನು ಮಾಡಿ ಅಕಸ್ಮಾತ್ ಅಲ್ಲಿ ಸಿಕ್ಕ ನೀರನ್ನು ಶೇಖರಣೆ ಮಾಡಿಕೊಂಡು ಅಂರ್ತಜಲ ಅಬಿವೃದ್ದಿ ಯಾಗದೇ ಹೋದರೆ ಇಡೀ ಕರ್ನಾಟಕವನ್ನು ತಾವು ಮರಳುಗಾಡನ್ನಾಗಿ ಮಾಡುತ್ತೀರಿ ನಿಮ್ಮ ಊರಿನಿಂದ ಹಿಡಿದು ನಮ್ಮ ಊರಿನವರೆಗೆ, ಮೊಳಕಾಲ್ಮೂರು–ಚಳ್ಳಕೆರೆಯಿಂದ ಹಿಡಿದು ಚಿಕ್ಕನಾಯಕನಹಳ್ಳಿಯವರೆಗೆ 2020ಕ್ಕೆ ಮರಳುಗಾಡು ಆಗಬಹುದು ಎಂದು ಸಮೀಕ್ಷೆಯೊಂದು ಹೇಳಿದೆ ಸಾಧ್ಯವಾದರೆ ಅದು 2010ಕ್ಕೇ ಆಗುತ್ತದೆ ಎನ್ನುವಂತಹ ಭೀತಿಗೆ ನಾವು ಇಂದು ಬಂದಿದ್ದೇವೆ 800 ಅಡಿಯಿಂದ 1000 ಅಡಿಗಳವರೆಗೆ ಇವತ್ತು ನಾವು ಬೋರ್‌ವೆಲ್‌ಗಾಗಿ ಕೊರೆಸುವಂತಾಗಿದೆ ಗುಜರಾತ್‌ನಲ್ಲಿ ಇದ್ದಂತಹ ground water level ಗೆ ನಾವು ತಲ್ಲುಪಿದ್ದೇವೆ 1000 ಅಡಿಗಳವರೆಗೆ ಕರ್ನಾಟಕ ರಾಜ್ಯದಲ್ಲಿ ನಾವು ಬೋರ್ ಕೊರೆಯುತ್ತಿದ್ದೇವೆ ಎಂದರೆ, ಭೂಮಿ ಬೆಂಡಾಗುತ್ತಿದೆ ಮರಳುಗಾಡನ್ನು ಸೃಷ್ಟಿ ನೀವು ಮಾಡುತ್ತಿದ್ದೀರಿ, ಭೂಮಿ ಮೇಲಿರುವ ಹಸಿರನ್ನು ಸರ್ವನಾಶ ಮಾಡಿದ್ದೀರಿ, Horticulture ಸರ್ವನಾಶವಾಗಿದೆ, Forest land ಸರ್ವನಾಶವಾಗಿದೆ, ನಿಮ್ಮ ಹುಲ್ಲುಗಾವಲುಗಳೆಲ್ಲಾ ಸರ್ವನಾಶವಾಗಿವೆ ಮಾನ್ಯ ಚೆಲುವರಾಯಸ್ವಾಮಿಯವರೆ, ಮೊದಲು ನಾವೆಲ್ಲಾ ಮನೆಯಲ್ಲಿ ಕುಳಿತುಕೊಳ್ಳಲಿಕ್ಕಾಗುವುದಿಲ್ಲ, ಸೆಖೆಯಾಗುತ್ತದೆ ಎಂದು ತೋಟಕ್ಕೆ ಹೋಗಿ ಕುಳಿತುಕೊಳ್ಳುತ್ತಿದ್ದೆವು ಆದರೆ ಈಗ ತೋಟದಲ್ಲಿ ಸೆಖೆಯಾಗುತ್ತದೆ ಎಂದು ಮನೆಗೆ ಬರುವಂತಾಗಿದೆ ಇದು ವಾಸ್ತವವಾದ ಸ್ಥಿತಿಯಾಗಿದೆ ತೋಟದಲ್ಲಿ ಇದ್ದಂತಹ ಜಂಗಲ್ ಮರಗಳನ್ನು ಇವತ್ತು ಒಬ್ಬರೂ ಉಳಿಸಿಕೊಂಡಿಲ್ಲ ಹಲಸಿನ ಮರ, ಮಾವಿನ ಮರಗಳು ತೆಂಗಿನ ಮರಗಳ ಮಧ್ಯದಲ್ಲಿ ಅಲ್ಲಲ್ಲೇ ಇರುತ್ತಿದ್ದವು ಇದರಿಂದಾಗಿ ನಮಗೆ ಅಲ್ಲಿ ತಂಪು ಇರುತ್ತಿತ್ತು, ಈಲ್ಡ್ ಕೂಡ ಬರುತ್ತಿತ್ತು ಆದರೆ ಅವತ್ತು ಅವುಗಳು ಒಂದೂ ಇಲ್ಲ, ಎಲ್ಲಾ ಕಡಿದು ಹಾಕಿದ್ದಾರೆ Coffee Plantations ಗೆ ಇವತ್ತು ನೀವು ಹೋಗಿ ನೋಡಿ ಕಾಫಿಗೆ ಬೆಲೆ ಬಿತ್ತು ಎಂದಾಕ್ಷಣ ಇಡೀ Silver Oak ಮರಗಳೆಲ್ಲಾ ನಾಶವಾಗಿಬಿಟ್ಟವು ಮರ ಕಡಿಯಲಿಕ್ಕೆ ತಾವು permit ಮಾಡಿ ಇಡೀ ವಾತಾವರಣ ಇವತ್ತು ಮರಳುಗಾಡು ಆಗುವಂತೆ ನಿರ್ಮಾಣ ಮಾಡಿದ್ದೀರಿ ಅದಕ್ಕಾಗಿ ನಾನು ನಿಮಗೆ ಒತ್ತಾಯ ಮಾಡುತ್ತಿದ್ದೇನೆ You must give

stress on Minoı Irrigation ನಿಜವಾಗಿಯೂ ನಿಮಗೆ ಕರ್ನಾಟಕದ ಬಗ್ಗೆ ಎಲ್ಲಿಯಾದರೂ ಕಾಳಜಿ ಇದ್ದರೆ ಇದನ್ನು ಮಾಡಬೇಕು ನಮ್ಮನ್ನು ಜನರು ಎಂ ಎಲ್ ಎ ಗಳಾಗಿ ಮಾಡಿದ್ದಾರೆ, ಮಂತ್ರಿಗಳಾಗಿ ಮಾಡಿದ್ದಾರೆ, ಇದರಿಂದ ನಮಗೆ ಸ್ವಲ್ಪ status ಬಂದಿದೆ ಎಂದು ನೀವು ಭಾವಿಸುವುದಾದರೆ ಆ ಕೆಲಸವನ್ನು ನೀವು ಮಾಡಬೇಕು ಮನುಷ್ಯ ಏಕೆ ಸಾರ್ fight ಮಾಡುತ್ತಾನೆ? ನಮ್ಮ ಹೋರಾಟ ಅಥವಾ fight ಏತಕ್ಕೆ ಎಂದರೆ to get recognized and identified ನನ್ನನ್ನು ಯಾರಾದರೂ ಗುರುತಿಸಬೇಕು, ನಾನು ಯಾರಿಗಾದರೂ ಮುಂದಾಳು ಎಂದು ಎನಿಸಿಕೊಳ್ಳಲಿಕ್ಕಾಗಿಯೇ ನಾವೆಲ್ಲಾ ಹೋರಾಟ ಮಾಡುತ್ತೇವೆ ಆದರೆ ಆ ಸ್ಥಾನ ನಮಗೆ ಕೊಟ್ಟಾಗ, ಅದನ್ನು ಮಾಡಿದವನನ್ನು ಏತಕ್ಕಾಗಿ ನಾವು ನೆನಸಿಕೊಳ್ಳುವುದಿಲ್ಲ ನಿಜವಾಗಿಯೂ ನಿಮಗೇನಾದರೂ ಕಳಕಳಿ ಇದ್ದರೆ, ಎಲ್ಲಿಂದಾದರೂ ಸರಿ, ಬಯಲು ಸೀಮೆಯ ಕೆರೆಗಳನ್ನು ತುಂಬಲಿಕ್ಕೆ ಒಂದು ಪ್ರಮುಖವಾದ ಕಾರ್ಯಕ್ರಮವನ್ನು ರಾಜ್ಯ ಸರ್ಕಾರದವರು ಜಾರಿಗೆ ತರಬೇಕು ಎಲ್ಲಿ ನಾಲೆ ಇದೆ? ಎಲ್ಲಿ ನಾಲೆಯಿಂದ ಕುಡಿಯುವ ನೀರಿಗೆ divert ಮಾಡಲಿಕ್ಕಾಗುತ್ತದೆ? ಎಲ್ಲಿ ನಾಲೆಯಿಂದ ಸ್ವಲ್ಪ ಮೇಲಕ್ಕೆ lift ಮಾಡಬೇಕಾಗುತ್ತದೆ? ಎಂಬುದರ ಬಗ್ಗೆಯೂ ಕಾರ್ಯಕ್ರಮಗಳನ್ನು ಸರ್ಕಾರದವರು ಜಾರಿಗೆ ತರಬೇಕು ಕಳೆದ ಹತ್ತು ವರ್ಷಗಳಲ್ಲಿ ಪ್ರತಿ ತಾಲ್ಲೂಕಿನಲ್ಲಿ ನೀವು ಎಷ್ಟೆಲ್ಲಾ ಬೋರ್‌ವೆಲ್‌ಗಳನ್ನು ಕೊರೆದಿದ್ದೀರೋ, ಆ ಲೆಕ್ಕವನ್ನು ತೆಗೆದುಕೊಳ್ಳಿ ಎಲ್ಲಾ ತಾಲ್ಲೂಕುಗಳ ಟ್ಯಾಂಕ್‌ಗಳನ್ನು ನೀವು ಇವತ್ತು lift ಮಾಡಬಹುದಾಗಿತ್ತು ಬೋರ್‌ವೆಲ್‌ಗಳನ್ನು ಕೊರೆಯಲು ನೀವು ಖರ್ಚು ಮಾಡುವ ಹಣದಿಂದ ಟ್ಯಾಂಕ್‌ಗಳನ್ನೆಲ್ಲಾ link ಮಾಡಿಕೊಂಡು ಬರಬಹುದಾಗಿತ್ತು Under ground water charge ಆಗಿದ್ದರೆ, ನೀರಿನ consumption ಇಷ್ಟೊಂದು ಇರುತ್ತಿರಲಿಲ್ಲ ಎರಡನೆಯದಾಗಿ, ಖರ್ಚೂ ಸಹ ಇಷ್ಟೊಂದು ಬರುತ್ತಿರಲಿಲ್ಲ Electricity City supply ಮಾಡುವುದು ನಮಗೆ ಏಕೆ ಇವತ್ತು ಕಷ್ಟವಾಗಿದೆ ಎಂದರೆ, 5 HPಗೆ service ತೆಗೆದುಕೊಂಡು 10–12 HPಯನ್ನು ನಾವು ಇವತ್ತು ಬಳಸುತ್ತಿದ್ದೇವೆ 150 ಅಡಿಗೆ ನೀರು ಬರುತ್ತಿದ್ದ ಕಡೆಗೆ ಇವತ್ತು 500 ಅಡಿಗೆ ನಾವು ಹೋಗುತ್ತಿದ್ದೇವೆ ಬಂಡವಾಳ ಜಾಸ್ತಿಯಾಯಿತು, Consumption

ಜಾಸ್ತಿಯಾಯಿತು ಇವತ್ತು ನಾವು chemical ಇರುವ ನೀರನ್ನು ಕುಡಿಯುತ್ತಿದ್ದೇವೆ ನಾಳೆ ಯಾರಾದರೂ ಕೋರ್ಟಿನಲ್ಲಿ ಕೇಸ್ ಹಾಕಿದರೆ ಗತಿಯೇನು? ಇಡೀ ರಾಜ್ಯದಲ್ಲಿ ನೀವು ಫ್ಲೋರೈಡ್ ಇರುವ ವಾಟರ್ ಅನ್ನೇ ಕೊಡುತ್ತಿದ್ದೀರಿ ಮಾನ್ಯ ಡಿ ಆರ್ ಪಾಟೀಲ್‌ರವರು 5–10 ವರ್ಷಗಳ ಹಿಂದೆಯೇ ಫ್ಲೋರೈಡ್ ಬಗ್ಗೆ ಸದನದಲ್ಲಿ ಬಹಳ ಚೆನ್ನಾಗಿ ಮಾತನಾಡಿದ್ದರು ಇಡೀ ರಾಜ್ಯ ಇವತ್ತು fluoride content water ಕುಡಿಯುತ್ತಿದೆ ನೀವೇನು amenities ಅನ್ನು ಇವತ್ತು ನಮಗೆ create ಮಾಡಿಕೊಟ್ಟಿದ್ದೀರಿ? ಈ ಕಡೆಗೆ ಗಮನ ಕೊಡಬೇಕು ರಾಜ್ಯದ ಹಣ ಏನಿದೆಯೋ, ಅದನ್ನು pool ಮಾಡಿ ಖರ್ಚು ಮಾಡಬೇಕು ತಾವು ನಿದ್ದೆ ಮಾಡುತ್ತಿದ್ದೀರಿ ಸುಮ್ಮನೆ ಇಲ್ಲಿ ಮಾತನಾಡುತ್ತೀರಿ, ನಾವು ಬಹಳ ಚೆನ್ನಾಗಿ ಮಾಡಿದ್ದೇವೆ, ಅಷ್ಟು ಕೊಟ್ಟಿದ್ದೇವೆ, ಇಷ್ಟು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ ನೀವು ಕೊಡುವ advertisementಗಳಿಂದ ಪೇಪರ್‌ನವರು ಬದುಕಿಕೊಳ್ಳುತ್ತಿದ್ದಾರೆ ಒಳ್ಳೆಯ colourful advertisements ಪ್ರತಿ ದಿವಸವೂ ಪ್ರಕಟಿಸುತ್ತಿದ್ದೀರಿ ಅದರ ಜೊತೆಗೆ ಇಲ್ಲೊಂದು ಭಾಷಣವನ್ನು ಇಲ್ಲಿ ಮಾಡುತ್ತೀರಿ ಸನ್ಮಾನ್ಯ ಯಡಿಯೂರಪ್ಪನವರಿಗೆ ದುಡ್ಡು ಕೇಳಿದ್ದೇವೆ, ಅವರು ಕೊಡುತ್ತಾರೆ ಎಂದು ಹೇಳುತ್ತೀರಿ ಯಾವ ಮಂತ್ರಿಗಳು ಉತ್ತರಿಸಲು ಎದ್ದು ನಿಂತುಕೊಂಡರೂ ಶಾಸನ ಸಭೆಯಲ್ಲಿ ಇದೇ ರೀತಿಯ ಉತ್ತರವನ್ನು ಕೊಡುತ್ತಿದ್ದೀರಿ ನಿಮ್ಮದು ಸರ್ಕಾರವಲ್ಲವೇ? ನಿಮ್ಮದು collective responsibility ಇಲ್ಲವೇ? ಏಕೆ ನೀವು ಈ ತರಹ ಮಾತನಾಡಲಿಕ್ಕೆ ಕಲಿತಿದ್ದೀರಿ ಎಂಬುದೇ ನನಗೆ ಅರ್ಥವಾಗುತ್ತಿಲ್ಲ ಏನು ಈ ಶಾಸನ ಸಭೆ ಹೀಗಾಯಿತಲ್ಲಾ ಎಂದು ನಾವು ಮಾತನಾಡಿಕೊಳ್ಳುತ್ತಿರುತ್ತೇವೆ You are part of Government, I say He is also part of the Government ಈ ಚಿಂತನೆಯೇ ಇಲ್ಲದೆ, ಮಂತ್ರಿಗಳಲ್ಲೇ ವರ್ಗಗಳನ್ನು ಸೃಷ್ಟಿ ಮಾಡಿಕೊಳ್ಳುತ್ತಿದ್ದೀರಿ, ಮಂತ್ರಿಗಳಲ್ಲೇ ಪಕ್ಷ ಸೃಷ್ಟಿ ಮಾಡಿಕೊಂಡಿದ್ದೀರಿ ಮಂತ್ರಿಗಳು ಯಾರು ಯಾವ ಕೆಲಸ ಮಾಡಬೇಕೆನ್ನುವ ಆಲೋಚನೆ ಮಾಡುವುದನ್ನು ಬಿಟ್ಟು ಬೇರೆ ಕೆಲಸಗಳನ್ನು ಮಾಡುತ್ತಿದ್ದಾರೆ ರಾಜ್ಯ ದಿಕ್ಕೆಟ್ಟು ಹೋಗಿದೆ ರಾಜ್ಯಕ್ಕೆ ಅಗತ್ಯವಾಗಿ ನಾಯಕತ್ವ ಮೊದಲೇ ಬೇಕು ಅದರಲ್ಲೂ ಕಷ್ಟವಾಗಿರುವಾಗ ನಾಯಕತ್ವ ತೀರಾ ಅನಿವಾರ್ಯ ಇವತ್ತು ಅದು ಕರ್ನಾಟಕದಲ್ಲಿ ಇಲ್ಲ Direct ಮಾಡುವಷ್ಟು

ಅನುಭವವೂ ಕೂಡ ನಿಮಗೆ ಇಲ್ಲ, Co–ordination ಮೊದಲೇ ಇಲ್ಲ, ತತ್ವ ಗೊತ್ತೇ ಇಲ್ಲ, ಸಿದ್ಧಾಂತವೂ ಇಲ್ಲ ನೀವೇ ನಮ್ಮದು marriage of convenience, not of conviction ಎಂದು ಹೇಳಿದ್ದೀರಿ Marriage of convenience ಎಂದರೆ, ಇನ್ನೊಬ್ಬಳು ಬರುವವರೆಗೂ ಇವಳನ್ನೇ ಇಟ್ಟುಕೊಳ್ಳುತ್ತೇವೆ ಎಂದಷ್ಟೇ ಅರ್ಥವಾಗುತ್ತದೆ ಒಂದು ಕಡೆ ಆಯಿತು, ನೀವು ಅವರನ್ನು ಬಿಟ್ಟಿರಿ, ಇನ್ನೊಬ್ಬರ ಜೊತೆಗೆ ಸೇರಿಕೊಂಡಿರಿ ನೀವೇನು ಮಾಡಿದ್ದೀರಿ?

ಶ್ರೀ ಎನ್ ಚೆಲುವರಾಯಸ್ವಾಮಿ – ನಮ್ಮಲ್ಲಿ ಎಲ್ಲಾ ಶಕ್ತಿಯೂ ಸಹ ಇದೆ ಎಲ್ಲಿಯಾದರೂ ವ್ಯತ್ಯಾಸಗಳು ಆಗಿದ್ದರೆ ಅದನ್ನು ಸರಿಯಾಗಿ ಉಪಯೋಗಿಸಿ ಎಂದು ಹೇಳಿ ಇಡೀ ರಾಜ್ಯಕ್ಕೆ ಎಂತೆಂತಹ contributions ಕೊಟ್ಟಿರತಕ್ಕಂಥ ಜನರಿದ್ದಾರೆ ಯಾರೂ ಇಲ್ಲವೆಂದು ನೀವು ಏಕೆ ಹೇಳುತ್ತೀರಿ?

ಶ್ರೀ ಜೆ ಸಿ ಮಾಧುಸ್ವಾಮಿ – This is a marriage of convenience ಈ ಮಾತನ್ನು ನೀವೇ ಹೇಳಿದ್ದೀರಿ, ನಾವು ಹೇಳಿಲ್ಲ ಇದೊಂದು ಒಡಂಬಡಿಕೆ, ಇದು ಸೈದ್ಧಾಂತಿಕವಾದ ಲಗ್ನವಲ್ಲವೆಂದು ನೀವೇ ಹೇಳಿದ್ದೀರಿ Marriage of convenience ಎಂದರೆ ಏನೆಂದರೆ, ಹಿರಿಯ ಹೆಂಡತಿಗೆ divorce ಕೊಡುವವರೆಗೂ ಇವಳ ಜೊತೆಗೆ ಇರುವುದೇ ಆಗಿದೆ ಆ divorce accept ಆಗಲಿಲ್ಲವೆಂದರೆ ತಿರುಗಿ ನೀವು ಅಲ್ಲಿಗೇ ಹೋಗಬೇಕು ಯಾವಾಗ ಅವಳ ಜೊತೆಗೇ ಹೋಗುತ್ತೀರೋ ಎಂಬುದು ನಮಗೆ ಗೊತ್ತಿಲ್ಲ ಏನು ಬೇಕಾದರೂ ಆಗಬಹುದು ಇಲ್ಲಿ ಕೆಟ್ಟ ಭಾಷೆ ಬಳಸಬಾರದು ಕೆಡುವುದು ಒಂದೇ ಸಲ

ಶ್ರೀ ಆರ್ ಧ್ರುವ ನಾರಾಯಣ್ – ಕೆಟ್ಟವರನ್ನು ನಾವು ಪುನ ಸೇರಿಸಿಕೊಳ್ಳುವುದಿಲ್ಲ ಸಾರ್

ಶ್ರೀ ಜೆ ಸಿ ಮಾಧುಸ್ವಾಮಿ ಏನು ಮಾಡುತ್ತೀರಿ ಸಾರ್? ಒಮ್ಮೆ ನೀವು ಸೇರಿಸಿಕೊಂಡಾಗಿದೆ ಒಂದು ಸಲ ಕೆಟ್ಟ ಮೇಲೆ, ಕೆಡುವುದು ಅಭ್ಯಾಸವಾಗಿ ಬಿಡುತ್ತದೆ ಒಮ್ಮೆ ನೀವು ಕೆಟ್ಟಿದ್ದೀರಿ ನೀವು ಮತ್ತೆ ಎಲ್ಲೆಲ್ಲಿ ಹೋಗಿ ಸೇರಿಕೊಳ್ಳುತ್ತೀರೋ ಗೊತ್ತಿಲ್ಲ Conviction ಅನ್ನು ಸ್ವಲ್ಪ ಜನಗಳ ಬಗ್ಗೆಯಾದರೂ ಇಟ್ಟುಕೊಳ್ಳಿ ಅದೇ ರೀತಿ ರಾಜ್ಯದ ಬಗ್ಗೆಯೂ ಇಟ್ಟುಕೊಳ್ಳಿ

ಎರಡನೆಯದಾಗಿ, ನಾನು ಬಹಳ ನೊಂದು ಈ ಮಾತು ಹೇಳುತ್ತಿದ್ದೇನೆ ಮಂತ್ರಿಗಳು ಅವರವರ ಜಿಲ್ಲೆಗಳಿಗೆ ಮತ್ತು ಅವರವರ ಕ್ಷೇತ್ರಗಳಿಗೆ ಮಾತ್ರವೇ ಮಂತ್ರಿಗಳಾಗಿದ್ದಾರೆ ಇಲಾಖೆಗಳಿಗೆಂದು ಯಾರೂ ಮಂತ್ರಿಗಳಿಲ್ಲ ಯಾವ ಮಂತ್ರಿಗಳೂ ಸಹಿತ ಇವತ್ತು ಇಲಾಖೆ ಮಂತ್ರಿಗಳು ಎಂದು ಅನಿಸಿಕೊಳ್ಳುತ್ತಿಲ್ಲ ಆ ಇಲಾಖೆ ಏನು ಮಾಡಬೇಕು? ಆ ಇಲಾಖೆ ಕಾರ್ಯಕ್ರಮ ಏನು? ರಾಜ್ಯದಲ್ಲಿ ನನ್ನ progress ಏನಾಯಿತು? ನಾನು ಏನು ಮಾಡಬೇಕು? ಎಂಬ ಬಗ್ಗೆ ಏಕೋ ಯಾರೂ ತಲೆಗೆ ತೆಗೆದುಕೊಂಡಂತೆ ಕಾಣುವುದಿಲ್ಲ ನೀವಾಯಿತು, ನಿಮ್ಮ ಕ್ಷೇತ್ರವಾಯಿತು, ನಿಮ್ಮ ಜಿಲ್ಲೆಯಾಯಿತು, ಇಷ್ಟಕ್ಕೇ ಮಾತ್ರ ಮಂತ್ರಿಗಳು ಸೀಮಿತವಾಗುವುದಾದರೆ ರಾಜ್ಯದ ಗತಿಯೇನು? ಹಡಗಿನಲ್ಲಿ ಪಕ್ಕದ ರೂಮಿನಲ್ಲಿ ತೂತಾಗಿದ್ದರೆ ನನಗೇನು ಎಂದು ಸುಮ್ಮನೆ ಕುಳಿತುಕೊಂಡರೆ, ಹಡಗು ಮುಳುಗಿದಾಗ ನೀವೂ ಮುಳುಗುತ್ತೀರಿ ತುಮಕೂರು ಮುಳುಗಿದಾಗ ಹಾಸನವೂ ಮುಳುಗುತ್ತದೆ, ತುಮಕೂರು ಮುಳುಗಿದಾಗ ಮಂಡ್ಯವೂ ಮುಳುಗುತ್ತದೆ, ಮಂಡ್ಯ ಮುಳುಗಿದಾಗ ಮೈಸೂರೂ ಮುಳುಗುತ್ತದೆ, ಚಿಕ್ಕಮಗಳೂರು ಮುಳುಗಿದರೆ ಹಾಸನ–ಶಿವಮೊಗ್ಗವೂ ಸಹ ಮುಳುಗುತ್ತದೆ ಸ್ವಲ್ಪ ನೀವು ಇದನ್ನೆಲ್ಲಾ ಅರ್ಥ ಮಾಡಿಕೊಂಡು ಕೆಲಸ ಮಾಡಿ ರಾಜ್ಯದ ಹಿತದೃಷ್ಟಿಯಿಂದ ತಾವು ಕೆಲಸ ಮಾಡಿ ನಮಗೆ ಸಂಕಟ ಏಕೆಂದರೆ, ನಿಮಗೆ ಇದು revenue surplus ಇರುವ, ದುಡ್ಡು ಜಾಸ್ತಿ ಇರುವ ಕಾಲ ಹಿಂದೆಲ್ಲಾ ಮಾಡಬೇಕೆನ್ನುವ ಕಾಳಜಿ ಇದ್ದವರಿಗೆ ದುಡ್ಡು ಇರಲಿಲ್ಲ ಈಗ ದುಡ್ಡು ಇದೆ, ನೀವು ಮಾಡುತ್ತಿಲ್ಲ ಮಾಡಲೇಬೇಕು ಎನ್ನುವಂತಾದಾಗ ಏನು ಮಾಡುತ್ತಿದ್ದೀರಿ? ಗಣೇಶನ ಚತುರ್ಥಿ ಎಂದು ಕಡಲೆಪುರಿ ಫಲಾಹಾರ ಮಾಡಿ ಹಂಚಿಬಿಡುವ ಕೆಲಸ ಮಾಡುತ್ತಿದ್ದೀರಿ ದಯವಿಟ್ಟು ಕೈ ಮುಗಿದು ಕೇಳಿಕೊಳ್ಳುತ್ತೇವೆ, ಫಲಾಹಾರ ಮಾಡುವುದು ನಿಲ್ಲಿಸಿ ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಮಾಗುಳಿ ಹೊಲ ಬೇಕೋ, ಕುಯ್ದಿರುವ ರಾಗಿ ಬೇಕೋ ಎಂದು ನಮ್ಮ ಕಡೆಗೊಂದು ಗಾದೆ ಇದೆ ಕುಯ್ದಿರುವ ರಾಗಿ ತೆಗೆದುಕೊಂಡರೆ, ಅದು ಇವತ್ತೇ ಆಗಿ ಹೋಗಿ ಬಿಡುತ್ತದೆ ಮಾಗುಳಿ ಆಗಿರುವ ಹೊಲ ತೆಗೆದುಕೊಂಡರೆ ಜೀವಮಾನವೆಲ್ಲಾ ಸಾಗಿಸಬಹುದು ಯೋಜನೆಗಳನ್ನು ಮಾಡಿ ಜೀವಮಾನವೆಲ್ಲಾ ದುಡಿದುಕೊಂಡು ಬದುಕಿಕೊಳ್ಳುತ್ತೀರಿ ಯಾರಿಗೋ ಸೈಕಲ್ ಕೊಟ್ಟೆವು, ಅದನ್ನು ಕೊಟ್ಟೆವು, ಇದನ್ನು ಕೊಟ್ಟೆವು ಎಂದು ಇವತ್ತಿಗೆ ಹಸಿದಿರುವ ಹೊಟ್ಟೆಗೆ

ಊಟ ಹಾಕಿ ಬಿಟ್ಟರೆ ಅದು ಸಮರ್ಥನೀಯವಲ್ಲವೆಂದು ಹೇಳಿ, ಈ ಸರ್ಕಾರ through relıef works plan ಮಾಡಬೇಕು, ಯೋಜನೆಗಳಿಗೆ ಆದ್ಯತೆ ಕೊಡಬೇಕೆಂದು ಹೇಳಿ, ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ [ಗುರುಮಿರಕಲ್] – ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಬರ ಪರಿಸ್ಥಿತಿ ಬಗ್ಗೆ ಅನೇಕ ವಿರೋಧ ಪಕ್ಷದ ನಾಯಕರುಗಳು ಮಾತನಾಡಿದ್ದಾರೆ ನಾನು ಹೆಚ್ಚು ಕಾಲ ತೆಗೆದುಕೊಳ್ಳದೇ, ಕೆಲವು ಪ್ರಮುಖವಾದಂತಹ ವಿಷಯಗಳನ್ನು ಸದನದ ಮತ್ತು ಸರ್ಕಾರದ ಗಮನಕ್ಕೆ ತಂದು, ಅದರ ಬಗ್ಗೆ ಅವರು ಏನು ಕಾರ್ಯಕ್ರಮವನ್ನು ರೂಪಿಸಬೇಕು ಎನ್ನುವುದರ ಬಗ್ಗೆ ಸಲಹೆಗಳನ್ನು ಕೊಟ್ಟು ನನ್ನ ಮಾತನ್ನು ಮೊಟಕುಗೊಳಿಸುತ್ತೇನೆ ಈಗಾಗಲೇ ರಾಜ್ಯದ ಸುಮಾರು 128 ತಾಲ್ಲೂಕುಗಳಲ್ಲಿ ಭೀಕರ ಬರಗಾಲ ಪರಿಸ್ಥಿತಿ ಇದೆ ಎನ್ನತಕ್ಕಂಥ ಮಾತನ್ನು ನಾವೆಲ್ಲರೂ ಕೂಡ ಒಪ್ಪಿಕೊಂಡಿದ್ದೇವೆ ಸರ್ಕಾರ ಕೂಡ ಸುಮಾರು ಎರಡು Memorandum ಅನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದೆ ಅದೇ ರೀತಿ ಅತಿವೃಷ್ಟಿಯಿಂದ ಸುಮಾರು ಮೂರು ಜಿಲ್ಲೆಗಳು ಅತ್ಯಂತ ಹೆಚ್ಚು ನಷ್ಟಕ್ಕೆ ಒಳಗಾಗಿವೆ ಎನ್ನತಕ್ಕಂಥದ್ದನ್ನೂ ಸಹ ಸರ್ಕಾರ ಹೇಳಿದೆ ನಾವೂ ಕೂಡ ಈಗಾಗಲೇ ಆ ಭಾಗದಲ್ಲಿ ಅಡ್ಡಾಡಿ ಆ ವಿಚಾರವನ್ನು ತಿಳಿದುಕೊಂಡಿದ್ದೇವೆ ಎರಡನೆಯದಾಗಿ, ಕಳೆದ 36 ವರ್ಷಗಳಲ್ಲಿ ಇಂತಹ ಒಂದು ಕೆಟ್ಟ ಪರಿಸ್ಥಿತಿ ಬಂದಿರಲಿಲ್ಲ ಕಳೆದ 36 ವರ್ಷಗಳಲ್ಲಿ ಮೊದಲನೇ ಸಲ ಇಂತಹ ಭೀಕರವಾದಂತಹ ಬರಗಾಲ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಬಂದಿದೆ ಎಂಬ ಮಾತನ್ನು ಮಾನ್ಯ ಪ್ರಕಾಶ್‌ರವರು ಅನೇಕ ಸಾರಿ ಪ್ರಸ್ತಾಪ ಮಾಡಿದ್ದಾರೆ ಕಳೆದ 36 ವರ್ಷಗಳಲ್ಲಿ ಬಾರದೇ ಇರತಕ್ಕಂಥ ಭೀಕರವಾದಂತಹ ಬರಗಾಲ ಈ ರಾಜ್ಯದಲ್ಲಿ ಬಂದಿರುವಾಗ ತಾವೇನು ಕೆಲಸ ಮಾಡಿದ್ದೀರಿ ಎಂಬುದು ಮುಖ್ಯವಾಗುತ್ತದೆ ಕಳೆದ 36 ವರ್ಷಗಳಲ್ಲಿ ನಡೆಯದಿರತಕ್ಕಂಥ ವಾತಾವರಣ ಇಲ್ಲಿ ಸೃಷ್ಟಿಯಾದಾಗ, ಅದಕ್ಕೆ ನಿಮ್ಮ ಕೊಡುಗೆ ಏನು ? ನಿಮ್ಮ ಕೊಡುಗೆ ಏನು? ಎಷ್ಟರಮಟ್ಟಿಗೆ ತಾವು ಕೆಲಸಕಾರ್ಯಗಳನ್ನು ರೂಪಿಸಿದ್ದೀರಿ? ಇವತ್ತು ಯಾವ್ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿ ಖರ್ಚು ಮಾಡಿದ್ದೀರಿ? ಎಷ್ಟು ಕಡೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ಹಣವನ್ನು ಬಿಡುಗಡೆ ಮಾಡಿ ಖರ್ಚು

ಮಾಡಿದ್ದೀರಿ, ಮೇವಿನ ವ್ಯವಸ್ಥೆ ಮಾಡಿದ್ದೀರಿ? ಜಾನುವಾರುಗಳಿಗೆ ಔಷಧ ಕೊಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಒಂದು ನಿಯಮದ ಪ್ರಕಾರ ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡುವುದಕ್ಕೆ ಏನು ಮಾಡಿದ್ದೀರಿ? ಈ ಎಲ್ಲಾ ಪ್ರಶ್ನೆಗಳನ್ನು ನಾವು ಕೇಳಿದಾಗ ಖಂಡಿತವಾಗಿಯೂ ಸರ್ಕಾರದ ಹತ್ತಿರ ಉತ್ತರವಿಲ್ಲ ಏಕೆಂದರೆ, ಕೇಂದ್ರ ಸರ್ಕಾರ ಕೊಟ್ಟಂತಹ ಹಣವನ್ನು ಖರ್ಚು ಮಾಡತಕ್ಕಂತ ಶಕ್ತಿಯೇ ಸರ್ಕಾರದಲ್ಲಿಲ್ಲವೆಂದರೆ, ಸರ್ಕಾರ ಕೆಲಸ ಮಾಡಿದೆ ಎಂದು ನಾವು ಒಪ್ಪಿಕೊಳ್ಳುವುದು ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಕೂಡ ಅನೇಕ ಸಾರಿ, ನಮ್ಮ ಸರ್ಕಾರ ಬಹಳ ಒಳ್ಳೆಯ ಕೆಲಸವನ್ನು ಮಾಡಿದೆ, ಹಿಂದೆಂದೂ ಮಾಡದತಂಹ ಕೆಲಸಗಳನ್ನು ಮಾಡಿದೆ ಎಂದು ಹೇಳಿದ್ದಾರೆ ಹೌದು ಸ್ವಾಮಿ, ಹಿಂದ್ಲೆಂದು ಮಾಡದಿರತಕ್ಕಂತಹ ಕೆಲಸವನ್ನು ಮಾಡಿದ್ದೇವೆ ಎನ್ನತಕ್ಕಂತಹವರು, ನಿಮ್ಮ ಬಜೆಟ್‌ನಲ್ಲಿ ನಮೂದು ಮಾಡಿದ ಹಣದಲ್ಲಿ ಇವತ್ತು 60% ಖರ್ಚು ಮಾಡಿಲ್ಲವೆಂದರೆ, ನೀವು ಪ್ರಗತಿ ಮಾಡಿದಂತೆಯೇ? ನಿಮ್ಮ ಬಜೆಟ್‌ನಲ್ಲಿರುವುದನ್ನು ನೀವೇ ಹೇಳಿಕೊಂಡಿದ್ದು, ನೀವೇ ರೆವ್ಯೂ ಮಾಡಿದ್ದು ಅಂದರೆ ಇನ್ನು ಈ ಎರಡು ತಿಂಗಳಲ್ಲಿ 40% ಬಜೆಟ್ ಹಣವನ್ನು ಖರ್ಚು ಮಾಡಲು ಸಾಧ್ಯವೇ? ಅಂದರೆ ಇದರ ಅರ್ಧ ಬಜೆಟ್ ನಲ್ಲಿಟ್ಟಂತಹ ಹಣವನ್ನು ಖರ್ಚು ಮಾಡಲು ನಿಮಗೆ ಪುರುಸೊತ್ತಿಲ್ಲ, ಅದನ್ನು ರೆವ್ಯೂ ಮಾಡುವುದಕ್ಕಾಗಿಲ್ಲ, ಇನ್ನು ನೀವು in addition, ಹೆಚ್ಚಿನ ಹಣವನ್ನು ಖರ್ಚು ಮಾಡಲು ಸಾಧ್ಯವೇ ? ಇವು ಇವತ್ತು ನಮ್ಮ ಮುಂದೆ ಪ್ರಮುಖವಾಗಿರುವಂತಹ ಪ್ರಶ್ನೆಗಳು ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ ಕೇವಲ ಹಾರಿಕೆ ಉತ್ತರಗಳನ್ನು ಕೊಟ್ಟು ಬಹಳ ಕೆಲಸವನ್ನು ಮಾಡಿದ್ದೇವೆಂದು ಹೇಳಬಹುದು, ಬಹಳ ಕೆಲಸ ನಿಮ್ಮ physical & financial targetನಿಂದ ಗೊತ್ತಾಗಬೇಕೇ ಹೊರತು, ಸುಮ್ಮನೆ ಬಾಯಿ ಮಾತಿನಿಂದ ನಾವು ಕೆಲಸ ಮಾಡಿದ್ದೇವೆಂದರೆ ಆಗುವುದಿಲ್ಲ ನೀವು ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ಗುರಿ ಇಟ್ಟಿದ್ದೀರಿ ? ಗುರಿ ಇಟ್ಟದ್ದರಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬುದು ಗೊತ್ತಾಗಬೇಕು, ಅದಕ್ಕೆ ತಕ್ಕಂತೆ ಎಷ್ಟು ಕೆಲಸಗಳನ್ನು ಮಾಡಬೇಕೆಂದು ಗುರಿಗಳನ್ನು ಇಟ್ಟಿದ್ದೀರಿ ? ಎಷ್ಟು ಕೆಲಸಗಳನ್ನು ಇವತ್ತು ತಾವು ಭೌತಿಕವಾಗಿ ಮಾಡಿದ್ದೀರಿ? ಆರ್ಥಿಕವಾಗಿ ಎಷ್ಟು ಖರ್ಚು ಮಾಡಿದ್ದೀರಿ ? ಎನ್ನುವುದರ ಮೇಲೆ ನಾವು ಸಾಧನೆಗಳನ್ನು

ಅಳೆಯಬಹುದೇ ಹೊರತು ಸುಮ್ಮನೆ ನಾನು ಸೈಕಲ್‌ಗಳನ್ನು ಕೊಟ್ಟೆ ನೋಡಿ, ನಾನು ರಸ್ತೆಗಳಿಗೆ ದುಡ್ಡು ಕೊಟ್ಟೆ ನೋಡಿ, ನಾನು ಅದು ಮಾಡಿದೆ ಎಂದು ಹೇಳಿದರೆ, ಅದು ಸಾಧನೆಯಲ್ಲ, ಅದು achievement ಅಲ್ಲ ಸೈಕಲ್ ರಿಪೇರಿಗೆ ಹೋಗಿದೆಯಂತೆ, ಅದನ್ನು ದುರಸ್ತಿ ಮಾಡಿಕೊಳ್ಳುವುದಕ್ಕೆ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಬಂಗಾರಪ್ಪನವರ ಹತ್ತಿರ ಹೋಗಿದ್ದರಂತೆ ನನ್ನ ಸೈಕಲ್ ನಿಮ್ಮ ಅಂಗಡಿಗೆ ದುರಸ್ತಿಗೆ ಬಂದಿದೆ, ದಯವಿಟ್ಟು ಬೇಗ ದುರಸ್ತಿ ಮಾಡಿ ಕಳುಹಿಸಿ ಎಂದು ಹೇಳಿದರಂತೆ ದುರಸ್ತಿ ಮಾಡುತ್ತಾರೋ ಏನೊ ಗೊತ್ತಿಲ್ಲ, ಅವರಿಬ್ಬರ ಮಧ್ಯೆದಲ್ಲೆ ಆಗಿದೆ, ಇವರ[ಬಿಜೆಪಿ] ಪರಿಸ್ಥಿತಿ ಏನಾಗುತ್ತದೆಯೋ ಗೊತ್ತಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇನ್ನು ವರ್ಕ್‌ಶಾಪ್ ಮಾಡಿಲ್ಲ, ದುರಸ್ತಿ ಎಲ್ಲಾಗುತ್ತದೆ?

ಶ್ರೀ ಜೆ ಸಿ ಮಾಧುಸ್ವಾಮಿ ಮೆಕ್ಯಾನಿಕ್ ಅನ್ನು ಇನ್ನು ಇವರ[ಕಾಂಗ್ರೆಸ್] ಹತ್ತಿರವೇ ಬಿಟ್ಟಿದ್ದಾರೆ ಅದು ನಿಮಗೆ ಗೊತ್ತಿಲ್ಲವೇ?

ಶ್ರೀ ವಾಟಾಳ್ ನಾಗರಾಜ್ ಖರ್ಗೆ ಸಾಹೇಬರೆ, ಇವರು ಕೊಟ್ಟಿರುವ ಸೈಕಲ್‌ಗೆ ಈಗ ಟೈರು ಹೋಗಿದೆ, ಟ್ಯೂಬ್ ಹೋಗಿದೆ, ಬೆಲ್ ಹೋಗಿದೆ, ಬೇಕ್ ಇಲ್ಲವೇ ಇಲ್ಲ, ಸೈಕಲ್ ಅನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗಬೇಕು

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ ಚಾಮರಾಜ ನಗರದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರೇ ಸೈಕಲ್ ವಿತರಣೆಯನ್ನು ಸ್ವತ ಸೈಕಲ್‌ಅನ್ನು ಓಡಿಸಿ ಉದ್ಘಾಟನೆ ಮಾಡಿದ್ದಾರೆ, ಅವರು ಈಗ ಆ ಸೈಕಲ್ ಸರಿ ಇಲ್ಲವೆಂದರೆ ಹೇಗೆ?

ಶ್ರೀ ಎನ್ ಚೆಲುವರಾಯ ಸ್ವಾಮಿ ಆಗ ಹೊಸದಾಗಿತ್ತು ಈಗೆಲ್ಲಾ ಬಿದ್ದುಹೋಗಿದೆ, ಹೊಸದಾಗಿದ್ದಾಗ ಅವರು ಓಡಿಸಿದರು

ಶ್ರೀ ವಾಟಾಳ್ ನಾಗರಾಜ್ ಆ ಸೈಕಲ್‌ಗೆ ಏನಾಗಿದೆ ಎಂದರೆ ಟ್ಯೂಬ್ ಇಲ್ಲ, ಟೈರ್ ಇಲ್ಲ, ಬೆಲ್ ಇಲ್ಲ ಬೇಕ್ ಇಲ್ಲ, ಅದರ ಮೇಲೆ ಕುಳಿತುಕೊಂಡು ಹೋಗುವ ಬದಲು ಸೈಕಲನ್ನೆ ತಲೆಯ ಮೇಲೆ ಹೊತ್ತಿಕೊಂಡು ಹೋಗಬೇಕಾಗಿದೆ, ಇದು ಇರುವ ಪರಸ್ಥಿತಿ

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ ನೀವೇ ಎಲ್ಲಾ ಟ್ರಯಲ್ ಮಾಡಿ ನೋಡಿ ಎಲ್ಲಾ ಬಂದೊಬಸ್ತಾಗಿದೆ ಎಂದು ಇಡೀ ಡಿಸ್ಟ್ರಿಕ್ಟ್ ಎಲ್ಲಾ

ಸೈಕಲ್ ಮೇಲೆ ಒಂದು ರೌಂಡ್ ಹಾಕಿದ್ದೀರಿ, ಈಗ ಸರಿ ಇಲ್ಲವೆಂದು ಹೇಳಿದರೆ ಅದನ್ನು ಹೇಗೆ ಒಪ್ಪುವುದಕ್ಕಾಗುತ್ತದೆ?

ಶ್ರೀ ಎಸ್ ರಾಜೇಂದ್ರನ್ ಮಾಡ್ರನ್ ಟೆಕ್ನಾಲಜಿ ಇದೆಯಲ್ಲ, ಅಂತಹ ಒಂದು ಹೊಸ ಸೈಕಲ ನ್ನು ಸರ್ಕಾರದವರು ಕೊಟ್ಟಿರುವುದು ಬಹಳ ಗಂಭೀರವಾದುದು, ಅಂತಹ ಸೈಕಲನ್ನು ನಾವು ನೋಡಬೇಕು ಸ್ವಾಮಿ

ಶ್ರೀ ವಾಟಾಳ್ ನಾಗರಾಜ್ ಅವತ್ತು ಮೊದಲನೇ ದಿವಸ ಚೆನ್ನಾಗಿತ್ತು, ಎರಡನೇ ದಿವಸ ಶುರುವಾಯಿತು ಸ್ವಾಮಿ, ಬೆಲ್ ಹೋಯಿತು, ಬ್ರೇಕ್ ಹೋಯಿತು,ಟ್ಯೂಬ್ ಹೋಯಿತು, ಟೈರ್ ಹೋಯಿತು

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ ಅವರು ನಡೆಸುವ ಚಳುವಳಿಗೆಲ್ಲಾ ಈ ನಮ್ಮ ಸೈಕಲ್‌ಗಳನ್ನು ಬಳಸಿಕೊಳ್ಳಲು ಶುರು ಮಾಡಿದ್ದಾರೆ ಹಾಗಾಗಿ ಸ್ವಲ್ಪ ವ್ಯತ್ಯಾಸವಾಗಿದೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಮಹಾರಾಜರು ಎಂದಾದರು ಸೈಕಲ್ ಮೇಲೆ ಹೋಗುತ್ತಾರಾ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಹಾರಾಜರು ಕುದುರೆ ಮೇಲೆ ಹೋಗುತ್ತಾರೆ, ಮಹಾರಾಜರಿಗೆ ಸೈಕಲ್ ಬಗ್ಗೆ ಅನುಭವವಿರುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ ನೀವು ಮಹಾರಾಜರ ವಿಚಾರವನ್ನು ಏತಕ್ಕೆ ತಂದಿರಿ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ತಾವು ಮಹಾರಾಜರು

ಶ್ರೀ ವಾಟಾಳ್ ನಾಗರಾಜ್ ನಾವು ಮಹಾರಾಜರಲ್ಲ, ವಾಟಾಳ್ ನಾಗಾರಾಜ್ ಅವರು ಯಾರು ಮಹಾರಾಜರೆಂದು ಸದನಕ್ಕೆ ಪರಿಚಯ ಮಾಡಿಕೊಟ್ಟರೆ ಸಂತೋಷ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಈ ಸರ್ಕಾರದ ಆರ್ಥಿಕ ಮತ್ತು ಭೌತಿಕ ಗುರಿ ಏನಿದೆ ? ಏಕೆಂದರೆ, ಬಜೆಟ್‌ನಲ್ಲಿ ನೀರಾವರಿಗೆ ನಾವು ಇಷ್ಟು ಖರ್ಚು ಮಾಡುತ್ತೇವೆ, ಸಣ್ಣ ನೀರಾವರಿಗೆ ಇಷ್ಟು ಖರ್ಚು ಮಾಡುತ್ತೇವೆ, ಉದ್ಯೋಗ ಭರವಸೆ ಯೋಜನೆಯಲ್ಲಿ ಇಷ್ಟು ಖರ್ಚು ಮಾಡುತ್ತೇವೆಂದು ಎಲ್ಲಾ ಹೇಳಿ ಪ್ರತಿಯೊಂದಕ್ಕೂ ಗುರಿ ಕೊಟ್ಟು ಅದರಲ್ಲಿ ನಮೂದು ಮಾಡಿ, ಸದನದ ಅನುಮತಿಯನ್ನು ಪಡೆದುಕೊಂಡು ಆ ಬಜೆಟ್ ಮೂಲಕ ಹಣ ಅವರ ಕೈಸೇರುತ್ತದೆ ಅದರಲ್ಲಿ ಎಷ್ಟು ಖರ್ಚು ಮಾಡಿದ್ದೇವೆ ಎನ್ನುವುದು ಇಲ್ಲಿಯವರೆಗೆ ಗೊತ್ತಿಲ್ಲ ಸಹಜವಾಗಿ ಯಾವಾಗಲಾದರು ರೆವ್ಯೂ ಮಾಡುವಾಗ ಮಾತ್ರ ಅವರು ಹೇಳುವುದು, ಇದು ದುರ್ದೈವ, ನಮ್ಮ ಬಜೆಟ್

ನಲ್ಲಿರುವ ಹಣದಲ್ಲಿ 40% ಕೂಡ ಖರ್ಚಾಗಿಲ್ಲವೆಂದು ಒಂದು ಸಾರಿ ಹೇಳುತ್ತಾರೆ ಪುನ ಇದನ್ನು ನಾವೆಲ್ಲಾ ಟೀಕೆ ಮಾಡಿದಾಗ, ಈಗಾಗಲೇ 50% ಖರ್ಚಾಗಿದೆ, ಎಂದು ಹೇಳುತ್ತಾರೆ ಇತ್ತೀಚೆಗೆ, 60% ಖರ್ಚಾಗಿದೆ ಇನ್ನು ಉಳಿದದ್ದು ಮಾರ್ಚ್ ಒಳಗೆ ಖರ್ಚು ಮಾಡುತ್ತೇವೆಂದು ಹೇಳುತ್ತಾರೆ ಇದರ ಅರ್ಥ, ಅಭಿವೃದ್ಧಿ ಮಾಡತಕ್ಕಂತಹವರು ಅಥವಾ ನಾವು ಅಭಿವೃದ್ಧಿಪರವಿದ್ದೇವೆಂದು ಹೇಳುವ ಈ ಎರಡೂ ಪಕ್ಷದವರು ಸೇರಿ ಸರ್ಕಾರವನ್ನೇನು ಮಾಡಿದ್ದಾರೆ, ಇವರು ಹಣವನ್ನು ಖರ್ಚು ಮಾಡಿ ಇನ್ನು ಹೆಚ್ಚಿನ ಅಭಿವೃದ್ಧಿಯನ್ನು ಮಾಡಿದ್ದರೆ ನಮ್ಮ ಹತ್ತಿರ ಸಪ್ಲಿಮೆಂಟರಿ ಬಜೆಟ್‌ಗೆ ಬರಬಹುದಾಗಿತ್ತು ಏಕೆಂದರೆ, ಅದು ಮುಗಿದು ಹೋಯಿತು ನಮ್ಮಲ್ಲಿ ಹಚ್ಚಿನ ಹಣ ಉಳಿದಿದೆ, ಟ್ರಜರಿಯಲ್ಲಿ ಬಹಳ ದುಡ್ಡಿದೆ, ಅದಕ್ಕೆ ನಾವು ಅಡಿಷನಲ್ ವರ್ಕ್ ತೆಗೆದುಕೊಂಡಿದ್ದೇವೆಂದು ಬೆಳಗಾಂ ಅಧಿವೇಶನದಲ್ಲಾದರೂ ತರಬಹುದಾಗಿತ್ತು, ಇಲ್ಲ ಈ ಅಧಿವೇಶನದಲ್ಲಾದರೂ ಬರಬೇಕಾಗಿತ್ತು, ಅದೂ ಇಲ್ಲ, ನಿಮ್ಮಲ್ಲಿ ಈ ರೀತಿ ಇರುವುದು ಒಂದು ಕಡೆ ಎರಡನೆಯದಾಗಿ, ಕೇಂದ್ರ ಸರ್ಕಾರದಿಂದ ಸಿಕ್ಕ ಹಣವನ್ನೂ ಕೂಡ ಖರ್ಚು ಮಾಡುವ ಶಕ್ತಿ ಈ ಸರ್ಕಾರಕ್ಕೆ ಇಲ್ಲವೆಂದರೆ ನಾವೇನು ಹೇಳೋಣ ಕೇಂದ್ರ ಗೃಹ ಸಚಿವರಾದ ಸನ್ಮಾನ್ಯ ಶಿವರಾಜ್ ಪಾಟೀಲ್ ರವರು ರಾಜ್ಯಕ್ಕೆ ಬಂದಾಗ 250 ಕೋಟಿ ರೂಪಾಯಿಗಳನ್ನು ಪ್ರಕಟಿಸಿ ಅತಿವೃಷ್ಟಿಗೆ ಬಿಡುಗಡೆ ಮಾಡಿದ್ದಾರೆ ಅದನ್ನು ಕೊಟ್ಟ ಮೇಲೆ, ಇವರಿಗೆ ಇದುವರೆವಿಗೆ ಸಿಕ್ಕಂತ ಹಣ, 250 ಕೋಟಿ ರೂಪಾಯಿಗಳಲ್ಲದೆ, 2005–6ರಲ್ಲಿ CRF ನಲ್ಲಿ 86 ಕೋಟಿ ರೂಪಾಯಿಗಳು, NCCF ನಲ್ಲಿ 358 ಕೋಟಿ ರೂಪಾಯಿಗಳು ಮತ್ತು 2,52,000 ಮೆಟ್ರಿಕ್ ಟನ್‌ಗಳ ಆಹಾರಧಾನ್ಯ ಇಷ್ಟೊಂದು ನಿಮಗೆ ಕೇಂದ್ರ ಸರ್ಕಾರದಿಂದ ಬಂದಿದೆ ಇದಲ್ಲದೆ 2006–7ನೇ ಸಾಲಿನಲ್ಲು ಕೂಡ CRFನಲ್ಲಿ 9 ಕೋಟಿ 28 ಲಕ್ಷ ರೂಪಾಯಿಗಳು, NCCFನಲ್ಲಿ 226 ಕೋಟಿ 30 ಲಕ್ಷ ರೂಪಾಯಿಗಳು ಮತ್ತು 50,000 ಮೆಟ್ರಿಕ್ ಟನ್‌ಗಳ ಆಹಾರಧಾನ್ಯ ಬಿಡುಗಡೆಯಾಗಿದೆ ಇವತ್ತು ಇಷ್ಟೊಂದು ಆಹಾರಧಾನ್ಯ ಹಾಗೂ ಹಣ ನಿಮಗೆ ಸಿಕ್ಕಿದ ಮೇಲೆ ಎಷ್ಟನ್ನು ನೀವು ಖರ್ಚು ಮಾಡಿದ್ದೀರಿ? ನಿಮಗೆ ಹಣ ಸಿಕ್ಕ ಮೇಲೆ ಎಲ್ಲೆಲ್ಲಿ ಎಷ್ಟು ನೀವು ಇದನ್ನು ಖರ್ಚು ಮಾಡಿದ್ದೀರಿ, ಏಕೆಂದರೆ 128 ತಾಲ್ಲೂಕುಗಳಲ್ಲಿ ಬರಗಾಲ ಇದೆ Out of 176 taluks 128 ತಾಲ್ಲೂಕುಗಳಲ್ಲಿ ಭೀಕರವಾದ ಬರಗಾಲ ಇದೆ ಎಂದು

ನಾವೆಲ್ಲರೂ ಒಪ್ಪಿಕೊಂಡಿದ್ದೇವೆ ಎಲ್ಲ ಕಡೆಯಿಂದ ವರದಿ ಕೂಡ ಇದೆ ನಾನು ಕೂಡ ನಮ್ಮ KPCC ಪರವಾಗಿ ಅನೇಕ ಕಡೆ ಟೀಮ್‌ಗಳನ್ನು ಕಳುಹಿಸಿದ್ದೆ ತಮಗೆ ಗೊತ್ತಿದೆ ಪ್ರತಿ ಜಿಲ್ಲೆಗೆ ನಮ್ಮ ಕಾರ್ಯಕರ್ತರನ್ನು, ಶಾಸಕರನ್ನು ಮತ್ತು ಪಾರ್ಲಿಮೆಂಟ್ ಮೆಂಬರ್‌ನ್ನು ಕಳುಹಿಸಿ ಅಲ್ಲಿರತಕ್ಕಂತಹ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಸಂಬಂಧಪಟ್ಟ ತಾಲ್ಲೂಕುಗಳಲ್ಲಿ ಸಂಬಂಧಪಟ್ಟ ಸಬ್ ಡಿವಿಷನ್ ಅಸಿಸ್ಟೆಂಟ್ ಕಮಿಷನರ್‌ನ್ನು ಭೇಟಿ ಆಗಿ ಎಷ್ಟು ಹಣ ಬಂದಿದೆ, ಎಷ್ಟು employment ಜನರೇಟ್ ಆಗಿದೆ ಮತ್ತು ಕುಡಿಯುವ ನೀರಿಗೆ ಏನು ವ್ಯವಸ್ಥೆ ಮಾಡಿದ್ದಾರೆ, ಮೇವಿಗೆ ಏನು ವ್ಯವಸ್ಥೆ ಮಾಡಿದ್ದಾರೆ, ಜಾನುವಾರುಗಳಿಗೆ ಎಂತಹ ವ್ಯವಸ್ಥೆ ಆಗಿದೆ ಎನ್ನತಕ್ಕಂಥದ್ದರ ಬಗ್ಗೆ ಇಡೀ ರಾಜ್ಯದಲ್ಲಿ ಅಡ್ಡಾಡಿ ಮಾಹಿತಿಯನ್ನು ತಂದಿದ್ದಾರೆ ನಾನು ಅವೆಲ್ಲವನ್ನು ಹೇಳಿಕೊಂಡು ಹೋದರೆ ಸಾಕಷ್ಟು ಸಮಯ ಹಿಡಿಯುತ್ತದೆ ಮತ್ತು ಆ ವರದಿ ಬೇಕಾದರೆ ನಾನು ಕನ್‌ಸಾಲಿಡೇಟ್ ಮಾಡಿ ಅವರಿಗೆ ಕಳುಹಿಸುತ್ತೇನೆ ಈ ಮಾತು ಏಕೆ ಹೇಳುತ್ತಿದ್ದೇನೆ ಎಂದರೆ, ಒಂದು ಕಡೆ ಕೇಂದ್ರ ಸರ್ಕಾರದ ಹಣ ಕೊಟ್ಟರೂ ಕೂಡ ನೀವು ಸರಿಯಾಗಿ ಖರ್ಚು ಮಾಡುತ್ತಿಲ್ಲ ಇನ್ನೊಂದು ಕಡೆ ಎಲ್ಲೋ casual ಆಗಿ ಮೀಟಿಂಗ್ ಮಾಡುವುದು, ಭಾಷಣದಲ್ಲಿ ಹೇಳುವುದು, press conference ನಲ್ಲಿ ಹೇಳುವುದು, ಕೇಂದ್ರ ಸರ್ಕಾರ ನಮಗೆ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಹೇಳುವುದು ಕೊಟ್ಟಂತಹ ಹಣ ಖರ್ಚು ಮಾಡಿ ನಮಗೆ ಹಣ ಬೇಕೆಂದು ಅಲ್ಲಿ ಹೋಗಿ ಕುಳಿತು ಹೋರಾಟ ಮಾಡಿ ಹಣ ತರಬೇಕು ಅದು ಬಿಟ್ಟು ಮಲತಾಯಿ ಧೋರಣೆ ಎಂದು ಹೇಳಿ ಇಲ್ಲಿ ಕುಳಿತು ಬಿಡುವುದು ಇದ್ದ ದುಡ್ಡನ್ನು ಕೂಡ ಖರ್ಚು ಮಾಡದಿರುವುದು, ಇವರು ಖರ್ಚು ಮಾಡಿದ್ದು ಎಷ್ಟು, ಇವರ ರಾಜ್ಯ ಸರ್ಕಾರದ ಪಾಲು ಏನಿದೆ, Natural calamity ಯಲ್ಲಿ ಇವರ ಪಾಲು ಎಷ್ಟು ಕೊಡಬೇಕೆಂದು ಇದೆ 2005–06ರಲ್ಲಿ 149 ಕೋಟಿ, 2006–07ರಲ್ಲಿ 153 ಕೋಟಿ ಇದು ಹೆಚ್ಚು ಕಡಿಮೆ 300 ಕೋಟಿ ರೂಪಾಯಿ ಆಗುತ್ತದೆ ಅದು ಎಲ್ಲವೂ ಕೂಡ ಸೇರಿದರೆ ಹಚ್ಚು ಕಡಿಮೆ 800 ಕೋಟಿ, 775 ಕೋಟಿ ರೂಪಾಯಿ ಆದರೆ, ಸುಮಾರು 300 ಎಂದರೆ ಸಾವಿರ ಕೋಟಿ ರೂಪಾಯಿ ಆಗುತ್ತದೆ ಸಾವಿರ ಕೋಟಿ ರೂಪಾಯಿಗಳಲ್ಲಿ ಯಾವ ಯಾವ ಬಾಬತ್ತಿಗೆ ಎಷ್ಟೆಷ್ಟು ನೀವು ಖರ್ಚು ಮಾಡಿ, ಇಂತಹ ಭೀಕರ ಬರಗಾಲ ಇದೆ ಎಂದು ಹೇಳಿ

additional ಆಗಿ ಇವತ್ತಿನ ದಿವಸ ಪತ್ರದಲ್ಲಿ ಕೇಳಿರಬಹುದು ಆದರೆ ಜಿಲ್ಲೆಯಲ್ಲಿ ನಿಮ್ಮ account ಏನಿದೆ, PD account ನಲ್ಲಿ 153 ಕೋಟಿ ರೂಪಾಯಿಗಳು ಇದೆ, ಎಂದರೆ ಅದು ಖರ್ಚು ಮಾಡಿದ ಹಾಗೆ ಆಗುತ್ತದೆಯೇ ? All right, ನನಗೂ ಗೊತ್ತಾಗುತ್ತದೆ, ಏಕೆಂದರೆ 153 ಕೋಟಿ ಯಾವುದೋ committed ಕೆಲಸಕ್ಕಾಗಿ ಅಲ್ಲಿ ಇಟ್ಟಿದ್ದಾರೆ, ಬೇಕಾದ ಹಾಗೆ ತೆಗೆದು ಕೊಳ್ಳುತ್ತಾರೆ ಎಂದರೆ ಒಪ್ಪಬಹುದು ಆದರೆ ಅಧಿವೇಶನ ಕರೆಯುತ್ತಾರೆಂದರೆ ನೀವು ಹಣ ಬಿಡುಗಡೆ ಮಾಡುವುದು ಬೆಳಗಾಂ ಅಧಿವೇಶನ ಕರೆದಾಗ ಒಂದೊಂದು ಕೋಟಿ ಎಂದು ಹೇಳಿ 50–50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದಿರಿ ಅದಾದ ನಂತರ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದಿರಿ ಪುನ ಈ ಅಧಿವೇಶನ ಕರೆದಿದ್ದಾರೆಂದು ಮೊನ್ನೆ ನಿಮ್ಮ ಸರ್ಕಾರದ ಆದೇಶ ಹೊರ ಬಿದ್ದಿದೆ ಒಂದೊಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೀರಿ ಇದು ಕೆಲಸ ಮಾಡತಕ್ಕಂತಹ ವಿಧಾನ ಬರಗಾಲ ನೆನ್ನೆಯಿಂದ ಇದೆಯಾ? ಇವತ್ತು ನೀವು ಹಣ ಬಿಡುಗಡೆ ಮಾಡುವುದಕ್ಕೆ 6–8 ತಿಂಗಳುಗಳಿಂದ ನಾವು ಒದ್ದಾಡುತ್ತಿದ್ದೇವೆ ಎಲ್ಲರೂ ಮಾತನಾಡುತ್ತಿದ್ದೇವೆ ನೀವು ಕೂಡ ಕೇಂದ್ರ ಸರ್ಕಾರದ ಹತ್ತಿರ ಒಂದೆರಡು ಸಾರಿ ಹೋಗಿ ಬಂದಿರಿ ದುಡ್ಡು ಬಂದ ಮೇಲೆ ಕೂಡ ಇಂತಹ ಒಂದು ಕೆಲಸ ತಾವು ಮಾಡತಕ್ಕಂತಹ ಶಕ್ತಿ ಇಲ್ಲವೆಂದರೆ ತಾವು ಏಕೆ ಇರಬೇಕು? ಅಧಿಕಾರ ಹಿಡಿಯತಕ್ಕಂಥದ್ದೇ ಒಂದು ದೊಡ್ಡ ಕೆಲಸವಾ? ಅಧಿಕಾರ, ಏತಕ್ಕೋಸ್ಕರ ಅಧಿಕಾರ, ಜನರ ಸಮಸ್ಯೆಗೆ ಸ್ಪಂದಿಸಿ ಒಳ್ಳೆಯ ಕೆಲಸ ಮಾಡುವುದಕ್ಕೋಸ್ಕರ ಎಂದು ಹೇಳಿ ನೀವು ಬಂದಿದ್ದು ನಾನು ಏನೋ ಬರಗಾಲದ ಬಗ್ಗೆ ಚಿಂತನೆ ಮಾಡುವುದಕ್ಕೆ ಇವರು ಶಿಬಿರಗಳನ್ನು ಮಾಡುತ್ತಿದ್ದಾರೆ, ಅವರ MLA ಗಳಿಗೆ training ಕೊಡುತ್ತಿದ್ದಾರೆ, ಅವರ ಮಂತ್ರಿಗಳಿಗೆ ಯಾವ ಯಾವ account ನಲ್ಲಿ ಎಷ್ಟು ಹಣ ಇರುತ್ತದೆ, ಯಾವ ಯಾವ ಬಜೆಟ್‌ನಲ್ಲಿ ಎಷ್ಟು ಕೇಂದ್ರ ಸರ್ಕಾರದ ಹಣ ಬರುತ್ತದೆ, ರಾಜ್ಯ ಸರ್ಕಾರದ ಪಾಲು ಇರುತ್ತದೆ ಹೇಗೆ ಖರ್ಚು ಮಾಡಬೇಕು, ಹೇಗೆ ಅಭಿವೃದ್ಧಿ ಮಾಡಬೇಕು, ಹೇಗೆ ನಂಜುಂಡಪ್ಪ ವರದಿ ಅನುಷ್ಠಾನಕ್ಕೆ ತರಬೇಕು, ಹೇಗೆ ಈ ತಾರತಮ್ಯವನ್ನು ಹೋಗಲಾಡಿಸಬೇಕು, ಇದರ ಬಗ್ಗೆ ಚಿಂತನೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ ಆದರೆ ಇವರು ಪೂನಾ ರಿಸಾರ್ಟ್‌ನಲ್ಲಿ ಹೋಗಿ ಮಾಡುವುದು ಏನೆಂದರೆ

ಅಧಿಕಾರದಲ್ಲಿ ಉಳಿಯುವುದಕ್ಕೋಸ್ಕರ ಏನೇನು ಮಾಡುವುದು, ಯಾರ್ಯಾರಿಗೆ ಹಿಡಿದುಕೊಳ್ಳುವುದು, ಯಾರ್ಯಾರಿಗೆ ಹಣ ಕೊಡುವುದು, ಅಥವಾ ಯಾರಿಗೆ ಹೆಚ್ಚಿನ ಶಕ್ತಿ ಕೊಡುವುದು, ಯಾರನ್ನು ಮಂತ್ರಿಗಳನ್ನಾಗಿ ಮಾಡುವುದು, ಯಾರಿಗೆ Chairman ಮಾಡುವುದು, ಯಾರಿಗೆ ಸ್ಯೆಟ್ ಕೊಡುವುದು, ಯಾರಿಗೆ ಬೆಂಬಲವನ್ನು ಕೊಡುವುದು, ಯಾರಿಗೆ ನಮ್ಮವರು ಎಂದು ಹೇಳಿ ಸಮಾಧಾನ ಮಾಡುವುದು ಇದೇ ಕೆಲಸ ಯಾರಿಗೆ ಮುಜುಗರಕ್ಕೆ ಸಿಕ್ಕಿಸುವುದು ಯಾರ ಮೇಲೆ ಕೇಸ್ ಹಾಕಬೇಕು, ಯಾರಿಗೆ ಕಮ್‌ಸೋರ್ ಮಾಡಬೇಕು, discretionary amount ಇದ್ದರೂ ಕೂಡ ಅದು ಇಡೀ ರಾಜ್ಯಕ್ಕೆ ಇದೆ ಬರೀ ನಿಮಗೋಸ್ಕರ ಇದೆಯಾ? ನಿಮಗೆ ಓಟು ಕೊಟ್ಟವರು ನಮ್ಮ ಕ್ಷೇತ್ರದಲ್ಲಿರುತ್ತಾರೆ, ನಮಗೆ ಓಟು ಕೊಟ್ಟವರು ನಿಮ್ಮ ಕ್ಷೇತ್ರದಲ್ಲಿರುತ್ತಾರೆ ಆದರೆ ಇದೆಲ್ಲವನ್ನೂ ಕೂಡ ನೀವು ಕೇವಲ ಪಾರ್ಟಿ ಬೇಸಿಸ್ ಮೇಲೆ ಮಾಡುವುದು, ನಾವು ಒಂದೂ ಕೂಡ ಪಾರ್ಟಿ ಬೇಸಿಸ್ ಮೇಲೆ ಮಾಡುವುದಿಲ್ಲ ಏನಾದರೂ ಒಂದು ತಾಲ್ಲೂಕಿಗೆ ಯಾವುದಾದರೂ ಒಂದು additional scheme ಹೋಗಿರಬಹುದು, ಅಥವಾ ಎರಡು ಹೋಗಿರಬಹುದು ಆದರೆ ನೀವು ಹಾಗಿಲ್ಲ ಸಾರಾಸಗಟಾಗಿ ಒಂದು instruction ಇದೆ First JD(S) ಮುಖಂಡರು ಯಾರಿದ್ದಾರೆ, MLA ಯಾರಿದ್ದಾರೆ ಅವರ ಕೆಲಸ ನೀವು ಮಾಡಬೇಕು, ಅಧಿಕಾರಿಗಳನ್ನು ಕರೆಸಿ ಅವರಿಗೆ instruction ಕೊಡುತ್ತಾರೆ "ರಾಜ್ಯವ್ಯಾಪಿ ಅವರು ಏನೇ ಕೇಳಿದರೂ ಮೊದಲು ಅವರ ಕೆಲಸ ಮಾಡಬೇಕು ಎರಡನೆಯದು BJPಯವರು ಅವರ ಮತ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕೆಲಸ ಮಾಡಬೇಕು ಮೂರನೆಯದು ಕಾಂಗ್ರೆಸ್‌ನವರದು ಯಾವುದೂ ಕೂಡ ನಾವು ಹೇಳುವವರೆಗೆ ಮಾಡಬಾರದು" These are the instructions given to the officers ಈ ರೀತಿಯಾಗಿ ರಾಜ್ಯ ನಡೆದರೆ ಹೇಗೆ? ನಿಮ್ಮ discretion ಇರುತ್ತದೆ But, you must use that discretion judiciously ನ್ಯಾಯವಾಗಿ ಅದನ್ನು ಉಪಯೋಗ ಮಾಡಿಕೊಳ್ಳಬೇಕೇ ಹೊರತಾಗಿ, ನೀವು ನನಗೆ ಅಧಿಕಾರ ಇದೆ ಎಂದು ಹೇಳಿ ಹೇಗೆ ಬೇಕು ಹಾಗೆ ಮಾಡಿದರೆ ರಾಜ್ಯ ಎಲ್ಲಿಗೆ ಹೋಗುತ್ತದೆ? ನಾವು ಎಲ್ಲಿಗೆ ಹೋಗುತ್ತೇವೆ, ಅದಕ್ಕೆ ಇವತ್ತು , ಅನೇಕ ಸಮಸ್ಯೆಗಳು ಇರುತ್ತವೆ, schemeಗಳು ಇರುತ್ತವೆ,

ವಿರೋಧಪಕ್ಷದವರು ಮತ್ತು ಆಡಳಿತ ಪಕ್ಷದವರು co-ordination ಮಾಡಿ ಅಂತಹ ಕಾರ್ಯಕ್ರಮಗಳನ್ನು implement ಮಾಡಬೇಕಾಗುತ್ತದೆ ಆದರೆ ನಾವು ಅವರು ಯಾರನ್ನೂ ಕೂಡ ಗಣನೆಗೆ ತೆಗೆದುಕೊಂಡಿಲ್ಲ ಅದು ಕೇಳುವುದೇ ಇಲ್ಲ ಮಟ್ಟ ಹಾಕಿರಿ ಎಂದು ಹೇಳುತ್ತಾರೆ ನಾನು ಇವತ್ತು ಈ ಎಲ್ಲ figures ಕೊಡುತ್ತೇನೆ ಇದರಲ್ಲಿ ಖರ್ಚು ಮಾಡಿದ್ದು ಎಷ್ಟು? ನೀವು ಮೊನ್ನೆ ಇನ್ನು ಹಣ ಬಿಡುಗಡೆ ಮಾಡಿದ್ದೀರಿ ಎಂದರೆ ಎಲ್ಲಿಂದ ಖರ್ಚು ಮಾಡುತ್ತೀರಿ? ಬೆಳಗಾಂ ಅಧಿವೇಶನದಲ್ಲಿ ಬಿಡುಗಡೆ ಮಾಡಿದ 100 ಕೋಟಿ, ಈಗ ಒಂದು 100 ಕೋಟಿ, ಇನ್ನು 28 ತಾಲ್ಲೂಕುಗಳಿಗೆ ದುಡ್ಡು ಕೊಟ್ಟಿಲ್ಲ ತಾವೇನು ಮೊನ್ನೆ ಹಣ ಬಿಡುಗಡೆ ಮಾಡಿದ್ದೀರಿ, ಅದರಲ್ಲಿ ಸುಮಾರು ಇನ್ನು 28 ತಾಲ್ಲೂಕುಗಳಿಗೆ ಹಣ ಕೊಟ್ಟಿಲ್ಲ ನಿಮ್ಮ ಸಚಿವಾಲಯದಿಂದ ಹೊರಡಿಸಿರುವಂತಹ ಸರ್ಕಾರದ ಆದೇಶ ಅದರಲ್ಲಿ ಸುಮಾರು ಇನ್ನು 28 ತಾಲ್ಲೂಕುಗಳಿಗೆ ಹಣ ಇಲ್ಲ ಏಕೆ ಈ ತಾಲ್ಲೂಕುಗಳಿಗೆ ಹಣ ಬಿಡುಗಡೆಯಾಗಿಲ್ಲ? 100 ತಾಲ್ಲೂಕುಗಳಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ಟೆಜರಿಯಲ್ಲಿ ಹಣ ಇಲ್ಲ ಅದಕ್ಕೋಸ್ಕರ ಇನ್ನು 28 ತಾಲ್ಲೂಕುಗಳಿಗೆ ಹಣ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ 28 ತಾಲ್ಲೂಕುಗಳಿಗೆ ಹಣ ಬಿಡುಗಡೆ ಆಗುತ್ತಿದೆ

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ ಆಮೇಲೆ ಆಗುತ್ತದೆ ಆದರೆ ಇದರ ಜೊತೆಯಲ್ಲಿ ಏಕೆ ಹಣ ಬಿಡುಗಡೆ ಆಗಲಿಲ್ಲ?

ಶ್ರೀ ಜಗದೀಶ್ ಶೆಟ್ಟರ್ ನೀವು ಆಗಲೇ ಒಂದು ಸಾವಿರ ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರುತ್ತದೆ ಎಂದು ಹೇಳಿದಿರಿ ಉತ್ತರ ಹೇಳುವಾಗ ನಾನು ಅದೆಲ್ಲವನ್ನೂ ಹೇಳುತ್ತೇನೆ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಕೇಂದ್ರದಿಂದ ಹಣ ಬಂದಿದೆ ಎಂದು ಹೇಳಿದಿರಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ತಾವು ಹಾಗೆ mistake ಮಾಡಿಕೊಳ್ಳಬೇಡಿ ನಾನು ಹಣ ಯಾವಾಗ ಯಾವಾಗ ಬಂದಿತ್ತು ಎಂದು ಹೇಳಿದೆ ಒಟ್ಟಾರೆ natural calamity ಯಲ್ಲಿ ಅತೀವೃಷ್ಟಿ ಮತ್ತು ಅನಾವೃಷ್ಟಿ ಇವೆರಡಕ್ಕೂ ಸೇರಿ ರಾಜ್ಯ ಸರ್ಕಾರದ 300 ಕೋಟಿ ರೂಪಾಯಿಗಳು, ಕೇಂದ್ರ ಸರ್ಕಾರ ಕೊಟ್ಟಂತಹ 700 ಕೋಟಿ ರೂಪಾಯಿಗಳು ಎರಡೂ ಸೇರಿ ಸಾವಿರ ಕೋಟಿ ರೂಪಾಯಿ ಎನ್ನತಕ್ಕಂಥದ್ದು ಇದೆ ಮತ್ತೆ ನಿಮಗೆ ಗೊತ್ತಿದೆ,

ಯಾವಾಗಲೂ ಅತಿವೃಷ್ಟಿ ಇರಲಿ, ಅನಾವೃಷ್ಟಿ ಇರಲಿ, ಭೀಕರವಾದಂಥ ಪರಿಸ್ಥಿತಿ ಇದ್ದಾಗ ಎಲ್ಲ ಕೆಲಸಗಳನ್ನು ನಿಲ್ಲಿಸಿ ನೀವು ಹಣವನ್ನು ಖರ್ಚು ಮಾಡತಕ್ಕಂಥ ಒಂದು ಪ್ರಯತ್ನವನ್ನು ಮಾಡಬೇಕು ಈ ರೀತಿ ಯಾವಾಗಲೂ ಎಲ್ಲ ಸರ್ಕಾರಗಳು ಮಾಡಿವೆ ಈವನ್ ನೀರಾವರಿ ಯೋಜನೆಯನ್ನೂ ಕೂಡ ನಿಲ್ಲಿಸಿ ತಾತ್ಪೂರ್ತಿಕವಾಗಿ ಬರಗಾಲಕ್ಕೆ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ ಹಿಂದೆಲ್ಲಾ ಬಿಲ್ಡಿಂಗ್ ಕೆಲಸವನ್ನು ನಿಲ್ಲಿಸಿ ಹಣವನ್ನು ಕೊಟ್ಟಿದ್ದಾರೆ, ರಸ್ತೆ ಕೆಲಸವನ್ನು ನಿಲ್ಲಿಸಿ ಕೊಟ್ಟಿದ್ದಾರೆ ಆದರೆ ಇಲ್ಲಿ ಆ ರೀತಿ ನಿಲ್ಲಿಸುವುದು ಬೇರೆ ವಿಷಯ ಕೇಂದ್ರ ಸರ್ಕಾರ ಕೊಟ್ಟಂಥ ಹಣವನ್ನು ಖರ್ಚು ಮಾಡತಕ್ಕಂಥ ಕೆಲಸವನ್ನೂ ಮಾಡಿಲ್ಲವಲ್ಲ ಸ್ವಾಮಿ ನಿಮ್ಮ ಜಿ ಓ ನೇ ಎರಡು ತಿಂಗಳ ಹಿಂದೆ, ಒಂದು ತಿಂಗಳ ಹಿಂದೆ ಬಂದರೆ ಅದು ಖರ್ಚು ಮಾಡಿದಂತಾಗುತ್ತದೆಯೆ ? ಯಾವಾಗ ಸೆಶನ್ ಬರುತ್ತದೆ ಎಂಬುದು ಗೊತ್ತಾದಾಗ ಮಾತ್ರ ಅಲರ್ಟ್ ಆಗಿ ಹಣವನ್ನು ರಿಲೀಸ್ ಮಾಡುವುದು ಇಲ್ಲದೇ ಹೋದರೆ ಅದರ ಗೋಜಿಗೇ ಹೋಗುವುದಿಲ್ಲ ಬರೇ ರೆಸಾರ್ಟ್‌ನಲ್ಲಿ ಮೀಟಿಂಗ್ ಮಾಡುವುದು ಅಥವಾ ತಮಗೆ ಎಲ್ಲಿ ಬೇಕೋ ಅಲ್ಲಿ ಮಾತನಾಡಿಕೊಂದು ಅದನ್ನು ಅಲ್ಲಿಗೇ. ಬಿಟ್ಟುಬಿಡುವುದು ಅದೊಂದನ್ನು ಬಿಟ್ಟರೆ ಇವರಿಗೆ ಬೇರೆ ಕೆಲಸವಿಲ್ಲ ಶ್ರೀಮಾನ್ ಎಂ ಪಿ ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿ ಇವೊತ್ತು ರಾಜ್ಯಮಟ್ಟದಲ್ಲಿ ಟಾಸ್ಕ್‌ಫೋರ್ಸ್‌ಗಳನ್ನು ಮಾಡಿದ್ದಾರೆ ಅವರು ಹಿಂದೆ ರೆವಿನ್ಯೂ ಮಿನಿಸ್ಟರ್ ಆಗಿದ್ದರು, ಅದಕ್ಕೆ ಬಹುಶ ನಾನು ರೆವಿನ್ಯೂ ಮಿನಿಸ್ಟರೆ ಇದ್ದೇನೆ, ನಾನೇ ಇರುತ್ತೇನೆ ಎಂದ ಹಾಗೆ ಆಯಿತು ಪುನ ಈಗ ಹೋಂ ಮಿನಿಸ್ಟರ್ ಆದಮೇಲೂ ಕೂಡ ಅವರೇ ಇದ್ದಾರೆ ರೆವಿನ್ಯೂ ಮಿನಿಸ್ಟರ್ ಹೆಚ್ಚು ಕಡಿಮೆ ಎನ್ ಸಿ ಸಿ ಎಫ್ ಫಂಡ್‌ನ್ನು ತರತಕ್ಕಂಥದ್ದು, ಡಿಸ್ಟ್ರಿಬ್ಯೂಟ್ ಮಾಡತಕ್ಕಂಥದ್ದು ಇವರ ಆಧ್ಯಕ್ಷತೆಯಲ್ಲಿಯೇ ಆಗುತ್ತದೆ ಅದಕ್ಕೆ ನೀವು ತಾಲ್ಲೂಕು ಮಟ್ಟದಲ್ಲಿ ಟಾಸ್ಕ್‌ಫೋರ್ಸ್‌ಗಳನ್ನು ಮಾಡಿದ್ದೀರಿ ಎಷ್ಟು ಟಾಸ್ಕ್‌ಫೋರ್ಸ್ ಮೀಟಿಂಗ್‌ಗಳು ಈ 8 ತಿಂಗಳಲ್ಲಿ ಆಗಿದೆ ಆ 8 ತಿಂಗಳಲ್ಲಿ ಎಷ್ಟು ಕೆಲಸಗಳು ಅಪ್ರೂವ್ ಆಗಿವೆ ಆ ರೀತಿ ಅಪ್ರೂವ್ ಆದಂಥ ಕೆಲಸಕ್ಕೆ ಎಷ್ಟು ಖರ್ಚು ಆಗಿದೆ ಇದಲ್ಲದೇ ಪ್ರತಿ ತಾಲ್ಲೂಕಿನಲ್ಲಿ, ಪ್ರತಿ ಜಿಲ್ಲೆಯಲ್ಲಿ ಒಬ್ಬ ಅಧಿಕಾರಿಯನ್ನು ರಿವ್ಯೂ ಮಾಡುವುದಕ್ಕೆ ನೇಮಿಸಬೇಕು ಎಂದು ಇದೆ ಪ್ರತಿ ಜಿಲ್ಲೆಗೆ ಒಬ್ಬ ಸೆಕೆಟರಿ, ಆ ಸೆಕೆಟರಿಗಳು ಹೋಗಿ ಎಷ್ಟು ಮೀಟಿಂಗ್‌ಗಳನ್ನು ಮಾಡಿದ್ದಾರೆ, ಎಷ್ಟು ಕೆಲಸಗಳನ್ನು ಮಾಡಿಸಿದ್ದಾರೆ, ಅಲ್ಲಿನ ಸಮಸ್ಯೆಗಳನ್ನು

ಎಷ್ಟರ ಮಟ್ಟಿಗೆ ಬಗೆಹರಿಸಿದ್ದಾರೆ? ಏಕೆಂದರೆ ಸಾಕಷ್ಟು ಕಡೆ ಹೆಚ್ಚು ಸಮಸ್ಯೆಗಳಿವೆ ಏನು ಸಮಸ್ಯೆಯೆಂದರೆ, ಬರಗಾಲ ಇರುವ ಕಡೆ ಕೆಲಸವಿಲ್ಲದೇ ಇರುವುದು, ಈಗಾಗಲೇ ಮಾಧುಸ್ವಾಮಿಯವರು ಹೇಳಿದ ಹಾಗೆ ಕುಡಿಯುವ ನೀರಿಗೆ ಭೀಮಾ ನದಿಯಿಂದ ನೀರು ತರಬೇಕು ಎಂದು ಹೇಳಿದರು 5 ಕಿ ಮೀ , 6 ಕಿ ಮೀ ನಷ್ಟು ಪೈಪ್‌ಲೈನ್ ಹಾಕಬೇಕೆಂದರೆ ಅಷ್ಟೊಂದು ದುಡ್ಡು ಕೊಡುವುದಕ್ಕೆ ಆಗುವುದಿಲ್ಲವೆಂದು ಡೆಪ್ಯೂಟಿ ಕಮಿಶನರ್ ಹೇಳುತ್ತಾರೆ ಸಿ ಇ ಒ ಹತ್ತಿರ ಅಷ್ಟೊಂದು ದುಡ್ಡು ಇರುವುದಿಲ್ಲ ಅವರು ಮಾಡುವುದಕ್ಕೆ ಆಗುವುದಿಲ್ಲ ಈ ರೀತಿ ಇದ್ದಾಗ ಆ ಸಮಸ್ಯೆಯನ್ನು ಯಾರು ಬಗೆಹರಿಸಬೇಕು? ಆ ಸಮಸ್ಯೆ ಬಗೆಹರಿಸಲು ಸ್ಟೇಟ್ ಲೆವೆಲ್ ಸೆಕೆಟರಿಗಳು ಬಂದು ಅದನ್ನು ನೋಡಿ, "ನೀವು ಮಾಡಿ ನಾನು ಇದನ್ನು ಸ್ಟೇಟ್ ಲೆವೆಲ್ ಕಮಿಟಿಯಲ್ಲಿ ಅಪ್ರೂವ್ ಮಾಡಿಸಿಕೊಡುತ್ತೇನೆ" ಎಂದಾದರೂ ಹೇಳಬೇಕು ಅದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದರೆ ಸರ್ಕಾರದವರೇ ಈ ಬಗ್ಗೆ ಜನರಲ್ ಆಗಿ ಜಿ ಒ ಹೊರಡಿಸಬೇಕು ಅದನ್ನೂ ಮಾಡಿಲ್ಲ ಸ್ಟೇಟ್ ಲೆವೆಲ್ ಮೀಟಿಂಗ್ 15 ದಿವಸಕ್ಕೊಮ್ಮೆ ನೀವು ಮಾಡಬೇಕು ನೀವು ಬೇಕಾದರೆ ಹಿಂದಿನ ಪ್ರೊಸಿಡಿಂಗ್ಸ್ ತೆಗೆದು ನೋಡಿ ಪ್ರತಿ 15 ದಿವಸಕ್ಕೊಮ್ಮೆ ನಾವು ಸಿ ಆರ್ ಎಫ್ ಮೀಟಿಂಗ್‌ನ್ನು ಕಂಡಕ್ಟ್ ಮಾಡಿದ್ದೇವೆ ನಿಮಗೂ ಗೊತ್ತಿದೆ ಅನೇಕ ಕೆರೆಗಳಿಗೆ ದುಡ್ಡು ಕೊಟ್ಟಿದ್ದೇವೆ ಡೀಸಿಲ್ಟಿಂಗ್ ಮಾಡುವುದಕ್ಕೆ ದುಡ್ಡು ಕೊಟ್ಟಿದ್ದೇವೆ ಯಾವ ಪಕ್ಷದ ಶಾಸಕರೇ ಇರಲಿ, ಸರಿ ಸಮಾನವಾಗಿ ಎಲ್ಲ ಶಾಸಕರಿಗೂ ಜನೋಪಯೋಗಿ ಬರಗಾಲ ಕೆಲಸ ಮಾಡುವುದಕ್ಕಾಗಿ ಹಣವನ್ನು ಹಂಚತಕ್ಕಂಥ ಕೆಲಸವನ್ನು ಮಾಡಿದ್ದೇವೆ ಆದರೆ ಇವೊತ್ತು ಆ ರೀತಿಯ ರಿವ್ಯೂ ಇಲ್ಲ ಆ ರೀತಿಯ ರಿವ್ಯೂ ಮಾಡಿದರೆ ನಿಮಗೆ ಗೊತ್ತಾಗುತ್ತದೆ, ಪವರ್ ಶಾರ್ಟೇಜ್ ಎಲ್ಲಿದೆ? ಕುಡಿಯುವ ನೀರಿನ ತೊಂದರೆ ಎಲ್ಲಿದೆ? ಕುಡಿಯುವ ನೀರಿನ ತೊಂದರೆ ಇದ್ದರೆ ಸಂಬಂಧ ಪಟ್ಟ ಸೆಕಟರಿಯನ್ನು ಕರೆದು ಅಲ್ಲಿಯೇ ಅದನ್ನು haul up ಮಾಡಬಹುದು ಅಥವಾ ಪವರ್ ಶಾರ್ಟೇಜ್ ಇತ್ತೆಂದರೆ ಅಲ್ಲಿಯೇ ಕೆ ಪಿ ಟಿ ಸಿ ಎಲ್ ನವರನ್ನು ಕರೆಸಿ ಅಲ್ಲಿಯೇ ನೀವು ಅವರನ್ನು haul up ಮಾಡಬಹುದು ಹೀಗೆ scarcity ಗೆ ಸಂಬಂಧಪಟ್ಟಂಥ ಅಥವಾ ಆ ಇಲಾಖೆಗೆ ಸಂಬಂಧಪಟ್ಟಂಥ Heads of the departmentನವರನ್ನು, ಇಲಾಖಾ ಸೆಕೆಟರಿಗಳ ಸಭೆಯನ್ನು ಕರೆದು ಪ್ರತಿ 15 ದಿವಸಕ್ಕೆ ಒಮ್ಮೆ ನೀವು ರಿವ್ಯೂ ಮಾಡಿದ್ದರೆ ಇವೊತ್ತು ಈ

ಪರಿಸ್ಥಿತಿ ಬರುತ್ತಿರಲಿಲ್ಲ ಏನು ಹಣ ಇವ್ಹೊತ್ತು ಖರ್ಚು ಮಾಡದೇ ಉಳಿದಿದೆ ಅಥವಾ ಖರ್ಚು ಮಾಡುತ್ತೇವೆ ಎಂದು ತೋರಿಸಿ ಇವ್ಹೊತ್ತು ಪಿ ಡಿ ಅಕೌಂಟ್‌ನಲ್ಲಿ ಬಿದ್ದಿದೆ ಆ ರೀತಿ ಆಗುತ್ತಿರಲಿಲ್ಲ ಇನ್ನೂ ಹಣಕ್ಕಾಗಿ ನೀವು ಹೋರಾಟ ಮಾಡುತ್ತಿದ್ದಿರಿ ಇದು ಒಂದು ವಿಷಯ ಎರಡನೆಯದಾಗಿ ಅಭಿವೃದ್ಧಿ ಕೆಲಸದ ಬಗ್ಗೆ ನಿಜವಾಗಿ ನಾನು ಹೇಳುತ್ತೇನೆ, ನಾನೂ ಆ ಕಡೆ ಇದ್ದಾಗಲೂ ಕೂಡ ನಾನು ಈ ಬಗ್ಗೆ ಹೇಳಿದಾಗ ನೀವೇ ಟೀಕೆ ಮಾಡುತ್ತಿದ್ದಿರಿ ಅಭಿವೃದ್ಧಿ ಕೆಲಸಕ್ಕಾಗಿ ನಾವು ಪರಸ್ಪರ ಹೊಂದಾಣಿಕೆಯಿಂದ ಕೆಲಸ ಮಾಡಿದರೆ ಮಾತ್ರ ಹಳ್ಳಿಗಳಲ್ಲಿ ರಸ್ತೆಗಳ ದುರಸ್ತಿಯಾಗಲಿ, ಕೆರೆಗಳ ದುರಸ್ತಿಯಾಗಲಿ, ಕುಡಿಯುವ ನೀರಿನ ವ್ಯವಸ್ಥೆಯಾಗಲೀ ಆಗುತ್ತದೆಯೇ ಹೊರತು ಅದನ್ನು ಬಿಟ್ಟು ಕೇವಲ ನೀವು ಯೋಜನೆಗಳನ್ನು ಘೋಷಣೆ ಮಾಡುವುದು, ನಾವು ಅದನ್ನು ಸರಿ ಇಲ್ಲವೆಂದು ಹೇಳುವುದು ಇದನ್ನೇ ಮಾಡಿಕೊಂಡು ಹೋದರೆ ಖಂಡಿತವಾಗಿ ಸಮಸ್ಯೆ ಬಗೆಹರಿಯುವುದಿಲ್ಲ, ಡೆವಲಪ್‌ಮೆಂಟ್ ಕೂಡ ಆಗುವುದಿಲ್ಲ ಪಕ್ಕದ ರಾಜ್ಯಗಳಿಂದ ನಾವು ಕಲಿಯಬೇಕಾಗುತ್ತದೆ ನಮ್ಮ ಹಾಗೆ ಪಕ್ಕದ ರಾಜ್ಯಗಳವರಾದ ಆಂಧ್ರದವರಿದ್ದಾರೆ, ತಮಿಳುನಾಡಿನವರಿದ್ದಾರೆ ಅಲ್ಲೆಲ್ಲಾ ಎಲ್ಲರೂ ಕೂಡಿ ಕೆಲಸ ಮಾಡುತ್ತಾರೆ ಅಧಿಕಾರಿಗಳು, ಮಂತ್ರಿಗಳು, ಶಾಸಕರು ಮತ್ತು ಜಿಲ್ಲಾ ಪಂಚಾಯತ್‌ನವರು ಎಲ್ಲರೂ ಒಟ್ಟಾಗಿ ಸೇರಿ ಕೆಲಸ ಮಾಡುತ್ತಾರೆ ಇಲ್ಲಿ ಆ ರೀತಿ ಏನೂ ಇಲ್ಲ ಒಬ್ಬರ ಮೇಲೆ ಒಬ್ಬರು ಸೇಡಿನ ಭಾವನೆ ಇಟ್ಟುಕೊಂಡಿದ್ದಾರೆ ಅವನ ಮೇಲೆ ಈ ರೀತಿ ಮಾಡಿದ್ದಾನೆಂದು ಇವನು ಅಪ್ಲಿಕೇಶನ್ ಕೊಡುವುದು ಇವನು ಮಾಡಿದರೆ ಅವನ ಮೇಲೆ ಅಪ್ಲಿಕೇಶನ್ ಕೊಡುವುದು ನಿಮ್ಮವರು ಹಾಗೆ ಮಾಡಿದ್ದಾರೆ ನೀವೇನು ಮಾಡಿದಿರಿ ನಾನು ಪ್ರತಿ ಸಲ ನೋಡುತ್ತಿದ್ದೇನೆ ಯಾವುದೇ ಮಾತು ಬಂತೆಂದರೆ, ನೀವೇನು 50 ವರ್ಷದಿಂದ ಮಾಡಿದ್ದೀರಿ, ನೀವೇನು ಮಾಡಿದಿರಿ ನಿಮ್ಮ ಸರ್ಕಾರ ಇದ್ದಾಗ ಎಂದು ಕೇಳುವುದು ಅದಕ್ಕೆ ಉತ್ತರವನ್ನೂ ನಾವು ಕೊಟ್ಟಾಗಿದೆ ಈಗ ನಿಮಗೆ ಅಧಿಕಾರ ಸಿಕ್ಕಿದೆ ನೀವೇನು ಮಾಡುತ್ತೀರಿ ಎಂಬುದು ಮುಖ್ಯವೇ ಹೊರತು ಅದನ್ನು ಬಿಟ್ಟು ನೀವೇನು ಹಿಂದೆ ಮಾಡಿದ್ದೀರಿ ಎಂದು ಪ್ರಶ್ನೆ ಕೇಳುವುದು ಸರಿಯಲ್ಲಿ ಆ ಕೆಲಸವನ್ನು ಎಲೆಕ್ಷನ್‌ನಲ್ಲಿ ಮಾಡೋಣ ಹೊರಗಡೆ ಪಬ್ಲಿಕ್ ಸ್ಪೀಚ್‌ನಲ್ಲಿ ನೀವೂ ಹೇಳಿಕೊಂಡು ಹೋಗಿ ನಾವೂ ಹೇಳಿಕೊಂಡು ಹೋಗುತ್ತೇವೆ ಆದರೆ ನಾವೂ ನೀವೂ ಸೇರಿ ಇಂಥ ಬರಗಾಲ ಪರಿಸ್ಥಿತಿಯಲ್ಲಿ ಜನರಿಗೆ ಕುಡಿಯುವ

ನೀರಿನ ವ್ಯವಸ್ಥೆ, ಜಾನುವಾರುಗಳಿಗೆ ಮೇವಿನ ವ್ಯವಸ್ಥೆ, ಜನರಿಗೆ ಮಾಡಲು ಕೆಲಸವನ್ನು ಕೊಡತಕ್ಕಂಥ ವ್ಯವಸ್ಥೆ, ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ ಕೊಡುವ ನಿಟ್ಟಿನಲ್ಲಿ ಚಿಂತನೆಯನ್ನಯನ್ನು ಮಾಡಿ ನಾನು ಹೇಳುತ್ತೇನೆ, ಅಧ್ಯಕ್ಷರೆ, ಈ ವಿಚಾರದಲ್ಲಿ ಈ ಸರ್ಕಾರ ವಿಫಲವಾಗಿದೆ ಬಹುಶ ರೆವಿನ್ಯೂ ಮಿನಿಸ್ಟರ್ ರವರಿಗೆ ಸಂಪೂರ್ಣವಾದಂಥ ಅಧಿಕಾರವನ್ನು ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ಏಕೆಂದರೆ ಇದರಲ್ಲಿ ಕೋ–ಆರ್ಡಿನೇಶನ್ ಬಹಳ ಮುಖ್ಯವಾಗಿರುತ್ತದೆ ನಿಮ್ಮ ಮಾತು ನಡೆಯಬೇಕೆಂದರೆ ನಿಮ್ಮನ್ನು ಆ ಕಮಿಟಿ ಛೇರ್ಮನ್ ಮಾಡಿ ಎಲ್ಲಾ ಡಿಪಾರ್ಟ್‌ಮೆಂಟ್‌ನೊಂದಿಗೆ ಈ ವಿಷಯದಲ್ಲಿ ಕೋ–ಆರ್ಡಿನೇಟ್ ಮಾಡತಕ್ಕಂಥದ್ದು ಅಗತ್ಯವಾಗಿರುತ್ತದೆ ಅದು ಫ್ಲಡ್ ವಿಚಾರವಿರಬಹುದು, ಡ್ರಿಂಕಿಂಗ್ ವಾಟರ್ ಇರಬಹುದು, ಎಲೆಕ್ಟ್ರಿಸಿಟಿ ವಿಚಾರವಿರಬಹುದು ಅಥವಾ ಯಾವುದೇ ವಿಚಾರವಿರಬಹುದು ಕ್ಯಾಬಿನೆಟ್‌ನಲ್ಲಿ ಏನು ಎಂಪವರ್ ಕಮಿಟಿ ಎಂದು ಮಾಡುತ್ತೇವೆ, ಅಂದರೆ ಏನು ಕ್ಯಾಬಿನೆಟ್‌ಗೆ ಅಧಿಕಾರವಿರುತ್ತದೆಯೋ ಆ ಅಧಿಕಾರ ಸಂಪೂರ್ಣವಾಗಿ ಸಬ್ ಕಮಿಟಿಗೆ ಇರುತ್ತದೆ ಪುನ ಅಲ್ಲಿಗೆ ಹೋಗಬೇಕಾಗಿಲ್ಲ ನೀವು ಸಬ್ ಕಮಿಟಿಯಲ್ಲಿ ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ ಅದೇ ಅಂತಿಮ ಅದೇ ಕ್ಯಾಬಿನೆಟ್ ಡಿಸಿಶನ್ ಆ ಎಂಪವರ್ ಕಮಿಟಿ ನಮ್ಮ ಕಾಲದಲ್ಲಿ ಇತ್ತು ಈಗ ಏಕೆ ಆ ರೀತಿ ಮಾಡಬಾರದು

ಶ್ರೀ ಜಗದೀಶ್ ಶೆಟ್ಟರ್ – ಆ ರೀತಿಯ ಎಂಪವರ್ ಕಮಿಟಿ ಈಗಲೂ ಇದೆ 15 ದಿವಸಗಳಿಗೊಮ್ಮೆ ಮೀಟಿಂಗ್ ಮಾಡುತ್ತಿದ್ದೇವೆ ಆ ಮೀಟಿಂಗ್‌ಗಳಲ್ಲಿ ಎಲ್ಲಾ ರೀತಿಯ ಮಹತ್ವದ ನಿರ್ಣಯಗಳನ್ನು ನಾವು ಕೈಗೊಂಡಿದ್ದೇವೆ ನಾನು ಉತ್ತರ ಕೊಡುವಾಗ ಅದರ ಎಲ್ಲಾ ಡೀಟೈಲ್ಸ್‌ಗಳನ್ನು ಹೇಳುತ್ತೇನೆ ಕಮಿಟಿ ಇಲ್ಲವೆಂದು ನೀವು ಹೇಳುತ್ತಿದ್ದೀರಿ ಆದರೆ ಆ ಕಮಿಟಿ ಇದೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ– ಹಾಗಾದರೆ ಆ ಎಂಪವರ್ ಕಮಿಟಿ ಇದ್ದರೆ ಹಣಕ್ಕಾಗಿ ನೀವು ಏನು ಮಾಡಬೇಕಾಗಿಲ್ಲ ಆ ಕಮಿಟಿ ಮೀಟಿಂಗ್‌ಗೇ ಫೈನಾನ್ಸ್ ಸೆಕೆಟರಿ ಬರುತ್ತಾರೆ ಈಗಾಗಲೇ ನಿಮ್ಮ ಹತ್ತಿರ ಕೇಂದ್ರ ಸರ್ಕಾರದಿಂದ ಹಣ ಯಾವ ಯಾವುದಕ್ಕೆ ಬಿಡುಗಡೆಯಾಗಿದೆ ಎಂಬ ಬಗ್ಗೆ ಲಿಸ್ಟ್ ಇದೆ ನಮ್ಮ ಹತ್ತಿರ ಕೂಡ ಲಿಸ್ಟ್ ಇದೆ ತಾವು ಬಿಡುಗಡೆ ಮಾಡಿ ಎಂದು ಅಲ್ಲಿಯೇ ಹೇಳಬೇಕು ಅಲ್ಲಿ ಹೇಳಿದರೆ ಅಲ್ಲಿಯೇ ಹಣ ಬಿಡುಗಡೆಯಾಗುತ್ತದೆ ಹೊರತು, ಹಣಕ್ಕಾಗಿ ಮತ್ತೊಂದು ಕಡೆ

ಹೋಗಬೇಕಾಗಿಲ್ಲ ಅಥವಾ ಪುನ ಕ್ಯಾಬಿನೆಟ್‌ಗೆ ತರಬೇಕಾಗಿಲ್ಲ ಎರಡನೆಯದಾಗಿ ನಿಮ್ಮಲ್ಲಿ ಹಣ ಇಲ್ಲದಿದ್ದರೂ ಕೂಡ ಯಾವ ರೀತಿಯಾಗಿ ಕ್ರೋಡಿಕರಿಸಬೇಕೆಂದು ಹೇಳಿ ಅವರು ಇಲ್ಲಿ ಬೇರೆ ಬೇರೆ ಕೆಲಸದಲ್ಲಿ ಕಟ್ ಮಾಡಿ ಇದನ್ನು ನಾವು ಮಾಡುತ್ತೇವೆಂದು ಪ್ರಪೋಸಲ್ ಕೊಟ್ಟರೆ ಅದಕ್ಕೂ ಕೂಡ ಕ್ಯಾಬಿನೆಟ್ ಒಪ್ಪಬೇಕಾಗುತ್ತದೆ ಏಕೆಂದರೆ ಇದಕ್ಕೆ ಪ್ರಾಮುಖ್ಯತೆ ಕೊಡುವ ದೃಷ್ಟಿಯಿಂದಲೇ ಆ ಎಂಪವರ್ ಕಮಿಟಿ ರಚನೆಯಾಗಿರುತ್ತದೆ ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಆ ಎಂಪವರ್ ಕಮಿಟಿ ಇದ್ದರೆ ನೀವು ನಿಮ್ಮ ಹಕ್ಕನ್ನು ಅದರ ಮುಖಾಂತರ ಚಲಾಯಿಸುತ್ತಿಲ್ಲ ಅಥವಾ ನಿಮ್ಮ ಕರ್ತವ್ಯವನ್ನು ನೀವು ಮಾಡುತ್ತಿಲ್ಲವೆಂದಂತಾಗುತ್ತದೆ ಅದಿಲ್ಲದಿದ್ದರೆ ನಿಮಗೆ ಎಂಪವರ್ ಕಮಿಟಿ ಎಂದು ಹೆಸರಿಗೆ ಮಾತ್ರ ಕೊಟ್ಟು ಪ್ರತಿ ದಿನ ರಾತಿ ಫೈಲ್‌ಗಳನ್ನು ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಕುಮಾರಸ್ವಾಮಿಯವರು ತರಿಸಿಕೊಳ್ಳುತ್ತಾರೋ ಏನೋ ನನಗೆ ಗೊತ್ತಿಲ್ಲ ಎರಡರಲ್ಲಿ ಒಂದಿರಬೇಕು Either you are not executing or you are not exercising your power ಅಥವಾ ನೀವು ಎಕ್ಸರ್‌ಸೈಸ್ ಮಾಡುವುದಕ್ಕೆ ಅವರೇನಾದರೂ ಅಡ್ಡಿ ಬರುತ್ತಾರೋ ನನಗೆ ಗೊತ್ತಿಲ್ಲ ಎರಡರಲ್ಲಿ ಈ ಒಂದು ಯಾವುದಾದರೂ ಆಗಿರಬೇಕು ಎರಡನೆಯದಾಗಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದ ವಿಚಾರದ ಬಗ್ಗೆ ಕೂಡ ತಾವು ಹೇಳಿದಿರಿ ಈಗ ನಾನು ಆ ಬಗ್ಗೆ ಸ್ಪಷ್ಟವಾಗಿ ನಿಮ್ಮ ಮುಂದೆ ಹೇಳಿದೆ ಆದರೆ ನಾನು ಹೇಳಿದ್ದನ್ನು ತಾವು ಒಪ್ಪಲಿಲ್ಲ ಇನ್ನೊಮ್ಮೆ ನಾನು ಬೀಫಾಗಿ ಹೇಳುತ್ತೇನೆ ಒಂದೇನೆಂದರೆ ಈ ಸಿ ಆರ್ ಎಫ್ ನಲ್ಲಂತೂ ರೆಗ್ಯುಲರ್ ಆಗಿ ಬರತಕ್ಕಂಥ ಫಂಡ್ ಇದೆ ಇದರಿಂದ 90 ಕೋಟಿ ರೂಪಾಯಿ ಬಂದಿರುವುದಂತೂ ನಿಜ ತಾನೇ ಆಮೇಲೆ ಎನ್ ಸಿ ಸಿ ಎಫ್ ಅಡಿಯಲ್ಲಿ ಬಂದದ್ದು 226 ಕೋಟಿ ರೂಪಾಯಿಗಳು, ನಿಜ ತಾನೇ ಆಮೇಲೆ ಏಳು, ಎಂಟರಲ್ಲಿ ಅಡ್ವಾನ್ಸ್ ಅಮೌಂಟ್, ಅಂದರೆ ನೆಕ್ಸ್ಟ್ ಈಯರ್‌ದು ಈ ವರ್ಷವೇ ನಿಮಗೆ ಬೇಕಾದರೆ ಅಡ್ವಾನ್ಸ್ ಅಮೌಂಟ್ ಕೊಡುತ್ತಾರೆ ಮುಂದಿನ ವರ್ಷದ ಹಣ ಈ ವರ್ಷ ನಿಮಗೆ ಬೇಕೆಂದರೆ ಅದರ advance amount ಕೊಡುತ್ತಾರೆ ಅದನ್ನು ನೀವು ಕೇಳಿಕೊಂಡಿರಿ, ಅದು 23 ಕೋಟಿ ರೂಪಾಯಿ ಬಂದಿರುವುದು ನಿಜವೇ ? ನಾನು ಹಿಂದಿನದ್ದೂ ಹೇಳುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ ಇಲ್ಲವೆಂದು ನಾನು ಹೇಳುತ್ತಿಲ್ಲ ಹಿಂದಿನ ವರ್ಷದ್ದು ಅದಕ್ಕೆ ಮಿಕ್ಸ್ ಮಾಡಿದ್ದೀರಿ ನೀವು 2005–06 ಮತ್ತು 2006–07 ನೆ ಎರಡು ಸಾಲಿನದನ್ನು ಸೇರಿಸಿ ಒಂದು ಸಾವಿರ ಕೋಟಿ ರೂಪಾಯಿ ಎಂದು ಹೇಳಿದಿರಿ ನೀವು 2006–07ನೆ ಸಾಲಿನದ್ದನ್ನು ಹೇಳಿ

ಶ್ರೀ ಮಲ್ಲಿಕಾರ್ಜುನ ಖರ್ಗೆ 2006–07ನೇ ಸಾಲಿನದ್ದನ್ನು ಕೂಡ ಹೇಳುತ್ತೇನೆ ನಿಮ್ಮದು expenditure cumulative ಇದೆ ನಾನೇನೋ ಬಿಡಿಸಿ ಹೇಳಿದರೆ ಸರಿ ನೀವು ಬರಗಾಲಕ್ಕೆ ಏನು expenditure ಮಾಡಿಕೊಂಡು ಬಂದಿದ್ದೀರಿ, ಅದನ್ನು cumulative ಆಗಿ ತೋರಿಸಿದ್ದೀರಿ 2005–06ರ ಏಪ್ರಿಲ್‌ನಿಂದ ಡಿಸೆಂಬರ್ end ವರೆಗೆ ಏನು ನಡೆದಿದೆ ಎನ್ನುವುದರೆ ಬಗ್ಗೆ ನಿಮಗೆ ಕೊಟ್ಟಂತಹ ಅಂಕಿ ಅಂಶಗಳಿಂದ ಅಥವಾ ಕಾಗದಪತ್ರಗಳಿಂದ ಗೊತ್ತಾಗುತ್ತದೆ ಅದನ್ನು ನೀವು ಬೇರ್ಪಡಿಸಿ ಹೇಳಿಕೊಳ್ಳಿ ಆ ಮಾತು ಬೇರೆ ಆದರೆ ಹಣ ಬಂದಿದ್ದಂತೂ ನಿಜ ಆದರೆ ಹಣ ಎಷ್ಟು ಬಂತು, ಅದು ಸರಿಯಾದ ರೀತಿಯಲ್ಲಿ ಖರ್ಚಾಗಿಲ್ಲವೆನ್ನುವುದು ನಿಜ ಅದನ್ನು ನೀವು ಒಪ್ಪಿಕೊಳ್ಳಬೇಕು ಮತ್ತೆ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಪತ್ರ ಬರೆದು ಮಾಹಿತಿಯನ್ನು ತರಿಸಿಕೊಂಡಿದ್ದಾರೆ ಅದರಲ್ಲೂ ವಿಶೇಷವಾಗಿ ಡೆಪ್ಯೂಟಿ ಕಮಿಷನರ್‌ರವರನ್ನು ನೇರವಾಗಿ ಸಂಪರ್ಕಿಸಿ Expenditure Section ನಿಂದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ ಇಲ್ಲಿಯವರೆಗೆ ಬಂದಂತಹ ಮಾಹಿತಿ ಪ್ರಕಾರ ಹಣ ಖರ್ಚಾಗಿರುವುದು 151 ಕೋಟಿ 38 ಲಕ್ಷ ರೂಪಾಯಿ ಮಾತ್ರ ಜಿಲ್ಲಾಧಿಕಾರಿಗಳ PD account ನಲ್ಲಿ 135 ಕೋಟಿ ರೂಪಾಯಿ ಇದೆ ಆದರೆ ನೀವು ಇಲ್ಲಿಯವರೆಗೆ ಬಿಡುಗಡೆ ಮಾಡಿದ್ದು 261 ಕೋಟಿ ರೂಪಾಯಿ ಮಾತ್ರ ಕೇಂದ್ರದಿಂದ ಈ ವರ್ಷದ್ದು ಸೇರಿ ಬಂದಂತಹ ಹಣ 340 ಕೋಟಿ ರೂಪಾಯಿ ಅದಕ್ಕೆ ಈ ಎಲ್ಲಾ ಅಂಕಿಅಂಶಗಳನ್ನು ಮುಚ್ಚಿ ಹಾಕುವುದಕ್ಕೆ ಬರುವುದಿಲ್ಲ ಆದರೆ ಕೆಳಮಟ್ಟದಲ್ಲಿ ಎಷ್ಟರಮಟ್ಟಿಗೆ implement ಆಗಿದೆಯೆಂದು ನೋಡುವುದಕ್ಕೆ ನಿಮಗೆ ಪುರುಸೊತ್ತಿಲ್ಲ ನಾನು ಯಾವಾಗಲೂ, ನಿಮಗೆ ಜನರ ಮೇಲೆ ಪ್ರೀತಿ ಇದೆ, ಆದರೆ ಅವರ ಸೇವೆ ಮಾಡುವುದಕ್ಕೆ ಪುರುಸೊತ್ತಿಲ್ಲವೆಂದು ಹೇಳುತ್ತೇನೆ ಆದುದರಿಂದ ದಯವಿಟ್ಟು ಈಗಲಾದರೂ ಪುರುಸೊತ್ತು ಮಾಡಿಕೊಳ್ಳಿ ಈಗ ಕೊನೆ ಹಂತದಲ್ಲಿ ಮಾತುಕತೆಯಲ್ಲಿ ನೋಡಿದರೆ Judicial separation ನಲ್ಲಿ ಇದ್ದೀರಿ ಎಂದು ಕಾಣುತ್ತದೆ Divorce ಗೆ

ಇನ್ನು ಬಹಳ ದಿನ ಬೇಕು Judicial separation ಇಲ್ಲವೆಂದರೆ ಅದನ್ನು ಬಿಟ್ಟು ಬಿಡುತ್ತೇನೆ ಅದರ ಗೋಜಿಗೆ ಹೋಗುವುದಿಲ್ಲ ಇನ್ನು ರಘುವಂಶಿ ಪ್ರಸಾದ್‌ರವರು party politics ಮಾಡಬೇಕೆಂದು ಇಲ್ಲ ಅವರೆ ಸ್ವತ ಹೇಳಿದ್ದಾರೆ, 88 ಕೋಟಿ ರೂಪಾಯಿ ಕುಡಿಯುವ ನೀರಿನ ಯೋಜನೆಗೆ ಕೊಟ್ಟಿದ್ದಾರೆ ಅದರಲ್ಲಿ ಕರ್ನಾಟಕ 44 ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿದೆ ಒಂದು ಕಡೆ ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲವೆಂದು, ಹಣ ಇಲ್ಲವೆಂದು ಹೇಳಿಕೊಳ್ಳುತ್ತಾ ಹೋಗುವುದು ಆದರೆ ರಾಜ್ಯ ಸರ್ಕಾರದಲ್ಲಿ ಹಣ ತುಂಬಿ ತುಳುಕುತ್ತಿದೆ ಯಾವುದಕ್ಕೂ ಕೇಳಿದರೂ ಕೂಡ National Highwayಗೆ ದುಡ್ಡು ಬೇಕೆಂದು ಕೇಳಿದರೂ ಕೂಡ yes ಎಂದು ಹೇಳುವುದು Dam ಕಟ್ಟುವುದಕ್ಕೆ ಕೇಳಿದರೂ ಕೂಡ yes, 300 High School ಕಟ್ಟಬೇಕೆಂದರೂ yes, Junior College, Degree College ಬೇಕೆಂದರೂ yes, ದಾವಾಖಾನೆಗಳು ಬೇಕೆಂದರೂ yes, ಎಷ್ಟು ಬೇಕೋ ಅಷ್ಟು ಇದೆ ಎಲ್ಲಾ ಕೋಟಿಗಟ್ಟಲೆ ಮಾತನಾಡುತ್ತೇವೆ ಮಾನ್ಯ ರಾಜ್ಯಪಾಲರ speech ನಲ್ಲಿ ಏನು ಹೇಳಿದ್ದಾರೆಂದರೆ ಡಾ ನಂಜುಂಡಪ್ಪರವರ ವರದಿ ಪ್ರಕಾರ ಯಾವ್ಯಾವುದು ಹಿಂದುಳಿದಿರತಕ್ಕಂಥ ತಾಲ್ಲೂಕು ಇವೆ, ಅಲ್ಲಿ ಹೊಸದಾಗಿ ಸರ್ಕಾರದ ಖರ್ಚಿನಲ್ಲಿ ಹೊಸ ಆಸ್ಪತ್ರೆಗಳನ್ನು ಮಾಡುತ್ತೇವೆಂದು ಕೊಟ್ಟಿದ್ದಾರೆ ಅದಕ್ಕಾಗಿ ಇವತ್ತು 44 ಕೋಟಿ ರೂಪಾಯಿಗಳು ಎಂದರೆ 60 ಪರ್ಸೆಂಟ್‌ನಷ್ಟು ಖರ್ಚಾಗಿದೆ ಇನ್ನು 40 ಪರ್ಸೆಂಟ್‌ನಷ್ಟು ಖರ್ಚಾಗಿಲ್ಲ ಅದೇ ರೀತಿಯಾಗಿ ಕುಡಿಯುವ ನೀರಿನ ಹಾಗೂ ನೀರಾವರಿ ಯೋಜನೆಗಳು ಇವೆ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಸಾಕಷ್ಟು ಯೋಜನೆಗಳು ಇವೆ ಉದ್ಯೋಗ ಖಾತ್ರಿ ಯೋಜನೆ ಐದು ಜಿಲ್ಲೆಗಳಲ್ಲಿ ಇದೆ ಅದಕ್ಕೆ ಕೋಟ್ಯಾಂತರ ರೂಪಾಯಿ ಬರುತ್ತಿದೆ ಆ ಯೋಜನೆ ಅನುಷ್ಠಾನಕ್ಕೆ ತರಬೇಕು ಎಂದರೆ co-ordination ಬೇಕು ಆ ಯೋಜನೆಯ ಪ್ರಕಾರ strict ಆಗಿ ಕೆಲಸ ಮಾಡಿದವರಿಗೆ cheques ನೇರವಾಗಿ ಕೊಡಬೇಕು ಎಂದಿದೆ ಆಗ naturally Engineers, Junior Engineers ಕೆಲಸ ಮಾಡುವುದಿಲ್ಲ ಏಕೆಂದರೆ ಬಂದಂತಹ ಹಣ ನೇರವಾಗಿ ಕೆಲಸ ಮಾಡಿದವರಿಗೆ ಹೋಗುತ್ತದೆ, ಇದರಿಂದ ನಮಗೆ ಏನು ಸಿಗುತ್ತದೆಂದು ಹೇಳಿ ಅವರು interest

ತೆಗೆದುಕೊಳ್ಳುವುದಿಲ್ಲ ಅದಕ್ಕಾಗಿ ಚಿತ್ರದುರ್ಗ, ದಾವಣಗೆರೆ, ರಾಯಚೂರು, ಗುಲ್ಬರ್ಗ ಮತ್ತು ಬೀದರ್, ಈ 5 ಜಿಲ್ಲೆಗಳಲ್ಲಿ ಏನು Employment Guarantee Scheme ಇದೆ ಇದು ಸರಿಯಾದ ರೀತಿಯಲ್ಲಿ ಏಕೆ ಅನುಷ್ಠಾನಕ್ಕೆ ಬರುತ್ತಿಲ್ಲವೆಂದರೆ ಅಲ್ಲಿ Engineers ಹೆದರುತ್ತಿದ್ದಾರೆ ಏಕೆಂದರೆ ಅವರು machines use ಮಾಡುವ ಹಾಗಿಲ್ಲ ಎರಡನೆಯದಾಗಿ labours ಗೆ ಇಷ್ಟು quantity ಕೆಲಸ ಮಾಡಬೇಕೆಂದು ಇದ್ದು, ಅಷ್ಟು ಕೆಲಸ ಮಾಡಿದರೆ ಮಾತ್ರ ಇಷ್ಟು ಹಣ ಎಂದು ನಿಗದಿ ಮಾಡಿದ್ದಾರೆ ಆದರೆ ಅನೇಕ ಕಡೆ ಹೇಳಿರುವಂತಹ quantity ಪ್ರಕಾರ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಆ ಜನರೇ Engineers ಮೇಲೆ ಬೀಳುತ್ತಾರೆ ಕೆಲವು ಕಡೆ Engineers ಇದರಲ್ಲಿ ನಮಗೆ ಏನೂ ಬರುವುದಿಲ್ಲ, ಸಿಗುವುದಿಲ್ಲ, ನಾವು ಏಕೆ ಇದರ ಕೆಲಸ ಮಾಡಬೇಕು ಎಂದು ಸುಮ್ಮನೆ ಇದ್ದು ಬಿಡುತ್ತಾರೆ ಇದನ್ನು solve ಮಾಡುವವರು ಯಾರು? At least ಜಿಲ್ಲಾ ಉಸ್ತುವಾರಿ ಸಚಿವರು ಅಥವಾ in charge Secretary ಅವರನ್ನು ಕರೆದು ಕುಳಿತುಕೊಂಡು ನಿಮ್ಮ ನ್ಯೂನ್ಯತೆ ಏನು? ಇದನ್ನು ಹೇಗೆ ಬಗೆಹರಿಸಬೇಕು? ಕೇಂದ್ರದಿಂದ ಬಂದಿರುವಂತಹ ಹಣವನ್ನು maximum utilize ಹೇಗೆ ಮಾಡಬೇಕು ಎಂದು ಚಿಂತನೆ ನಡೆಸಿದರೆ ಮಾತ್ರ ಬಂದಂತಹ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ, ಅಭಿವೃದ್ಧಿಯಾಗುತ್ತದೆ ಮತ್ತು ಸ್ಥಳದಲ್ಲಿ ಇರುವಂತಹ ಸಮಸ್ಯೆಯನ್ನು ಕೂಡ ಬಗೆಹರಿಸಿದ ಹಾಗೆ ಆಗುತ್ತದೆ ನೀವು ಅಲ್ಲಿ ಹೋಗಿ ಕೆಲಸ ಏಕೆ ಮಾಡಿಲ್ಲವೆಂದು ಸುಮ್ಮನೆ ಬಯ್ದುಕೊಂಡು ಬಂದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ ನಾವು rules ಕೇಳುತ್ತೇವೆ, ಆದರೆ ಅವರು rules ಪ್ರಕಾರ ಆಗಿಲ್ಲವೆಂದು ಹೇಳುತ್ತಾರೆ ಅಲ್ಲಿ ಯಾರು ಇಷ್ಟು ಹಣಕ್ಕೆ ಬರುತ್ತಿಲ್ಲವೆಂದು ಕೆಲವು ಕಡೆ ಹೇಳುತ್ತಾರೆ ಶಿವಮೊಗ್ಗ, ಚಿಕ್ಕಮಗಳೂರು ಅಥವಾ ದಾವಣಗೆರೆ ಇಂತಹ ಭಾಗದಲ್ಲಿ ನೂರರಿಂದ ನೂರತ್ತು ರೂಪಾಯಿಯವರೆಗೆ ಕೂಲಿ ಇದೆ ಅದಕ್ಕೆ ಅಲ್ಲಿ ಕೂಲಿಗಾರರು ಏನೂ ಮಾಡುತ್ತಾರೆಂದರೆ ಇಂತಹ ಯಾವುದೇ ಯೋಜನೆಗಳು ಬಂದರೂ ಕೂಡ ಇದಕ್ಕೆ ಬರುವುದಿಲ್ಲ ಹೀಗಿದ್ದಾಗ ನಾವು ಇದಕ್ಕೆ ಏನಾದರೂ ಪರ್ಯಾಯ ಪರಿಹಾರವನ್ನು ಕಂಡುಹಿಡಿಯಬೇಕಲ್ಲ ಅದು ಕೂಡ ಇಲ್ಲ 2006–07ನೆ

ಸಾಲಿನಲ್ಲಿ ಉದ್ಯೋಗ ಖಾತ್ರಿಯಲ್ಲಿ ಡಿಸೆಂಬರ್ 31 ರವರಗೆ ಬಂದಂತಹ ಹಣ 170 ಕೋಟಿ ರೂಪಾಯಿ ಎಂದು ನೀವು ಕೊಟ್ಟಿರುವುದು ಆದರೆ ಡಿಸೆಂಬರ್‌ವರೆಗೆ ಖ ರ್ಚಾಗಿದ್ದು 149 ಕೋಟಿ ರೂಪಾಯಿ ಎಂದರೆ ಇನ್ನು 20 ಕೋಟಿ ರೂಪಾಯಿ ಟಾರ್ಗೆಟ್ ಪ್ರಕಾರ ಖರ್ಚಾಗಬೇಕಾಗಿದ್ದು ಆಗಲಿಲ್ಲ ಅದೇ ರೀತಿಯಾಗಿ ನೀವು 173 fluoride affected villages ಗೆ alternative sourceನಿಂದ ನೀರು ಕೊಡಬೇಕು ಆದರೆ ಇಲ್ಲಿಯವರೆಗೆ ಯಾವ ಜಿಲ್ಲಾಪಂಚಾಯತ್ ಕೂಡ interest ತೆಗೆದು ಕೊಂಡು ಇದರ ಬಗ್ಗೆ ಚಿಂತನೆ ಮಾಡಿಲ್ಲ ಆಥವಾ ಕಾರ್ಯಕ್ರಮ ಹಾಕಿಕೊಂಡಿಲ್ಲ Alternative ಯೋಜನೆಗೆ ಇಟ್ಟಿರುವ 470 ಕೋಟಿ ರೂಪಾಯಿ ಹಣದಲ್ಲಿ ಅದರಲ್ಲಿ ಇನ್ನು 50 percent ಹಣ ಕೂಡ ಖರ್ಚಾಗಿಲ್ಲ ನಮಗೆ ಕೊಟ್ಟಿರುವಂತಹ ಅಂಕಿಸಂಖ್ಯೆಗಳೆಲ್ಲಾ ಕೇಂದ್ರ ಸರ್ಕಾರದ ಇಲಾಖೆಗಳಿಂದ ಒದಗಿಸಿರುವಂತಾದ್ದು ನಾವೇನು ಇದನ್ನು ಹುಟ್ಟಿಸಿ ಹೇಳುತ್ತಿಲ್ಲ ಇದೆಲ್ಲಾ ಕೂಡ ಏನು ತೋರಿಸುತ್ತದೆ ಎಂದರೆ, there is a lacking in the administration ಆಡಳಿತದಲ್ಲಿ ನಾವು ಎಲ್ಲೋ ತಪ್ಪುತ್ತಿದ್ದೇವೆ ಅಥವಾ ನಿಧಾನ ಗತಿಯಿಂದ ನಡೆದಿದೆ ಅಥವಾ ನಾವು interest ತೋರಿಸುತ್ತಿಲ್ಲವೆಂದು ಇದರಿಂದ ತಿಳಿಯುತ್ತದೆ, ಹೊರತಾಗಿ ಮತ್ತೆ ಬೇರೆ ಏನೂ ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ ಮಾತಿಗೆ ಬಂದಾಗ ಸಾರಾಸಗಟಾಗಿ ನಾವು ಇದನ್ನು ಮಾಡಿದ್ದೇವೆ ಅದನ್ನು ಮಾಡಿದ್ದೇವೆ ಎಂದು ಹೇಳಬಹುದು ಆದರೆ ನೀವು, ಯಾವ್ಯಾವ ಬಾಬ್ತಿನಲ್ಲಿ ಹಣ ಬಂದಿದೆ, ಅದರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎನ್ನುವ ಉತ್ತರ ಕೊಡಬೇಕು ಜನ ಅದನ್ನು ಅಪೇಕ್ಷೆ ಮಾಡುತ್ತಾರೆ ಯಾವ ಉದ್ದೇಶಕ್ಕಾಗಿ ಹಣವನ್ನು ಕೊಡುತ್ತೇವೆ ಆ ಉದ್ದೇಶಕ್ಕೆ ಹಣವನ್ನು ಖರ್ಚು ಮಾಡದೇ ಹೋದರೆ, ಖಂಡಿತವಾಗಿ ಇವತ್ತಿನ ದಿವಸ ಪ್ರಯೋಜನವಾಗುವುದಿಲ್ಲ ಇವತ್ತು ಅತಿವೃಷ್ಟಿಯಲ್ಲೂ ಕೂಡ ಎಲ್ಲಾ ಜಿಲ್ಲೆಗಳಿಗೂ ನೀವೇ ಫಂಡ್ ರಿಲೀಸ್ ಮಾಡಿದ್ದು ರಾಜ್ಯದ 27 ಜಿಲ್ಲೆಗಳಿಗೂ ಸೇರಿಸಿದ್ದೀರಿ ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಇಲ್ಲ, ಕೊಡಗು ಇಲ್ಲ, ಆ ಮಾತು ಬೇರೆ ನೀವು 261ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ ಅದರಲ್ಲಿ 151ಕೋಟಿ ರೂಪಾಯಿಗಳು ಖರ್ಚು ಆಗಿದೆ, ಅಂದರೆ ಹೆಚ್ಚು ಕಡಿಮೆ ಶೇ 58ರಷ್ಟು ಹಣ

ಖರ್ಚು ಆಗಿದೆ ಇನ್ನು more than 42% ಹಣ ಖರ್ಚು ಆಗಿಲ್ಲ ಇವೆಲ್ಲಾ ಇವತ್ತು ಕನ್ನಡಿಯಲ್ಲಿ ನಿಮ್ಮ ಕೆಲಸ ಆಗಿರುವ ಬಗ್ಗೆ ತೋರಿಸುವ ಹಾಗಿದೆ ತಾವು ಸುಮ್ಮನೆ ಕೆಲಸ ಮಾಡಿದ್ದೇವೆಂದರೆ, ನೀವು ಎಲ್ಲಿ ಕೆಲಸವನ್ನು ಮಾಡಿದ್ದೀರಿ? ಅಂದರೆ ದುಡ್ಡು ಇಲ್ಲದೇ ಕೆಲಸವನ್ನು ಮಾಡಿದ್ದೀರಾ? ಹಣ ಖರ್ಚು ಅಗದೇ ಕೆಲಸವನ್ನು ಮಾಡಿದ್ದೀರಾ ? ಎಲ್ಲಾ ಮಂತ್ರಿಮಂಡಲದ ಸದಸ್ಯರು, ಶಾಸಕರು, ಗುದ್ದಲಿ, ಸಲಿಕೆಯನ್ನು ಹಿಡಿದುಕೊಂದು ಹೋಗಿ ಕೆಲಸವನ್ನು ಮಾಡಿದ್ದಾರಾ ? ಇವತ್ತು ಈ ಅಂಕಿ–ಸಂಖ್ಯೆಗಳೇ ಹೇಳುತ್ತವೆ ನೀವು ಎಷ್ಟರ ಮಟ್ಟಿಗೆ ನಿಮ್ಮ ಟಾರ್ಗೆಟ್ ಅನ್ನು reach ಮಾಡಿದ್ದೀರೆಂದು ಹೇಳುತ್ತದೆ ಅದುದರಿಂದ ಇದರಲ್ಲಿ ಕೂಡ ನಿಮ್ಮ ಸಫಲತೆ ಏನು ಕಾಣಲಿಲ್ಲ ಇದರ ಜೊತೆಗೆ ಇನ್ನೊಂದು NREG (National Rural Employment Guarantee) ಸ್ಕೀಂ ಬಗ್ಗೆ ನಿಮಗೆ ನಾನು ಹೇಳಿದೆ ಆ 216ಕೋಟಿ ರೂಪಾಯಿಗಳಲ್ಲೂ ಕೂಡ ಟೋಟಲ್ 5 ಜಿಲ್ಲೆಗಳನ್ನು ಸೇರಿಸಿದರೆ, 149ಕೋಟಿ ರೂಪಾಯಿಗಳು ಮಾತ್ರ ಖರ್ಚು ಆಗಿದೆ ಅಂದರೆ ಹೆಚ್ಚು ಕಡಿಮೆ ಇಲ್ಲೂ ಕೂಡ 60, 70ಕೋಟಿ ರೂಪಾಯಿಗಳು ಇವತ್ತಿನ ದಿವಸ ಖರ್ಚು ಆಗಬೇಕಾಗಿತ್ತು, ಅದೂ ಆಗಿಲ್ಲ ಈ ರೀತಿಯಾಗಿ ಇವತ್ತು ಈ ಸರ್ಕಾರ ಕೆಲಸವನ್ನು ಮಾಡದೇ, ಹಿಂದೆ ಬಿದ್ದಿದೆಯೆಂದು ಹೇಳುವುದಕ್ಕೆ ಇದೊಂದು ಉದಾಹರಣೆ ಹೇಳುವುದಕ್ಕೆ ನಾನು ಇಚ್ಛಿಸುತ್ತೇನೆ ಇನ್ನು ಆನೇಕ ಕಡೆಗಳಲ್ಲಿ ಡೆಪ್ಯೂಟಿ ಕಮೀಷನರ್‌ಗಳು ಕೂಡ, ಸರಿಯಾಗಿ ಕೆಲಸ ಮಾಡುತ್ತಿಲ್ಲ ಇವರಿಗೆ free hand ಇಲ್ಲವೊ, ಅಥವಾ ಇವರು ಮೈಗಳ್ಳತನ ಮಾಡುತ್ತಿದ್ದಾರೋ, ಅಥವಾ ಅವರಿಗೆ ಸರ್ಕಾರ ಇವತ್ತು ಒಂದು ಸೂಚನೆಯನ್ನು ಕೊಟ್ಟಮೇಲೆ ಅದನ್ನು ನಾವು ಜಾರಿಗೆ ತರಬೇಕೆಂಬ ಇಚ್ಛಾಶಕ್ತಿ ಇದೆಯೋ, ಇಲ್ಲವೋ ಗೊತ್ತಿಲ್ಲ ಆನೇಕ ಕಡೆಗಳಲ್ಲಿ ಇವರು ಆಸಕ್ತಿಯನ್ನು ವಹಿಸಿ, ಕಮಿಟ್‌ಮೆಂಟ್ ಅನ್ನು ಇಟ್ಟುಕೊಂಡು ಕೆಲಸವನ್ನು ಮಾಡುತ್ತಿಲ್ಲ ನೀವು ಅದನ್ನು ಕೇಳುತ್ತಾ ಇಲ್ಲ ಇದರಿಂದ ಜನರಿಗೆ ಸಾಕಷ್ಟು ತೊಂದರೆಯಾಗಿದೆ ಅದರಲ್ಲೂ ವಿಶೇಷವಾಗಿ ಕುಡಿಯುವ ನೀರು, ಮೇವು ಮತ್ತು ಕೆಲಸ ಮುಖ್ಯವಾಗಿದೆ ನೀವು ಅವರನ್ನು ಕರೆದು ಕೇಳಬೇಕು ನೀವು ಇದನ್ನು ಏಕೆ ಮಾಡಿಲ್ಲವೆಂದು ಕೇಳಬೇಕು ಅವರು ಹಣವನ್ನು ಕೇಳುವಾಗ 1,200ಕೋಟಿ ರೂಪಾಯಿಗಳಿಗೂ ಹೆಚ್ಚು ಎಲ್ಲಾ ಜಿಲ್ಲಾಧಿಕಾರಿಗಳು ಸೇರಿ ಕೇಳಿದ್ದಾರೆ ನೀವು ಬಿಡುಗಡೆ ಮಾಡುತ್ತೇವೆಂದು ಹೇಳಿದ ಹಣದಲ್ಲಿ

1/3 ಭಾಗದಷ್ಟು ಹೆಚ್ಚು ಕಡಿಮೆ ಹಣ ಬಿಡುಗಡೆಯಾಗಿದೆ ಅವರು ಏನು ಹಣವನ್ನು ಕೇಳಿದ್ದಾರೋ, ಆದರ 1/3 ಹಣವನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದರೂ ಕೂಡ, ಅದರಲ್ಲಿ ಅವರು ಖರ್ಚು ಮಾಡಿದ್ದು ಶೇ 50ರಷ್ಟು ಇಲ್ಲ ಅದನ್ನು ನೀವು ಕೇಳಬೇಕು ಇಲ್ಲಿ ನಿಮ್ಮ ಡಿಮಾಂಡ್ 1,200ಕೋಟಿ ರೂಪಾಯಿಗಳು ಇರುವುದು ಅದರಲ್ಲಿ ನಾವು 1/3ಭಾಗ ಹಣವನ್ನು ರಿಲೀಜ್ ಮಾಡಿದ್ದೇವೆ ಅದರಲ್ಲೂ ಅವರು ಶೇ 50ರಷ್ಟು ಹಣವನ್ನು ಖರ್ಚು ಮಾಡಿದ್ದೀರೆಂದರೆ, ನೀವು ಏನು ಕೆಲಸವನ್ನು ಮಾಡುತ್ತೀರೆಂದು ಯಾರಿಗಾದರೂ ಒಂದು ಷೋಕಾಸ್ ನೋಟಿಸ್ ಅನ್ನು ಕೊಟ್ಟಿದ್ದೀರಾ? ಅಥವಾ ಯಾರನ್ನಾದರೂ ಸಸ್ಪೆಂಡ್ ಮಾಡಿದ್ದೀರಾ? ಅಥವಾ ಯಾರ ಮೇಲಾದರೂ ಕ್ರಮ ಜರುಗಿಸಿ, ಛೀಮಾರಿ ಹಾಕಿ, ಇಂಥಾ ಜಿಲ್ಲಾಧಿಕಾರಿ ಇಂತಹ ಕೆಲಸವನ್ನು ಮಾಡಿಲ್ಲ ಅದಕ್ಕೆ ನಾವು ಹೀಗೆ ಮಾಡಿದ್ದೇವೆಂದು ಹೇಳಿದ್ದಿರಾ? ಯಾರಿಗೂ ಕೂಡ ಈ ಕಡೆಗೆ ಲಕ್ಷ್ಯವಿಲ್ಲ, ಈ ರೀತಿಯಾಗಿದೆ ಅದಕ್ಕೆ ನಾನು ನಿಮಗೆ ಹೇಳುವುದೇನೆಂದರೆ, ಈಗಲಾದರೂ ಕನಿಷ್ಟ ನೀರು, ಇದು ಇನ್ನೂ ಮುಂದಿನ ದಿನಗಳಲ್ಲಿ ತೊಂದರೆಯಾಗುತ್ತದೆ ಈ ಫೆಬ್ರವರಿ, ಮಾರ್ಚ್, ಏಪ್ರಿಲ್, ಮೇ, ಈ ನಾಲ್ಕು ತಿಂಗಳುಗಳಲ್ಲಿ ವಿಶೇಷವಾಗಿ, ಕೋಲಾರ, ತುಮಕೂರು, ಚಿತ್ರದುರ್ಗ, ರಾಯಚೂರು, ಬಳ್ಳಾರಿ, ಹೈದರಬಾದ್ ಕರ್ನಾಟಕ, ಈ ಎಲ್ಲಾ ಏರಿಯಾಗಳಲ್ಲಿ ಕುಡಿಯುವ ನೀರಿನ ಅವಶ್ಯಕತೆ ಇದೆ ಅದಕ್ಕೆ ನೀವು ನಮ್ಮ Task Force ಅನ್ನು ಕರೆಸಿ, minimum need ನೀರಿಗೆ ಏನು ಮಾಡಬಹುದು, ಅಥವಾ ಅವರಿಗೆ ಯಾವ ಯಾವ ಕೆಲಸಗಳಿಗೆ ನೀವು ಒಪ್ಪಿಗೆಯನ್ನು ಕೊಡಬಹುದು ಅವರಿಗೆ ಅಂಥಾದ್ದನ್ನು ಕೊಟ್ಟು ಮಾಡಿಸಿ, ಅವರಿಂದ ಕೆಲಸವನ್ನು ತೆಗೆದುಕೊಳ್ಳುವುದನ್ನು ಮಾಡಬೇಕು ಆ ರೀತಿಯಾಗಿ ಆಗದಿದ್ದರೆ, ನಾವು ಭಾಷಣವನ್ನು ಮಾಡುತ್ತೇವೆ ಅದಕ್ಕೆ ನೀವು ಉತ್ತರವನ್ನು ಕೊಡುತ್ತೀರಿ ಅಷ್ಟೇ, ಮತ್ತೆ ನಾವು ಪುನ ಹೋಗುವುದು ನಾವು ಇಲ್ಲಿ ಇದರ ಬಗ್ಗೆ ನಿಮ್ಮ ಉತ್ತರ ಸರಿಯಿಲ್ಲವೆಂದು ಗಲಾಟೆಯನ್ನು ಮಾಡಿದರೆ, ಇವರಿಗೆ ಸದನವನ್ನು ನಡೆಸುವುದಕ್ಕೆ ಆಸಕ್ತಿಯಿಲ್ಲವೆಂದು, ಗೂಬೆಯನ್ನು ನಮ್ಮ ಮೇಲೆ ಕೂರಿಸುವುದು ಆಗುತ್ತದೆ ನಾವು ಕೇಳದೇ ಹೋದರೆ ನೀವು ಮಾಡುವುದಿಲ್ಲ ನಿಮ್ಮ ನಡವಳಿಕೆಗಳನ್ನು, GOಗಳನ್ನು ನೋಡಿದಾಗ, ಸದನ ಯಾವಾಗ ಸೇರುತ್ತದೆಂದರೆ, ಆಗ GOಗಳು ಹೊರಡುತ್ತವೆ, ಅಥವಾ

ಎಲ್ಲಾದರೂ ಯಾರಾದರೂ ಕೂಗಿದರೆ ಆಗ ಮಾತ್ರ ಬರುವುದು Swo–moto ಕೆಲಸವನ್ನು ಮಾಡಬೇಕೆಂಬ ದೃಷ್ಟಿಯಿಂದ ಮಾಡಿರುವ ಒಂದು ನಿದರ್ಶನ ಕೂಡ ಇಲ್ಲ ನಾನು ತಮ್ಮ ಮೂಖಾಂತರ ಹೇಳುವುದೆನೆಂದರೆ, ಇದರಲ್ಲಿ ನಿಷ್ಪಕ್ಷಪಾತವಾಗಿ ಏನು ನಡೆದಿದೆಯೆಂಬುದು ಗೊತ್ತಾಗಬೇಕಾದರೆ, ಇದಕ್ಕೆ ಒಂದು ಸದನ ಸಮಿತಿಯನ್ನು ಮಾಡಿ ಇದರಲ್ಲಿ ನೀವು prestige issue ಮಾಡಿಕೊಳ್ಳಬೇಡಿ ನಿಮಗೇ ಗೊತ್ತಿದೆ, ಮಾನ್ಯ ಎಂ ಪಿ ಪ್ರಕಾಶ್‌ರವರು ಹಿಂದೆ ದಿ ದೇವರಾಜ ಅರಸರ ಕಾಲದ ವಿಚಾರವನ್ನು ನೆನಪು ಮಾಡಿದರು ಆಗ ಭೀಕರ ಬರಗಾಲ ಬಂದಾಗ Republican Party ಸದಸ್ಯರಾಗಿ ಇದ್ದಂತಹ ಆರ್ಮುಗಂರವರಿಗೆ One Man Commission ಮಾಡಿ ಕಳುಹಿಸಿದರು ಅವರು opposition ನಲ್ಲಿದ್ದರು ಅವರಿಗೆ One Man Commission ಅನ್ನು ಮಾಡಿ, ಅವರು ಇಡೀ ಬರಗಾಲ ಪೀಡಿತ ಪ್ರದೇಶವನ್ನು ಸುತ್ತಾಡಿ, ನೀವು ಸಲಹೆಗಳನ್ನು ಕೊಡಬೇಕೆಂದು ಹೇಳಿದರು ನೀವು ಕೊಡುವ ಸಲಹೆಗಳ ಪ್ರಕಾರವೇ, ನಾನು in toto implement ಮಾಡುತ್ತೇನೆಂದು ದಿ ದೇವರಾಜ ಅರಸುರವರು ಹೇಳಿದ್ದರು ಅದು ಅಲ್ಲದೇ ಮೊಗದಂ ಎಂದು ಚೀಫ್ ಇಂಜಿನಿಯರ್ ಇದ್ದರು ಅವರಿಗೆ ಸಂಪೂರ್ಣವಾಗಿ ಅಧಿಕಾರವನ್ನು ಕೊಟ್ಟರು ಅವರಿಗೆ secretary power, finance power, ಎಲ್ಲವನ್ನು ಕೂಡ ಕ್ಯಾಬಿನೆಟ್‌ನಿಂದ ವಿಶೇಷ ಆಜ್ಞೆಯನ್ನು ಪಾಸು ಮಾಡಿ, ಆರ್ಡರ್ ಅನ್ನು ತೆಗೆದು ಅವರಿಗೆ ಕೊಟ್ಟರು ಆಗ ಮೊಗದಂರವರು ಅರ್ಮುಗಂರವರು ಸಜೆಸ್ಟ್ ಮಾಡಿದಂತಹ ಕೆಲಸಗಳನ್ನು, ಶಾಸಕರು ಸಜೆಸ್ಟ್ ಮಾಡಿದಂತಹ ಕೆಲಸಗಳನ್ನು, ತಕ್ಷಣ ಎಲ್ಲಿ ಆಗಬೇಕೋ ಅಲ್ಲಿಗೆ ಅಪೂವಲ್ ಮಾಡಿದರು ಅದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರು ನಾವು ಆಗ ಎಲ್ಲಾ ಹೊಸದಾಗಿ ಶಾಸಕರಾಗಿ ಇದ್ದೆವು ಅದು ಆದಮೇಲೆ 1985–86ರಲ್ಲಿ ಮಾನ್ಯ ಬೊಮ್ಮಾಯಿಯವರು ರೆವಿನ್ಯೂ ಮಿನಿಸ್ಟರ್ ಆಗಿದ್ದರು ಆಗ ನನ್ನನ್ನು ಆಧ್ಯಕ್ಷನನ್ನಾಗಿ ಮಾಡಿ, ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಭೀಕರ ಬರಗಾಲವಿದೆ ಅಲ್ಲಿ ಹೋಗಿ ನಮಗೆ ರಿಪೋರ್ಟ್ ಕೊಡಿಯೆಂದು ಹೇಳಿದ್ದರು ನಾನು ಆಗ ವಿರೋಧಪಕ್ಷದಲ್ಲಿ Deputy Leader ಆಗಿದ್ದೆ ಆಗ ನಾವು ಬರಗಾಲವಿರುವ ಪ್ರದೇಶಗಳಿಗೆ ಹೋಗಿ ಬಂದು ಒಂದು

ರಿಪೋರ್ಟ್ ಅನ್ನು ಕೊಟ್ಟೆವು ಆದರೆ ಇಲ್ಲಿ ಏನಾಗಿದೆಯೆಂದರೆ ಇರುವಂತಹ ಹಣವನ್ನು ಖರ್ಚು ಮಾಡುತ್ತಿಲ್ಲ, ಅಥವಾ ಬರಗಾಲ ಪೀಡಿತ ಪ್ರದೇಶಗಳಿಗೆ need based ಆಗುವಂಥಾದ್ದು, ಅದು ಆಗುತ್ತಿಲ್ಲ ಇಲ್ಲಿ ಫೆವರ್ ಮಾಡಬೇಕೆಂದರೆ ಎಲ್ಲರಿಗೂ ಸರಿಸಮಾನವಾಗಿ ಕೊಡಬೇಕೆಂದು ಅಲ್ಲ ಇಲ್ಲಿ ಒಂದು constituency ಯಲ್ಲಿ need based ಆಧಾರದ ಮೇಲೆ ಹತ್ತು ಬೊರ್‌ವೆಲ್ ಬೇಕಾದರೂ ಕೊಡಬೇಕು ಇನ್ನೊಂದು constituency ಯಲ್ಲಿ ಪರಿಸ್ಥಿತಿ ಬಹಳ' ಕೆಟ್ಟಿದ್ದರೆ, ಅಲ್ಲಿಗೆ ನೂರು ಬೋರ್‌ವೆಲ್ ಬೇಕಾಗಿದ್ದರೂ ಕೊಡಬೇಕು ಆದರೆ ಇಲ್ಲಿ ಹಾಗೆ ಆಗುವುದಿಲ್ಲ ನಾವು ಇಲ್ಲಿ ಕೊಟ್ಟರೆ ಸರಿಸಮವೆಂದು ಈಗ ಕೊಡುತ್ತಿದ್ದೀರಿ, ಇಲ್ಲವೆಂದರೆ favoritism ನೀವೇ ಮಾಡಿಕೊಂಡು ಹೋಗಿ ಎನ್ನುವಂಥಾದ್ದು ಆಗುತ್ತದೆ ಇಲ್ಲಿ "ಹುಚ್ಚನ ಮದುವೆಯಲ್ಲಿ ಉಂಡವನೆ ಜಾಣ" ಎನ್ನುವಂತೆ ಯಾರ ಕೈಯಲ್ಲಿ ಏನು ಸಿಗುತ್ತದೋ, ಅದನ್ನು ಮಾಡಿಕೊಂಡು ಹೋಗುವುದು ಈ ರೀತಿಯಾದರೆ, ಅಭಿವೃದ್ಧಿ ಕೆಲಸವನ್ನು ಮಾಡಿದ ಹಾಗೆ ಆಗುವುದಿಲ್ಲ ಮಾನ್ಯ ಎಂ ಪಿ ಪ್ರಕಾಶ್‌ರವರೆ, ತಾವು State levelನಲ್ಲಿ Task Force Empower Committee Chairman ಆಗಿದ್ದೀರಿ ತಾವು ಇದರ ಚೇರ್‌ಮನ್ ಆಗಿದ್ದಾಗ ನಿಮಗೆ ಇಡೀ ರಾಜ್ಯದಲ್ಲಿ ಸಂಪೂರ್ಣ ಅಧಿಕಾರವಿದೆ ಅದುದರಿಂದ ಎಲ್ಲೆಲ್ಲಿ ಹೋಗಬೇಕು, ಏನು commitment ಮಾಡಬೇಕು, ಏನು ಹಣವನ್ನು ಬಿಡುಗಡೆ ಮಾಡಬೇಕು, ಅಥವಾ ಯಾವ್ಯಾವ ಇಲಾಖೆಗಳಿಂದ ಏನು ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬ ಅಧಿಕಾರವನ್ನು ನಿಮಗೆ ಕೊಟ್ಟಿದ್ದಾರೆ ದಯವಿಟ್ಟು ಅದನ್ನು ನೀವು ಚಲಾಯಿಸಿ, ಇಲ್ಲಿ ಮಾನ್ಯ ಕುಮಾರಸ್ವಾಮಿಯವರು ಅಡ್ಡ ಬಂದರು, ಮಾನ್ಯ ಯಡಿಯೂರಪ್ಪನವರು ಅಡ್ಡ ಬಂದರು, ಅಥವಾ ಬೇರೆಯವರು ಅಡ್ಡ ಬಂದರೆಂದು ನೀವು ಏನಾದರೂ ಮುಜುಗರಕ್ಕೆ ಒಳಗಾದರೆ, ನೀವು ಈ ರೈತರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ ಇವತ್ತು ಯಾರು ಬರಗಾಲಕ್ಕೆ ಒಳಗಾಗಿದ್ದಾರೋ, ಅವರೆಲ್ಲರಿಗೂ ಅನ್ಯಾಯ ಮಾಡಿದ ಹಾಗೆ ಆಗುತ್ತದೆ ನಿಮ್ಮ ಅಧಿಕಾರವನ್ನು ನೀವು ಚಲಾಯಿಸಿ ಪವರ್ ವಿಷಯದಲ್ಲಿ transformer ಕೆಟ್ಟು ಹೋದಾಗ, ಅದರ ಬಗ್ಗೆ ಏನಾದರೂ ಹೇಳಿದರೆ ರೇವಣ್ಣ ಏನನ್ನುತ್ತಾರೋ, Foodgrains ಇಲ್ಲ ಎಂದ ಕೂಡಲೇ ಅದಕ್ಕೆ ಆರ್ಡರ್ ಕೊಡಿಸಿದರೆ ಕಾರಜೋಳ ಏನನ್ನುತ್ತಾರೋ ಅಥವಾ ಈ ಅಧಿಕಾರವನ್ನು ಚಲಾಯಿಸಿದರೆ, ಹೆಚ್ಚಿನ

ಹಣವನ್ನು ಬಿಡುಗಡೆ ಮಾಡಿ ಎಂದರೆ ಯಡಿಯೂರಪ್ಪ ಏನನ್ನುತ್ತಾರೋ ಎಂದುಕೊಂಡು ನೀವು, ಆ ಒಂದು ಮುಜುಗರಕ್ಕೆ ಒಳಗಾಗಿ ಸುಮ್ಮನಾದರೆ ಖಂಡಿತವಾಗಿ ನೀವು ಆ ಪೋಸ್ಟ್‌ಗೆ ನ್ಯಾಯ ಮಾಡಿದ ಹಾಗಾಗುವುದಿಲ್ಲ, ಜನರಿಗೂ ನ್ಯಾಯ ಕೊಟ್ಟ ಹಾಗೆ ಆಗುವುದಿಲ್ಲ ಅವರಿಗೆ ನೀವು ಸ್ಪಷ್ಟವಾಗಿ ಹೇಳಬೇಕು, ಇಲ್ಲದಿದ್ದರೆ ನೀವೇ ಮಾಡಿ ಎಂದು ಅವರಿಗೆ ಹೇಳಬೇಕು ಮಾಧುಸ್ವಾಮಿಯವರು ಬಹಳ ಚೆನ್ನಾಗಿ ಹೇಳಿದರು Power Transformer Sense ಸುಧಾರಣೆ ಮಾಡಬೇಕೆಂದು ಒಂದು ಕಮಿಟಿ ಮಾಡಿ, ಅದಕ್ಕೆ ಅಧ್ಯಕ್ಷರಾಗಿ ಎಂದರೆ ಯಡಿಯೂರಪ್ಪನವರು ನಾ ಒಲ್ಲೆ ಎಂದು ಹೇಳಿದರು ಏಕೆಂದರೆ, ರೇವಣ್ಣನವರು ಅವರು ಮಾತನ್ನು ಕೇಳುವುದಿಲ್ಲ ಎಂದು ಅವರಿಗೆ ಗೊತ್ತಿದೆ ಇದೆಲ್ಲಿಯ ಕಿರಿಕಿರಿ ಎಂದು ಹೇಳಿ, ಆ ಸಬ್ ಕಮಿಟಿಯೂ ಬೇಡ, ಅದರ ಛೇರ್‌ಮೆನ್‌ಗಿರಿಯೂ ಬೇಡ, ಅವರೇ ಮಾಡಲಿ ಎಂದು ಸುಮ್ಮನಾದರು ಇದನ್ನು ಕೇಳುವವರು ಯಾರಾದರೂ ಬೇಕಲ್ಲವೇ ? At least ಮುಖ್ಯಂತ್ರಿಗಳಾದರೂ, ನಾನಿದ್ದೇನೆ, ನೀವು ಮಾಡಿ, ನಾನು ಸಪೋರ್ಟ್ ಮಾಡುತ್ತೇನೆ ಎಂದು ಹೇಳಬೇಕಲ್ಲವೇ? ಅವರಿಗೂ ಕೇಳುವ ಧೈರ್ಯವಿಲ್ಲ, ನನ್ನನ್ನು ಛೇರ್‌ಮೆನ್ ಮಾಡಿರುವಾಗ ನಾನು ಈ ಕೆಲಸ ಮಾಡುತ್ತೇನೆ ಎಂದು ಹೇಳತಕ್ಕಂಥ ಧೈರ್ಯ ಇವರಿಗೂ ಇಲ್ಲ ಹೀಗಿರುವಾಗ ಏನಾಗುತ್ತದೆ ? ಇದು ಎಲ್ಲಿಗೆ ಹೋಗಿ ಮುಟ್ಟಬೇಕು ? ನಿಮ್ಮ ಪರಿಸ್ಥಿತಿಯೇ ಇದಾದರೆ ನಮ್ಮ ಪರಿಸ್ಥಿತಿ ಏನು ? ನಮ್ಮಲ್ಲಿ ಕೆಲಸ ಮಾಡಿ, ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಿ ಎಂದು ಅರ್ಜಿ ಕೊಟ್ಟು ನಾವು ನಿಮ್ಮನ್ನು ಕೇಳುವವರು ನಿಮ್ಮ ಮಾತೇ ಅಲ್ಲಿ ನಡೆಯುವುದಿಲ್ಲ ಅಂದಾಗ ನಮ್ಮ ಮಾತು ಎಲ್ಲಿ ನಡೆಯುತ್ತದೆ? ಅಂದರೆ ನಾವು ಹೀಗೇ ಸಫರ್ ಆಗಬೇಕು, ನಮ್ಮ ಜನ ಸಫರ್ ಆಗಬೇಕು ಅದಕ್ಕಾಗಿ ಹೇಳುತ್ತಿದ್ದೇನೆ, at least ನಿಜಾಂಶ ತಿಳಿಯಲಿ, ಕೇಂದ್ರದಿಂದ ಎಷ್ಟು ಹಣ ಬಂತು, ನೀವು ಎಷ್ಟು ಖರ್ಚು ಮಾಡಿದಿರಿ, ಬೇಕಾಗಿದ್ದುದು ಎಷ್ಟು, ಯಾವ ಯಾವ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ನಿಧಾನ ಮಾಡಿದರು, ಸಿ ಇ ಓ ಗಳು ನಿಧಾನ ಮಾಡಿದರು, ಇವುಗಳನ್ನೆಲ್ಲ ತಿಳಿದುಕೊಳ್ಳುವುದಕ್ಕಾಗುತ್ತದೆ ಅದಕ್ಕಾಗಿ ತಾವು ಒಂದು ಸದನ ಸಮಿತಿ ಮಾಡಿ ಆಗ ಎಲ್ಲೆಲ್ಲಿ ನ್ಯೂನ್ಯತೆ ಇದೆ ಅದನ್ನು ಸರಿಪಡಿಸುವುದಕ್ಕಾಗುತ್ತದೆ ಆದು ಪವರ್ ಇರಬಹುದು, ಡ್ರಿಂಕಿಂಗ್ ವಾಟರ್

2 00 p m

ಇರಬಹುದು, ರಸ್ತೆ ದುರಸ್ತಿ ಇರಬಹುದು, ಟ್ಯಾಂಕ್ ಇರಬಹುದು, ಸೀಡ್ ಇರಬಹುದು ಅಥವಾ ಯಾವುದೇ ವಿಷಯವಿರಬಹುದು ಮುಂದೆ ಬರತಕ್ಕಂಥ ದೊಡ್ಡ ಸಮಸ್ಯೆ ಎಂದರೆ ಸೀಡ್ಸ್ ಸೀಡ್ಸ್‌ಅನ್ನು ನೀವು ನಿಮ್ಮಲ್ಲಿಂದ ಅಂದರೆ Agro Industry ಯಿಂದ ವ್ಯವಸ್ಥೆ ಮಾಡುತ್ತೀರೋ ಅಥವಾ ಹೊರಗಡೆಯಿಂದ ತರುತ್ತೀರೋ, ಪ್ರೈವೇಟ್ ಏಜೆನ್ಸಿಗಳಿಂದ ತರುತ್ತೀರೋ, ಅದು ಯಾವ ಏಜೆನ್ಸಿ ಎನ್ನುವುದು ನನಗೆ ಗೊತ್ತಿಲ್ಲ ಅದೂ ಒಂದು ದೊಡ್ಡ ಹೊಡೆತ ನಮ್ಮ ರೈತರಿಗೆ ಬೀಳುತ್ತದೆ ಹಾಗಾಗಿ, ಅದರ ವ್ಯವಸ್ಥೆಯನ್ನೂ ನೀವು ಮಾಡಿಕೊಳ್ಳಬೇಕು ಈ ಕಡೆಗೆ ಸೀಡ್ಸ್ ಮೇ ತಿಂಗಳಲ್ಲಿಯೇ ಬೇಕು ನಮ್ಮ ಕಡೆ ಜೂನ್ ಫಸ್ಟ್ ವೀಕ್‌ನಲ್ಲಿ ಬೇಕು ಅದಕ್ಕೆ ಏನು ವ್ಯವಸ್ಥೆ ಮಾಡಿದಿರಿ, ಅದಕ್ಕೆ ಏನು ಹಣ ಇಟ್ಟಿರಿ ಅಥವಾ ಯಾವ ಪ್ರಯತ್ನಗಳು ನಡೆದಿವೆ ಎನ್ನುವುದನ್ನು ಹೇಳಬೇಕು ತಮಗೇ ಗೊತ್ತಿದೆ, ಹಿಂದೆ ಮೇವು ಇಲ್ಲ ಎನ್ನುವ ಸಂದರ್ಭ ಬಂದಿದ್ದಾಗ ನಾವು ಅದನ್ನು ಪಂಜಾಬಿನಿಂದ by train ತರಿಸಿದ್ದೆವು ಅದು ಎಷ್ಟು ಜಾನುವಾರುಗಳಿಗೆ ಆಗುತ್ತದೋ, ಬಿಡುತ್ತದೋ ಅದು ಬೇರೆ ವಿಷಯ ಅಲ್ಲಿಂದ ಅದನ್ನು ತಂದು ಚಿತ್ರದುರ್ಗದಲ್ಲಿ ಒಂದು ಗೋಡೌನಿನಲ್ಲಿ ಇಟ್ಟರೆ, ಅದನ್ನು ಯಾರೂ ಒಯ್ಯಲಿಲ್ಲ ಎಂದು ಹೇಳಿ, 6 ತಿಂಗಳ ನಂತರ, ನಿಮ್ಮ ಸರ್ಕಾರ ಬಂದ ಮೇಲೆ ಅದು ಡಿಸ್ಪೋಸ್ ಆಯಿತು ನಿಮಗೆ ಗೊತ್ತಿದೆ, ಮಾಜಿ ಸಚಿವರಾದ ಮಂಜುನಾಥ್‌ರವರೇ ಪ್ರಸ್ತಾಪ ಮಾಡಿದರು ಅಂದರೆ, ನಾವು ಅಷ್ಟೊಂದು ಕಾಳಜಿ ವಹಿಸಿ ಹೊರಗಡೆಯಿಂದಲೂ ಮೇವು ತರಿಸಿದ್ದೆವು ಈಗ ಮೇವು ಹೊರಗಡೆ ಹೋಗತಕ್ಕಂಥಾದ್ದನ್ನು ನೀವು ಬ್ಯಾನ್ ಮಾಡಬೇಕು ಅದನ್ನು ಹೊರಗಡೆ ಹೋಗಗೊಡಬಾರದು ಹೊರಗಡೆಯಿಂದ ಒಳಕ್ಕೆ ಬರುತ್ತಿದ್ದರೆ ನೀವು ಅಲೋ ಮಾಡಬಹುದು ಆದರೆ ನಮ್ಮದು ಹೊರಗಡೆ ಹೋಗತಕ್ಕಂಥಾದ್ದನ್ನು strict ಆಗಿ ತಡೆಯಬೇಕು ಈ ಬಗ್ಗೆ G O issue ಆಗಿದೆ ಆದರೆ ಅದನ್ನು strict ಆಗಿ implement ಮಾಡತಕ್ಕಂಥಾದ್ದನ್ನು ಮಾಡಬೇಕು, ಇದು ಒಂದು ಆಗಲೇ ಮಾಧುಸ್ವಾಮಿಯವರು ಹೇಳಿದ ಹಾಗೆ ಕೆಲವು ಏರಿಯಾಗಳಲ್ಲಿ ಹುಲ್ಲು ಬೆಳೆಯಲೂ ನೀವು ಅವಕಾಶ ಮಾಡಿಕೊಡಬೇಕು ಅದಕ್ಕೆ ಬೀಜವನ್ನಾದರೂ ತಂದುಕೊಡಿ, ನದಿ ದಂಡೆಯಲ್ಲಿ ಕೆಲವು ಎಕರೆಗಳನ್ನು ಹುಲ್ಲು ಬೆಳೆಯಲೆಂದೇ ಫೈನಲೈಸ್ ಮಾಡಿ

ಈಗ ಬಹಳಷ್ಟು ಬ್ಯಾರೇಜಸ್ ಆಗಿವೆ, ದೊಡ್ಡದೊಡ್ಡ ಡ್ಯಾಂಗಳಿವೆ ಅಂಧ ಕಡೆಗಳಲ್ಲಿ ನೂರಾರು ಎಕರೆಗಳಲ್ಲಿ ಹುಲ್ಲು ಬೆಳೆಯತಕ್ಕಂಧಾದ್ದನ್ನು ಮಾಡಬೇಕು ಈ ರೀತಿ ಎಲ್ಲವನ್ನೂ ಮಾಡಬೇಕಾಗುತ್ತದೆ ಅದಕ್ಕಾಗಿ, ತಾವು ದಯವಿಟ್ಟು ಒಂದು ಸದನ ಸಮಿತಿ ಮಾಡಿ, ಅದರಿಂದ ಪ್ರಯೋಜನವಾಗುತ್ತದೆ, ಅವರು ಎಲ್ಲ ಕಡೆ ಹೋಗಿ ಮಾಹಿತಿ ತರುತ್ತಾರೆ ಮತ್ತು ಜನರ ಸಮಸ್ಯೆಗೆ ಸ್ಪಂದಿಸುವುದಕ್ಕೆ ಇದೊಂದು ಅವಕಾಶವಾಗುತ್ತದೆ ಸಾಕಷ್ಟು ಹಣ ಇದ್ದರೂ ಕೂಡ ಇವತ್ತು ಕೆಲಸ ಆಗಿಲ್ಲ ಏನೋ ನಿಮಗೆ ದಯೆ ಇದೆ, ಏಕೆಂದರೆ ಬಹಳಷ್ಟು ಕಡೆಗಳಲ್ಲಿ ಜನರು ಇದರ ಬಗ್ಗೆ ರೊಚ್ಚಿಗೆದ್ದಿಲ್ಲ ಆದರೆ ನಿಮ್ಮ publicity ಯನ್ನು ನೋಡಿಕೊಂಡು ಕನ್ನಡಿಯಲ್ಲಿ ಏನೋ ಗಂಟನ್ನು ತೋರಿಸಿದ್ದಾರೆ ಎಂದು ತಮ್ಮ ನೋವನ್ನು ನುಂಗಿಕೊಂಡಿದ್ದಾರೆ ತೊಂದರೆಗಳು, ಕಷ್ಟಗಳು, ನೋವುಗಳನ್ನು ಜನ ಸಹಿಸುತ್ತಿದ್ದಾರೆ ಆದರೆ ಅದಕ್ಕೂ ಒಂದು ಲಿಮಿಟ್ ಇದೆ ಆ ಲಿಮಿಟ್ ದಾಟಿ ಅವರ ಸಹನೆಯನ್ನೇನಾದರೂ ಪರೀಕ್ಷೆ ಮಾಡಿದರೆ ಖಂಡಿತವಾಗಿ ಜನರು ಎಂದೂ ಕೂಡ ಸಹಿಸುವುದಿಲ್ಲ ಮತ್ತು ಅದರ ಫಲವನ್ನು ತಾವು ಅನುಭವಿಸಬೇಕಾಗುತ್ತದೆ ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ ಕೊನೆಯದಾಗಿ, ನಾನು ಅವರಿಗೆ ಇಷ್ಟೇ ಕೇಳುತ್ತೇನೆ, ಮೊದಲನೆಯದಾಗಿ ಸದನ ಸಮಿತಿ ಮಾಡಬೇಕು, ಎರಡನೆಯದಾಗಿ, Empower Committee ಯವರು ಎಲ್ಲ ಕಡೆಗೂ ಹಣವನ್ನು ಬಿಡುಗಡೆ ಮಾಡಬೇಕು ಹಣವಿಲ್ಲದಿದ್ದರೆ, ಬೇರೆ ಕೆಲಸಗಳನ್ನು ನಿಲ್ಲಿಸಿದರೂ ಅಡ್ಡಿಯಿಲ್ಲ, ಇದಕ್ಕೆ ಆದ್ಯತೆ ಕೊಟ್ಟು ಮಾಡಬೇಕು ಎನ್ನುವ ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ

9 ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ವಿಷಯ ಕಾವೇರಿ ವಿವಾದದ ಬಗ್ಗೆ ಫೆಬ್ರವರಿ 5 ರಂದು ಹೊರಬೀಳಲಿರುವ ತೀರ್ಪಿನ ಬಗ್ಗೆ

48 (104) ಶ್ರೀ ಪಾಟೀಲ್ ಡಿ ಆರ್ (ಗದಗ್) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕಲಿಯುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಮೌಲ್ಯ ಶಿಕ್ಷಣ ಒದಗಿಸಲು ಈಗಿರುವುದಕ್ಕಿಂತ ಉತ್ತಮ ವ್ಯವಸ್ಥೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಆ) ಈಗಿನ ಆರ್ಥಿಕ ಬೆಳವಣಿಗೆಯ ಕಾಲದಲ್ಲಿ ಜನಜೀವನ ಸರಿದಾರಿಯ ಮೇಲೆ ಇರಲು ಮೌಲ್ಯ ಶಿಕ್ಷಣ ಅವಶ್ಯಕತೆ ಬಹಳ ಅಗತ್ಯವಾಗಿರುವುದು ಸರ್ಕಾರಕ್ಕೆ ಮನದಟ್ಟಾಗಿದೆಯೇ,

ಇ) ಇದಕ್ಕಾಗಿ ಸರ್ಕಾರ ಯೋಚಿಸಿರುವ ಕ್ರಮಗಳಾವುವು ,

ಈ) ಈ ಸುವರ್ಣ ಕರ್ನಾಟಕದ ಆಚರಣೆಯ ಸಂದರ್ಭದಲ್ಲಿ ಇದನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲಾಗುವುದೇ ,

ಉ) ಇದಕ್ಕಾಗಿ ಬೇಕಾಗುವ ಅನುಕೂಲತೆಗಳೇನು ,

ಊ) ಸರ್ಕಾರ ಯಾವ ಯಾವ ಅನುಕೂಲತೆ ಒದಗಿಸುವುದು ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಉಲ್ಲೇಖಿಸಿರುವ 10 ಕೋರ್ ಎಲಿಮೆಂಟ್ಸ್ ಮತ್ತು 84 ಕೋರ್ ವ್ಯಾಲ್ಯೂಗಳನ್ನು (Human Values) ಆಧಾರವಾಗಿಟ್ಟುಕೊಂಡು ಪ್ರಸ್ತುತ ಪಠ್ಯವಸ್ತು ಮತ್ತು

ಪರ್ಯಪುಸ್ತಕಗಳನ್ನು ರಚಿಸಿದೆ 1 ರಿಂದ 10 ನೇ ತರಗತಿಯವರೆಗಿನ ಎಲ್ಲಾ ಭಾಷಾ ಮಾಧ್ಯಮಗಳ ಪರ್ಯಪುಸ್ತಕಗಳಲ್ಲಿ ಮೌಲ್ಯಗಳನ್ನು ಅಳವಡಿಸಿದೆ

ಆ) ಹೌದು

ಇ) ಪ್ರಸ್ತುತ ಶಾಲಾ ಪರ್ಯಕ್ರಮದಲ್ಲಿ ವಾರಕ್ಕೆ ಒಂದು ಅವಧಿಯನ್ನು ಮೌಲ್ಯ ಶಿಕ್ಷಣಕ್ಕಾಗಿ ಮೀಸಲಿರಿಸಿದ್ದು, ಈ ಅವಧಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ

ಈ) ಹೌದು

ಉ) ಮತ್ತು ಊ) ಮೌಲ್ಯ ಶಿಕ್ಷಣವನ್ನು ಮಕ್ಕಳಿಗೆ ಪರಿಣಾಮಕಾರಿಯಾಗಿ ಬೋಧಿಸಲು ಶಿಕ್ಷಕರನ್ನು ಮೈಸೂರಿನಲ್ಲಿರುವ ರಾಮಕೃಷ್ಣ ಆಶ್ರಮದ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಗೆ, ಯಲ್ಲಾಪುರದಲ್ಲಿರುವ ಯೋಗ ಶಿಕ್ಷಣ ಸಂಸ್ಥೆಗೆ ಮತ್ತು ಜಿಗಣಿಯಲ್ಲಿರುವ ಯೋಗ ಶಿಕ್ಷಣ ಸಂಸ್ಥೆಗಳಿಗೆ ಶಿಕ್ಷಕರನ್ನು ನಿಯೋಜಿಸಿ ತರಬೇತಿ ನೀಡಲಾಗುತ್ತಿದೆ

ಶಿಕ್ಷಕರಿಗೆ ಡಿ ಎಸ್ ಇ ಆರ್ ಟಿ, ಸಿ ಟಿ ಇ ಮತ್ತು ಡಯಟ್ ಗಳ ಮೂಲಕ ನೀಡುವ ತರಬೇತಿಗಳಲ್ಲಿ ಮೌಲ್ಯ ಶಿಕ್ಷಣಕ್ಕೆ ಒತ್ತು ನೀಡಲಾಗುತ್ತಿದೆ

50 (101) ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಅಕ್ಷರ ದಾಸೋಹ ಯೋಜನೆಯಲ್ಲಿ ಎಷ್ಟು ಜನ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ (ಜಿಲ್ಲಾವಾರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ವಿವರ ಒದಗಿಸುವುದು) ,

ಆ) ಈ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಹೇಗೆ, ಇವರುಗಳಿಗೆ ನೀಡುತ್ತಿರುವ ವೇತನ ಭತ್ಯೆ ಎಷ್ಟು (ವಿವರ ನೀಡುವುದು) ,

ಇ) ಈ ಸಿಬ್ಬಂದಿಗೆ ವೇತನ ಹೆಚ್ಚಳ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ,

ಈ) ಇದರಿಂದ ಸಿಬ್ಬಂದಿಗೆ ಕರ್ತವ್ಯ ನಿರ್ವಹಿಸಲು ತೊಂದರೆಯಾಗುತ್ತಿರುವುದು ನಿಜವೇ ,

ಉ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಲಗತ್ತಿಸಿದೆ

ಆ) ಅಡುಗಡೆಯವರ ನೇಮಕಾತಿ ಶಾಲಾ ಮಟ್ಟದಲ್ಲಿ ನಾಲ್ಕು ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ

1 ಗ್ರಾಮ ಪಂಚಾಯತ್‌ಗಳಲ್ಲಿ, ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಮುನಿಸಿಪಾಲಿಟಿ / ನಗರ, ಪಾಲಿಕೆಗಳಲ್ಲಿ ಸಂಬಂಧಿಸಿದ ವಾರ್ಡ್ ಸದಸ್ಯರು ಈ ಸಮಿತಿಯ **ಅಧ್ಯಕ್ಷರಾಗಿರುತ್ತಾರೆ**

2 ಎಸ್ ಡಿ ಎಂ ಸಿ ಅಧ್ಯಕ್ಷರು – **ಸದಸ್ಯರು**

3 ಶಾಲಾ ಮುಖ್ಯೋಪಾಧ್ಯಾಯರು – **ಸದಸ್ಯರು**

4 ನಗರ ಸಭೆಗಳಲ್ಲಿ ವಾರ್ಡ್ ಮುಖ್ಯಾಧಿಕಾರಿ / ಮುನಿಸಿಪಾಲಿಟಿ ಮುಖ್ಯಸ್ಥರು / ಗ್ರಾಮ ಪಂಚಾಯತ್ ಕಾರ್ಯದರ್ಶಿ – **ಸಮಿತಿಯ ಕಾರ್ಯದರ್ಶಿ**

ಅಡುಗೆಯವರ ನೇಮಕಾತಿಗೆ ಸಂಬಂಧಿಸಿದಂತೆ ಪೂರ್ವಭಾವಿ ಸಭೆಯನ್ನು ನಡೆಸಿ, ಗ್ರಾಮದಲ್ಲಿ ವ್ಯಾಪಕ ಪ್ರಚಾರ ನೀಡಿ ಅರ್ಜಿಯನ್ನು ಆಹ್ವಾನಿಸಿ, ಸಂದರ್ಶನದ ಮೂಲಕ ಮಹಿಳೆಯರನ್ನೇ ನೇಮಕ ಮಾಡಲಾಗುವುದು ವಿಧವೆಯರು ಮತ್ತು ಸಂಕಷ್ಟದಲ್ಲಿರುವ ಹೆಣ್ಣು ಮಕ್ಕಳಿಗೆ ಆದ್ಯತೆ ನೀಡಲಾಗುತ್ತಿದೆ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದವರಿಗೆ ಪ್ರಾತಿನಿಧ್ಯ ನೀಡಿ ನೇಮಕ ಮಾಡಲಾಗುವುದು

ಎ1–ಕೇಂದ್ರಕ್ಕೆ ಒಬ್ಬರು, ಎ–ಕೇಂದ್ರಕ್ಕೆ ಇಬ್ಬರು, ಬಿ–ಕೇಂದ್ರಕ್ಕೆ ಮೂವರು, ಸಿ–ಕೇಂದ್ರಕ್ಕೆ ನಾಲ್ಕು ಮಂದಿ ಅಡುಗೆಯವರ ನೇಮಕಾತಿ ಮಾಡಲಾಗುತ್ತಿದೆ

ಸಂಭಾವನೆ (ಮಾಸಿಕ)

ಮುಖ್ಯ ಅಡುಗೆಯವರಿಗೆ–ರೂ 650, ಅಡುಗೆಯವರಿಗೆ–ರೂ 450, ಸಹಾಯಕ ಅಡುಗೆಯವರಿಗೆ–ರೂ 400, ಅಡುಗೆ ಸಹಾಯಕರಿಗೆ–ರೂ 300

ಇ) ಹೌದು

ಈ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಉ) ಉದ್ಭವಿಸುವುದಿಲ್ಲ

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ (ಅಕ್ಷರ ದಾಸೋಹ), ಮಂಗಳೂರು ಅಡುಗೆ ಕೇಂದ್ರಗಳು ಹಾಗೂ ಅಡುಗೆ ಸಿಬ್ಬಂದಿಗಳ ನೇಮಕಾತಿ ವಿವರ ಎ1, ಎ, ಬಿ, ಸಿ, ಮಾದರಿ

ಕ್ರ ಸಂ	ತಾಲ್ಲೂಕು	ಅಡುಗೆ ಕೇಂದ್ರಗಳು				ಒಟ್ಟು ಅಡುಗೆ ಕೇಂದ್ರಗಳು
		ಎ1	ಎ	ಬಿ	ಸಿ	
1	ಬಂಟ್ವಾಳ	4	52	111	26	193
2	ಬೆಳ್ತಂಗಡಿ	9	56	96	17	178
3	ಮಂಗಳೂರು ನಗರ	0	0	2	0	2
4	ಮಂಗಳೂರು (ತಾ)	8	27	77	20	132
5	ಮೂಡಬಿದ್ರೆ	8	24	33	1	66
6	ಪುತ್ತೂರು	9	40	116	19	184
7	ಸೂಳ್ಯ	21	47	68	4	140
	ಒಟ್ಟು	59	246	503	87	895

ಕ್ರ ಸಂ	ತಾಲ್ಲೂಕು	ಅಡುಗೆ ಕೇಂದ್ರಗಳು				ಒಟ್ಟು ಅಡುಗೆ ಕೇಂದ್ರಗಳು
		ಎ1	ಎ	ಬಿ	ಸಿ	
1	ಬಂಟ್ವಾಳ	4	101	325	104	534
2	ಬೆಳ್ತಂಗಡಿ	9	112	288	68	477
3	ಮಂಗಳೂರು ನಗರ	0	0	6	0	6
4	ಮಂಗಳೂರು (ತಾ)	8	54	231	80	373
5	ಮೂಡಬಿದ್ರೆ	8	48	99	4	159
6	ಪುತ್ತೂರು	9	80	348	76	513
7	ಸೂಳ್ಯ	21	93	202	16	332
	ಒಟ್ಟು	59	488	1499	348	2394

ಮಂಗಳೂರು ನಗರಕ್ಕೆ ಇಸ್ಕಾನ್ ಸಂಸ್ಥೆಯವರು 29 ಶಾಲೆಗಳಿಗೆ ಊಟ ನೀಡುತ್ತಿದ್ದಾರೆ

ಅಡುಗೆ ಕೇಂದ್ರ ಮಾಹಿತಿ							
ಕ್ರ. ಸಂ	ಜಿಲ್ಲೆಯ ಹೆಸರು	ಒಟ್ಟು ಅಡುಗೆ ಕೇಂದ್ರ ಗಳು	ಅಡುಗೆ ಕೇಂದ್ರಗಳು				ಒಟ್ಟು
			25 ಕ್ಕಿಂತ ಕಡಿಮೆ ಮಕ್ಕಳು	25 ರಿಂದ 70 ಮಕ್ಕಳು	70 ರಿಂದ 300 ಮಕ್ಕಳು	300 ಕ್ಕಿಂತ ಹೆಚ್ಚು ಮಕ್ಕಳು	
			ಎ 1	ಎ	ಬಿ	ಸಿ	
1	ಬೆಂಗಳೂರು ನಗರ	432	85	222	102	23	432
2	ಚಿತ್ರದುರ್ಗ	1226	110	385	705	26	1226
3	ದಾವಣಗೆರೆ	1279	115	359	644	161	1279
4	ಶಿವಮೊಗ್ಗ	1869	372	711	732	54	1869
5	ಬೆಂಗಳೂರು ಗ್ರಾ	2426	654	946	752	74	2426
6	ಕೋಲಾರ	3285	556	1629	992	108	3285
7	ತುಮಕೂರು	3364	743	1347	1165	109	3364
8	ಮೈಸೂರು	1808	138	657	875	138	1808
9	ಮಂಡ್ಯ	1821	331	653	775	62	1821
10	ಚಾ ನಗರ	685	71	233	316	65	685
11	ಕೊಡಗು	407	56	138	183	30	407
12	ಹಾಸನ	2485	638	1030	795	22	2485
13	ಚಿಕ್ಕಮಗಳೂರು	1420	373	525	479	43	1420
14	ದ ಕನ್ನಡ	895	69	246	503	87	895
15	ಉಡುಪಿ	613	2	188	248	176	613
16	ಧಾರವಾಡ	0	0	0	0	0	0
17	ಉತ್ತರ ಕನ್ನಡ	2078	88	418	1027	545	2078

18	ಹಾವೇರಿ	934	22	173	598	141	934
19	ಗದಗ್	514	2	68	248	196	514
20	ಬೆಳಗಾಂ	2138	88	467	1038	545	2138
21	ಬಾಗಲಕೋಟೆ	952	19	171	672	90	952
22	ಬಿಜಾಪುರ	1204	0	248	806	150	1204
23	ಬೀದರ್	899	22	195	527	155	899
24	ಬಳ್ಳಾರಿ	1179	24	255	720	180	1179
25	ಗುಲ್ಬರ್ಗಾ	1958	0	329	1279	350	1958
26	ಕೊಪ್ಪಳ	797	0	141	455	201	797
27	ರಾಯಚೂರು	1134	12	219	770	133	1134
	ಒಟ್ಟು	37802	4580	11953	17406	3864	37802

ಅಡುಗೆ ಕೇಂದ್ರ ಮಾಹಿತಿ							
ಕ್ರ. ಸಂ	ಜಿಲ್ಲೆಯ ಹೆಸರು	ಒಟ್ಟು ಅಡುಗೆ ಕೇಂದ್ರ ಗಳು	ಅಡುಗೆ ಸಿಬ್ಬಂದಿ ಸಂಖ್ಯೆ				ಒಟ್ಟು
			25 ಕ್ಕಿಂತ ಕಡಿಮೆ ಮಕ್ಕಳು	25 ರಿಂದ 70 ಮಕ್ಕಳು	70 ರಿಂದ 300 ಮಕ್ಕಳು	300 ಕ್ಕಿಂತ ಹೆಚ್ಚು ಮಕ್ಕಳು	
			ಎ 1	ಎ	ಬಿ	ಸಿ	
1	ಬೆಂಗಳೂರು ನಗರ	432	85	444	306	92	927
2	ಚಿತ್ರದುರ್ಗ	1226	110	770	1979	104	2963
3	ದಾವಣಗೆರೆ	1279	115	718	1936	608	3377
4	ಶಿವಮೊಗ್ಗ	1869	372	1422	2160	216	4170
5	ಬೆಂಗಳೂರು ಗ್ರಾ	2426	654	1892	2020	296	4862
6	ಕೋಲಾರ	3285	556	3258	2830	407	7051

7	ತುಮಕೂರು	3364	743	2694	3239	414	7090
8	ಮೈಸೂರು	1808	138	1314	2389	524	4365
9	ಮಂಡ್ಯ	1821	331	1306	2289	248	4174
10	ಚಾ ನಗರ	685	71	466	812	260	1809
11	ಕೊಡಗು	407	56	276	504	120	956
12	ಹಾಸನ	2485	638	2060	2349	88	5135
13	ಚಿಕ್ಕಮಗಳೂರು	1420	373	1050	1301	172	2896
14	ದ ಕನ್ನಡ	895	59	488	1499	348	2394
15	ಉಡುಪಿ	613	2	376	744	704	1828
16	ಧಾರವಾಡ	0	0	0	0	0	0
17	ಉತ್ತರ ಕನ್ನಡ	2078	88	836	2935	2117	5976
18	ಹಾವೇರಿ	934	22	346	1758	518	2644
19	ಗದಗ್	514	2	136	744	721	1603
20	ಬೆಳಗಾಂ	2138	88	934	3014	2044	6080
21	ಬಾಗಲಕೋಟೆ	952	19	342	1963	360	2684
22	ಬಿಜಾಪುರ	1204	0	496	2279	564	3339
23	ಬೀದರ್	899	22	390	1535	556	2503
24	ಬಳ್ಳಾರಿ	1179	24	510	2160	662	3356
25	ಗುಲ್ಬರ್ಗಾ	1958	0	658	3668	1266	5592
26	ಕೊಪ್ಪಳ	797	0	282	1365	769	2416
27	ರಾಯಚೂರು	1134	12	438	2310	506	3266
	ಒಟ್ಟು	37802	4580	23906	50088	14684	93258

52 (114) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಜಮಖಂಡಿ ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಿಂದ ವಂಚಿತರಾದ ಮಕ್ಕಳ ಸಂಖ್ಯೆ ಎಷ್ಟು (ಪ್ರತ್ಯೇಕ ವಿವರ ಒದಗಿಸುವುದು) ,

ಆ) ರಾಜ್ಯದಲ್ಲಿ ಪ್ರತಿ ಮಗುವಿಗೆ ಕಡ್ಡಾಯ ಶಿಕ್ಷಣ ಕೊಡುವ ಕಾನೂನು ಜಾರಿಯಲ್ಲಿ ಇದೆಯೇ, ಇದ್ದಲ್ಲಿ ಯಾವ ಯಾವ ಕ್ರಮಗಳನ್ನು ಕೈಕೊಳ್ಳಲಾಗಿದೆ ,

ಇ) ರಾಜ್ಯದಲ್ಲಿ ಶೇ 100 ರಷ್ಟು ಮಕ್ಕಳು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಕಡ್ಡಾಯವಾಗಿ ಕಲಿಯಲು ಯಾವ ಕ್ರಮಗಳನ್ನು ಇಲ್ಲಿಯವರೆಗೆ ಕೈಗೊಳ್ಳಲಾಗಿದೆ ,

ಈ) ಇಲ್ಲದಿದ್ದಲ್ಲಿ, ಎಂದಿನಿಂದ ಕ್ರಮ ಕೈಗೊಳ್ಳಲಾಗುವುದು ,

ಉ) ಅಲೆಮಾರಿ ಜನಾಂಗದ ಮಕ್ಕಳಿಗೆ ಶಿಕ್ಷಣ ಕೊಡಲು ರಾಜ್ಯದಲ್ಲಿ ಯಾವ ವ್ಯವಸ್ಥೆ ಮಾಡಲಾಗಿದೆ ಮತ್ತು ಎಷ್ಟು ಮಕ್ಕಳು ಶಿಕ್ಷಣದಿಂದ ಹೊರಗುಳಿದಿದ್ದಾರೆ ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಜಮಖಂಡಿ ತಾಲ್ಲೂಕಿನಲ್ಲಿ ಶಿಕ್ಷಣದಿಂದ ವಂಚಿತರಾದ ಒಟ್ಟು ಮಕ್ಕಳ ಸಂಖ್ಯೆ 785 (6 ರಿಂದ 17 ವಯೋಮಾನದ ಮಕ್ಕಳು)

ಆ), ಇ) ಮತ್ತು ಈ) ಹೌದು

ಮಕ್ಕಳಿಗೆ 14 ವಯಸ್ಸಿನವರೆಗೆ ಕಡ್ಡಾಯ ಶಿಕ್ಷಣ ಕೊಡುವ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು / ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿರುತ್ತದೆ

1 ಚಿಣ್ಣರ ಅಂಗಳ ಕಾರ್ಯಕ್ರಮ
2 ವಿಶೇಷ ದಾಖಲಾತಿ ಆಂದೋಲನ
3 ಗೃಹಾಧಾರಿತ ಶಿಕ್ಷಣ
4 ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ
5 4 ತಿಂಗಳ ವಸತಿಯುತ ಸೇತುಬಂಧ ಶಾಲೆ
6 6 ತಿಂಗಳ ವಸತಿಯುತ ಸೇತುಬಂಧ ಶಾಲೆ

7 12 ತಿಂಗಳ ವಸತಿಯುತ ಸೇತುಬಂಧ ಶಾಲೆ

8 ಪೂರಕ ಶಾಲೆ

9 ಟೆಂಟ್ ಶಾಲೆ

10 ಸಂಚಾರಿ ಶಾಲೆ

ಉ) ಅಲೆಮಾರಿ ಜನಾಂಗದ ಮಕ್ಕಳಿಗೆ ಪ್ರತ್ಯೇಕವಾಗಿ ಗಣತಿ ಮಾಡಿರದ ಕಾರಣ ಈ ಮಾಹಿತಿ ಲಭ್ಯವಿರುವುದಿಲ್ಲ ಆದರ ವಲಸೆ ಎಂಬ ಕಾರಣ ಆಧರಿಸಿ ಮಕ್ಕಳ ಸಮೀಕ್ಷೆ ಮಾಡಿದ್ದು, ಸುಮಾರು 7066 ಮಕ್ಕಳು ವಸಲೆ ಕುಟುಂಬಗಳಲ್ಲಿ ಇರುತ್ತಾರೆ ಎಂದು ತಿಳಿದು ಬಂದಿದೆ ಈ ವಲಸೆ ಬಂದಿರುವ ಮಕ್ಕಳಿಗೆ ಟೆಂಟ್ ಶಾಲೆಗಳನ್ನು ತೆರೆಯಲಾಗಿದೆ ಮಕ್ಕಳು ವಸಲೆ ಹೋಗುವುದನ್ನು ತಡೆಗಟ್ಟಲು ಮೂಲ ಹಳ್ಳಿಗಳಲ್ಲಿ 6 ಹಾಗೂ 12 ತಿಂಗಳ ವಸತಿಯುತ ಸೇತುಬಂಧ ಶಾಲೆಗಳನ್ನು ತೆರೆಯಲಾಗಿದೆ

54 (116) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿರುವ ಎಲ್ಲಾ ಶಾಲೆಗಳಿಗೆ ಎಸ್ ಡಿ ಎಮ್ ಸಿ (ಮೇಲುಸ್ತುವಾರಿ) ರಚನೆ ಮಾಡಲು ಇರುವ ನಿಯಮಾವಳಿಗಳೇನು ,

ಆ) ಈ ಹಿಂದೆ ಇದ್ದ ನಿಯಮಾವಳಿಗಳನ್ನು ಬದಲಾವಣೆ ಮಾಡಲು ಕಾರಣಗಳೇನು,

ಇ) ಬದಲಾದ ನಿಯಮಗಳಿಂದ ಹೆಚ್ಚಿನ ಶಾಲೆಗಳಲ್ಲಿ ಗೊಂದಲಗಳು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ಈ ಎಲ್ಲಾ ತೊಂದರೆಗಳಿಂದ ಶಾಲೆಗಳಲ್ಲಿದ್ದ ಶಿಕ್ಷಕರ ಮೇಲೆ ತೀವ್ರ ಒತ್ತಡ ಬಿದ್ದು ಮಾನಸಿಕ ನೆಮ್ಮದಿ ಕಳೆದುಕೊಂಡು, ಗುಣಮಟ್ಟದ ಶಿಕ್ಷಣ ಕೊಡದೇ ಇರುವುದು ಸರ್ಕಾರದ ಗಮನದಲ್ಲಿದೆಯೇ ಹಾಗಿದ್ದರೆ, ಯಾವ ಸುಧಾರಣಾ ಕ್ರಮ ಜರುಗಿಸಲಾಗುವುದು ,

ಉ) ಈ ಹಿಂದೆ ಇದ್ದ ನಿಯಮಗಳನ್ನು ಜಾರಿ ತರಲು ಪರಿಶೀಲಿಸಲಾಗಿದೆಯೇ , ಹಾಗಿದ್ದರೆ, ಯಾವಾಗ ಜಾರಿ ಮಾಡಲಾಗುವುದು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಎಸ್ ಡಿ ಎಂ ಸಿ ರಚನೆ ಮಾಡಲು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 122 ಪಿಬಿಎಸ್ 2004,

ದಿ 14 06 2006 ರಲ್ಲಿ ಕರ್ನಾಟಕ ಗ್ರಾಮಪಂಚಾಯಿತಿಗಳು (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪವಿಧಿಗಳು, 2006ರ ಪ್ರಕಾರ ಬೈಲಾಗಳನ್ನು ರಚಿಸಿದೆ

ಆ) ಪಂಚಾಯತ್ ರಾಜ್ ಕಾಯ್ದೆ ಪ್ರಕಾರ ಪ್ರಾಥಮಿಕ ಶಿಕ್ಷಣವು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವುದರಿಂದ ಮತ್ತು ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿಗಳಿಗೂ ಪಂಚಾಯತ್ ರಾಜ್ ವ್ಯವಸ್ಥೆಗೂ ಜೊತೆಗೂಡಿಸುವ ಸಲುವಾಗಿ ಮತ್ತು ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾತ್ರ ಖಚಿತಪಡಿಸಿಕೊಳ್ಳಲು ಹೆಚ್ಚಿನ ಅನುಕೂಲವಾಗುವಂತೆ ಎಸ್ ಡಿ ಎಂ ಸಿ ಗಳನ್ನು ಗ್ರಾಮಪಂಚಾಯತಿ ವ್ಯಾಪ್ತಿಗೆ ಅಳವಡಿಸಿ ನಿಯಮಾವಳಿಗಳನ್ನು ಬದಲಾವಣೆ ಮಾಡಲಾಗಿದೆ

ಇ) ಗೊಂದಲಗಳು ಉಂಟಾಗಿಲ್ಲ ಆದರೆ ನ್ಯಾಯಾಲಯದಲ್ಲಿ ಹಲವು ಪ್ರಕರಣಗಳು ದಾಖಲಾಗಿದ್ದವು ಉಚ್ಚ ನ್ಯಾಯಾಲಯವು ದಿ 19 12 2006 ರಂದು ಸರ್ಕಾರದ ಕರ್ನಾಟಕ ಗ್ರಾಮಪಂಚಾಯಿತಿಗಳು (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪವಿಧಿಗಳು, 2006ರ ಬೈಲಾ ಅಧಿಸೂಚನೆಯನ್ನು ಎತ್ತಿಹಿಡಿದು ತೀರ್ಪು ನೀಡಿದೆ

ಈ) ಈ ಬದಲಾವಣೆಯಿಂದ ಶಿಕ್ಷಕರ ನೆಮ್ಮದಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಉ) ಹಿಂದೆ ಇದ್ದ ನಿಯಮಗಳನ್ನು ಪುನಃ ಜಾರಿಗೆ ತರುವ ಪ್ರಸ್ತಾಪ ಸರ್ಕಾರದ ಮುಂದೆ ಇರುವುದಿಲ್ಲ ಹೊಸ ನಿಯಮಗಳ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯವು ದಿ 19 12 2006 ರಂದು ಆದೇಶ ನೀಡಿದ್ದು, ಸದರಿ ಆದೇಶದನ್ವಯ ಕ್ರಮವಹಿಸಲು ಸೂಚನೆಗಳನ್ನು ನೀಡಲಾಗುತ್ತಿದೆ

61 (109) ಶ್ರೀ ವಿ ಸುನೀಲ್‌ಕುಮಾರ್ (ಕಾರ್ಕಳ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಇರುವ ಸ್ನಾತಕೋತ್ತರ ಕೇಂದ್ರಗಳು ಯಾವುವು ,

ಆ) ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕು ಕೇಂದ್ರದಲ್ಲಿ ಸ್ನಾತಕೋತ್ತರ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ ,

ಇ) ಆಡಳಿತಾತ್ಮಕ ಮಂಜೂರಾತಿ ಮತ್ತು ಇದಕ್ಕಾಗಿ ಸ್ಥಳವನ್ನು ಸಹ ಗುರುತಿಸಿದ್ದರೂ ಕೇಂದ್ರ ಸ್ಥಾಪನೆಯ ಕಾಮಗಾರಿಗಳನ್ನು ಇನ್ನೂ ಪ್ರಾರಂಭಿಸದಿರಲು ಕಾರಣಗಳೇನು ,

ಈ) ಕೆಲಸ ಪ್ರಾರಂಭಿಸಿ, ಪೂರ್ಣಗೊಳಿಸಲು ಬೇಕಾಗುವ ಸಮಯ ಎಷ್ಟು , ವಿವರ ನೀಡುವುದು ?

ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಪ್ರಸ್ತುತ ಒಂದು ಸ್ನಾತಕೋತ್ತರ ಕೇಂದ್ರವಿದ್ದು, ಅದು ವಿಶ್ವವಿದ್ಯಾನಿಲಯ ಘಟಕ ಕಾಲೇಜಾದ ಎಫ್ ಎಂ ಕೆ ಎಂ ಸಿ ಕಾಲೇಜು, ಮಡಿಕೇರಿ ಇದರ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದೆ

ಆ) ಇ) ಮತ್ತು ಈ) ಮಂಗಳೂರು ವಿಶ್ವವಿದ್ಯಾನಿಲಯವು ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕಿನಲ್ಲಿ ಒಂದು ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಿತು ಆದರೆ, ಈ ಕೇಂದ್ರದ ಸ್ಥಾಪನೆಗೆ ತಗಲುವ ಖರ್ಚು– ವೆಚ್ಚಗಳನ್ನು ಯಾವ ಮೂಲದಿಂದ ಭರಿಸಬೇಕು ಎಂಬ ಬಗ್ಗೆ ನಿರ್ದಿಷ್ಟ ನಿಲುವನ್ನು ಮಂಗಳೂರು ವಿಶ್ವವಿದ್ಯಾಲಯವು ತೆಗೆದುಕೊಳ್ಳದಿರುವ ಕಾರಣ ಈ ಬಗ್ಗೆ ಯಾವುದೇ ಅಂತಿಮ ನಿರ್ಧಾರ ತೆಗೆದುಕೊಂಡಿರುವುದಿಲ್ಲ ಆದಾಗ್ಯೂ ಈ ಕೇಂದ್ರದ ಸ್ಥಾಪನೆಗೆ ತಗಲುವ ಖರ್ಚು–ವೆಚ್ಚಗಳನ್ನು ಯಾವ ಮೂಲದಿಂದ ಭರಿಸಬೇಕು ಎಂಬ ಬಗ್ಗೆ ವರದಿಯನ್ನು ವಿಶ್ವವಿದ್ಯಾಲಯದಿಂದ ನಿರೀಕ್ಷಿಸಲಾಗಿದ್ದು, ವರದಿ ಸ್ವೀಕರಿಸಿದ ನಂತರ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು

104 (437) ಶ್ರೀ ಚನ್ನಬಸರಾಜ್ (ಅಪ್ಪಾಜಿ)

ಶ್ರೀ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಪಡಿತರ ಚೀಟಿ ವಿತರಣೆಯಲ್ಲಿ ಹಲವಾರು ನ್ಯೂನತೆಗಳು ಕಂಡು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಪಡಿತರ ಚೀಟಿಯನ್ನು ಸಮರ್ಪಕವಾಗಿ ಹಾಗೂ ಅರ್ಹರಿಗೆ ಹಂಚಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಹೌದು

ಆ) 1) ವರಮಾನ ನಿಗದಿಪಡಿಸಿಲು ಅನುಕೂಲವಾಗುವಂತೆ ಮಾನದಂಡಗಳನ್ನು ನಿಗಧಿಪಡಿಸಿದೆ

2) ವಿಧನ ಸಭಾ ಸದಸ್ಯರು / ವಿಧಾನ ಪರಿಷತ್ ಸದಸ್ಯರು / ಜಿಲ್ಲಾ ಪರಿಷತ್ ಸದಸ್ಯರು / ತಾಲ್ಲೂಕು ಪಂಚಾಯತ್ ಸದಸ್ಯರುಗಳಿಗೆ / ಗ್ರಾಮ ಪಂಚಾಯತ್ ಕಾರ್ಯದರ್ಶಿಗಳಿಗೆ ಅಭಿಶಿಕ್ಷಣ (Orientation Programme) ತರಬೇತಿ ನೀಡಲಾಗಿದೆ

3) ಮನೆ ಮನೆ ಸಮೀಕ್ಷೆಯನ್ನು ಮನೆ ಸಂಖ್ಯೆ ನೀಡಿ ಪ್ರತಿಯೊಂದು ಕುಟುಂಬವನ್ನು ಗುರುತಿಸಿದೆ

4) ಸಮೀಕ್ಷೆಯನ್ನು ಮಾಡಲು ತಂಡಗಳನ್ನು ರಚಿಸಲಾಗಿದೆ ಹಾಗೂ ಇವರಿಗೆ ತರಬೇತಿ ನೀಡಿದೆ

5) ತಂಡದ ಶಿಫಾರಸುಗಳ ಪಟ್ಟಿಯನ್ನು ಗ್ರಾಮ ಸಭೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್ ಸಭೆಗಳಲ್ಲಿ ಅನುಮೋದನೆ ಪಡೆದಿದೆ

6) ತಾತ್ಕಾಲಿಕ ಪಡಿತರ ಚೀಟಿ ಮುದ್ರಿಸಿ ಮನೆ ಮನೆಗೆ ಹೋಗಿ ಹಂಚಿಕೆ ಮಾಡಿದೆ

7) ಲೋಪಗಳನ್ನು ಸರಿಪಡಿಸಲು ಅವಕಾಶ ನೀಡಿದೆ

8) ನಂತರ ಶಾಶ್ವತ ಪಡಿತರ ಚೀಟಿ ನೀಡಲಾಗುವುದು

105 (438) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ್) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ತಾತ್ಕಾಲಿಕವಾಗಿ ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯದಲ್ಲಿ ಕಾರ್ಯಗತಗೊಳಿಸುತ್ತಿರುವ ಜಲ ನಿರ್ಮಲ ಯೋಜನೆಗಳೆಷ್ಟು ,

ಆ) ಮುದ್ದೇಬಿಹಾಳ ತಾಲೂಕಿನಲ್ಲಿ ಈ ಯೋಜನೆಯಡಿಯಲ್ಲಿ ಕೈಗೊಂಡ ಕಾರ್ಯಕ್ರಮಗಳೇನು ,

ಇ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಕೋರಿ ಬಂದ ಪ್ರಸ್ತಾವನೆಗಳು ಎಷ್ಟು ,

ಈ) ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ವಿಶ್ವಬ್ಯಾಂಕ್ ನೆರವಿನ ಜಲ ನಿರ್ಮಲ ಯೋಜನೆಯು ಶಾಶ್ವತ ಕುಡಿಯುವ ಗ್ರಾಮೀಣ ನೀರು ಸರಬರಾಜು ಯೋಜನೆಯಾಗಿದ್ದು, ಇದನ್ನು ಉತ್ತರ ಕರ್ನಾಟಕದ 11 ಜಿಲ್ಲೆಗಳಾದ ಉತ್ತರ ಕನ್ನಡ, ಬೆಳಗಾಂ, ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ್, ಹಾವೇರಿ, ಬೀದರ್, ಗುಲ್ಬರ್ಗಾ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ

ಆ) ಜಲ ನಿರ್ಮಲ ಯೋಜನೆಯಡಿ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಮೊದಲನೇ ತಂಡದಲ್ಲಿ 4 ಗ್ರಾಮ ಪಂಚಾಯತ್‌ಗಳ 21 ಗ್ರಾಮಗಳಲ್ಲಿ ರೂ 2 33 ಕೋಟಿಗಳ ಅಂದಾಜು ವೆಚ್ಚದಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದ್ದು 15 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಹಾಗೂ ಮೂರನೇ ತಂಡದಲ್ಲಿ 4 ಗ್ರಾಮ ಪಂಚಾಯತ್‌ಗಳ 19 ಗ್ರಾಮಗಳಲ್ಲಿ ರೂ 1 96 ಕೋಟಿಗಳ ಅಂದಾಜು ವೆಚ್ಚದಲ್ಲಿ ನೀರು ಸರಬರಾಜು , ಹಾಗೂ ನೈರ್ಮಲ್ಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಎಲ್ಲಾ 19 ಕಾಮಗಾರಿಗಳು ಪ್ರಗತಿಯಲ್ಲಿವೆ ಮತ್ತು ಬಹು ಗ್ರಾಮ ಯೋಜನೆಯಡಿ ರೂ 9 50 ಕೋಟಿಗಳ ಅಂದಾಜು ಮೊತ್ತದಲ್ಲಿ ಅಡವಿಸೋಮನಾಳ ಮತ್ತು ಇತರೆ 30 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ

ಇ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಜಲ ನಿರ್ಮಲ ಯೋಜನೆಯಡಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಒಟ್ಟು 18 ಗ್ರಾಮ ಪಂಚಾಯತ್‌ಗಳಿಂದ ಪ್ರಸ್ತಾವನೆಗಳು ಬಂದಿರುತ್ತವೆ

ಈ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಜಲ ನಿರ್ಮಲ ಯೋಜನೆಯ ತಂಡ–1 ರಡಿ 21 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು, ಅವುಗಳಲ್ಲಿ 15 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ತಂಡ–3 ರಡಿ 19 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು, ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿವೆ ಬಹು ಗ್ರಾಮ ನೀರು ಸರಬರಾಜು ಯೋಜನೆಯಡಿಯ 31 ಗ್ರಾಮೀಣ ಆಂತರಿಕ ಸೌಲಭ್ಯ ಕಾಮಗಾರಿಗಳ ಪೈಕಿ 8 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, 19 ಕಾಮಗಾರಿಗಳು ಪ್ರಗತಿಯಲ್ಲಿವೆ ಹಾಗೂ

ಗ್ರಾಮೀಣ ಸಾಮಾನ್ಯ ಸೌಲಭ್ಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಸದರಿ ಕಾಮಗಾರಿಗಳನ್ನು ಎಲ್ & ಟಿ ಸಂಸ್ಥೆಯವರಿಗೆ ನೀಡಲಾಗಿದೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಗ್ರಾಮ ಪಂಚಾಯತ್‌ಗಳಿಗೆ ನೆರವು ಸಂಸ್ಥೆಗಳ ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಸಹಾಯವನ್ನು ಒದಗಿಸುವುದಲ್ಲದೇ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಹಾಗೂ ಜಿಲ್ಲಾ ನೆರವು ಘಟಕಗಳ ತಾಂತ್ರಿಕ ಸಿಬ್ಬಂದಿಯ ಮೂಲಕ ತಾಂತ್ರಿಕ ಸಹಾಯ ಮತ್ತು ಉಸ್ತುವಾರಿ ಮಾಡಲಾಗುತ್ತಿದೆ

106 (20) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಎಂ ಎನ್ ಪಿ ಗ್ರಾಮೀಣ ಕುಡಿಯುವ ನೀರಿನ ಯೋಜನೆಗೆ ರಾಜ್ಯ ಸರ್ಕಾರ ನಿಗದಿಪಡಿಸಿದ ಮೊತ್ತವೆಷ್ಟು ,

ಆ) ಇಲ್ಲಿಯವರೆಗೆ ಖರ್ಚಾದ ಮೊತ್ತವೆಷ್ಟು ,

ಇ) ಈ ಯೋಜನೆ ನಿರ್ವಹಣೆ ಜಿಲ್ಲಾ ಪಂಚಾಯತಿಯಿಂದ ಮಾಡಲಾಗಿದೆಯೇ ಅಥವಾ ಗ್ರಾಮ ಪಂಚಾಯತಿಗಳಿಂದ ಮಾಡಲಾಗಿದೆಯೇ,

ಈ) ಜಿಲ್ಲಾ ಪಂಚಾಯತಿವಾರು ಖರ್ಚಾದ ಹಣದ ಒಟ್ಟು ಮೊತ್ತವೆಷ್ಟು ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) 2006–07ರ ಸಾಲಿನಲ್ಲಿ ರಾಜ್ಯ ವಲಯದ MNPಯಡಿ ಗ್ರಾಮೀಣ ಕುಡಿಯುವ ನೀರಿನ ಬಾಬ್ತಿಗಾಗಿ ಆಯವ್ಯಯದಲ್ಲಿ ರೂ 44 00 ಕೋಟಿ ಅನುದಾನ ನಿಗದಿ ಪಡಿಸಲಾಗಿತ್ತು ಇದನ್ನು ಕೇಂದ್ರ ವಲಯದ ARWSP ಗೆ ಪೂರಕವಾಗಿ ರೂ 94 32 ಕೋಟಿಗೆ ಹೆಚ್ಚಳ ಮಾಡಲಾಗಿದೆ

ಆ) ಈ ಬಾಬ್ತು ಡಿಸೆಂಬರ್ 2006ರ ಅಂತ್ಯಕ್ಕೆ ರೂ 70 68 ಕೋಟಿ ವೆಚ್ಚವಾಗಿದೆ

ಇ) ಕುಡಿಯುವ ನೀರಿನ ಯೋಜನೆಗಳ ನಿರ್ವಹಣೆಯನ್ನು ಗ್ರಾಮ ಪಂಚಾಯತಿಗಳು ಮಾಡುತ್ತಿವೆ ಯೋಜನೆಗಳ ಅನುಷ್ಠಾನವನ್ನು ಜಿಲ್ಲಾ / ತಾಲ್ಲೂಕು ಇಂಜಿನಿಯರಿಂಗ್ ವಿಭಾಗಗಳು PRIs ಗಳ ಸಮನ್ವಯದಲ್ಲಿ ಮಾಡುತ್ತಿವೆ

ಈ) ರಾಜ್ಯ ಮತ್ತು ಕೇಂದ್ರವಲಯದಡಿ ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ 153 00 ಕೋಟಿ ಡಿಸೆಂಬರ್ 2006ರ ಅಂತ್ಯಕ್ಕೆ ಕುಡಿಯುವ ನೀರಿನ ಬಾಬ್ತಿಗಾಗಿ ವೆಚ್ಚವಾಗಿದೆ

107 (21) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಕೇಂದ್ರ ಸರ್ಕಾರದ ಸ್ವಜಲಧಾರ ಯೋಜನೆಯಲ್ಲಿ ಒಟ್ಟು ಮಂಜೂರಾದ ಯೋಜನೆಗಳು ಯಾವುವು , ಅವುಗಳ ಒಟ್ಟು ಅಂದಾಜು ವೆಚ್ಚವೆಷ್ಟು ,

ಆ) ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು ,

ಇ) ಈ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಹಣವೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಸ್ವಜಲಧಾರ ಯೋಜನೆಯಡಿಯಲ್ಲಿ ಒಟ್ಟು 1547 ಯೋಜನೆಗಳು ಇಲ್ಲಿಯವರೆಗೆ ಮಂಜೂರಾಗಿದ್ದು ಅವುಗಳ ವಿವರ ಕೆಳಕಂಡಂತಿರುತ್ತವೆ

ಕ್ರ ಸಂ	ಮಂಜೂರಾದ ವರ್ಷ	ಜಿಲ್ಲೆಗಳು	ಯೋಜನೆಗಳ ಸಂಖ್ಯೆ
1	2002–03	5	52
2	2003–04	24	312
3	2004–05	14	175
4	2004–05 (ಹೆಚ್ಚುವರಿ)	5	37
5	2005–06	25	320
6	2005–06 (ಹೆಚ್ಚುವರಿ)	10	180
7	2006–07	22	471
ಒಟ್ಟು			1547

ಈ ಯೋಜನೆಗಳ ಒಟ್ಟು ಅಂದಾಜು ವೆಚ್ಚ ಸಮುದಾಯ ವಂತಿಗೆಯು ಸೇರಿ ಇಲ್ಲಿಯವರೆಗೆ ರೂ 9081 32 ಲಕ್ಷಗಳು ಆಗಿರುತ್ತದೆ ಇದರಲ್ಲಿ ರೂ 3729 21 ಲಕ್ಷಗಳು ಖರ್ಚಾಗಿರುತ್ತದೆ

ಆ) ರಾಜ್ಯದಲ್ಲಿ ಈ ಯೋಜನೆಯ ಪ್ರಾರಂಭದಿಂದ ಇಲ್ಲಿಯವರೆಗೆ ರೂ 3729 21 ಲಕ್ಷಗಳು ಖರ್ಚಾಗಿರುತ್ತದೆ

ಇ) ಈ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಹಣ ಸಮುದಾಯ ವಂತಿಗೆ ಸೇರಿ ಒಟ್ಟು ರೂ 5352 01 ಲಕ್ಷಗಳು ಆಗಿರುತ್ತದೆ (ಜಿಲ್ಲಾವಾರು ವಿವರಗಳನ್ನು ಅನುಬಂಧ 1 ಮತ್ತು ತಾಲ್ಲೂಕಾವಾರು ವಿವರಗಳನ್ನು ಅನುಬಂಧ 11 ರಲ್ಲಿ ನೀಡಲಾಗಿದೆ)

ANNEXURE - 1

Talukwise / District wise Balance amount required to complete the scheme

(Rs in lakh)

Sl No	District	Balance amount required to complete the scheme
1	Bangalore Rural	127 82
2	Bangalore Urban	188 77
3	Bagalkote	16 60
4	Belgaum	550 01
5	Bellary	485 67
6	Bidar	149 06
7	Bijapur	2 29
8	Chamarajnagar	129 89
9	Chickmaglur	16 97
10	Chitradurga	124 20
11	Davengere	332 70
12	Dharwad	64 80
13	Dakshina Kannada	64 73
14	Gadag	5 21
15	Gulbarga	216 00

16	Hassan	311 67
17	Haveri	86 80
18	Kodagu	119 39
19	Kolar	346 64
20	Koppal	80 39
21	Mandya	438 12
22	Mysore	267 00
23	Raichur	336 11
24	Shimoga	234 24
25	Tumkur	328 77
26	Uttara Kannada	56 14
27	Udupi	272 02
	Total	**5352 01**

ANNEXURE - 2

Talukwise Abstract			
			(Rs in lakh)
Sl No	District	Taluk	Balance amount required to complete the scheme
1	DAVANGERE	Davangere	165 45
		Channagiri	37 50
		Harnapanhalli	5 48
		Honnali	31 38
		Jagalur	38 95
		Harihara	53 94
	Total		**332 70**
2	KODAGU	Madikeri	48 61
		Somwarpet	9 31
		Virajpet	61 47
	Total		**119 39**

3	BIJAPUR	Bijapur	2 29
		Muddebihal	--
	Total		**2 29**
4	BANGALORE(U)	Anekal	87 91
		Bangalore(E)	29 00
		Bangalore (N)	44 54
		Bangalore(S)	27 32
	Total		**188 77**
5	MANDYA	Malavalli	38 00
		SR Patna	45 00
		Mandya	74 50
		Maddur	143 00
		Nagamangala	82 50
		KR Pet	28 12
		Pandavapura	27 00
	Total		**438 12**
6	UTTARA KANNADA		56 14
	Total		**56 14**
7	KOLAR	Kolar	82 73
		Malur	30 32
		Bangarpet	87 42
		Srinivasapura	30 90
		Chikballapur	26 18
		Bagepalli	34 47
		Chintamani	11 37
		Gowribidanur	8 35
		Sidlaghatta	34 90
	Total		**346 64**

8	HASSAN	Alur	0
		Belur	5 00
		CR Patna	-
		Hassan	102 45
		Holenarsipura	2 50
		Sakleshpura	5 00
		Arsikere	196 72
		Arkalgud	-
	Total		**311 72**
9	BIDAR	Aurad	63 43
		B Kalyan	10 50
		Bhalki	32 69
		Bidar	34 92
		Humnabad	7 52
	Total		**149 06**
10	CHIKMAGALUR	Chikmagalur	-
		Kadur	-
		Koppa	-
		Mudigere	-
		NR Pura	16 97
		Sringere	-
		Tarikere	-
	Total		**16 97**
11	GULBARGA	Chincholi	32 75
		Shahapur	15 55
		Surpur	19 65
		Yadgir	90 00
		Aland	20 00
		Gulbarga	17 00

		Chittapur	12 60
		Jewargı	3 85
		Afzalpur	5 40
	Total		**216 8**
12	KOPPAL	Koppal	19 00
		Kushtagı	20 50
		Gangavathy	21 50
		Yelburga	19 39
	Total		**80 39**
13	BAGALKOT	Bagalkot	7 03
		Badamı	-
		Hunagund	3 55
		Jamkhadı	6 05
		Mudhol	-
		Bılagı	
	Total		**16 63**
14	GADAG	Gadag	-
		Mundargı	5 21
		Naragunda	-
		Rona	-
		Shırahattı	-
	Total		**5 21**
15	UDUPI	Kundapura	168 77
		Udupı	86
		Karkala	17 25
	Total		**272 02**
16	HAVERI	Haverı	9 64
		Byadagı	7 00

		Hanagal	4 21
		Hirekerur	65 95
	Total		**86 80**
17	DHARWAD	Dharwad	2 10
		Hubli	25 41
		Kalghatki	0 51
		Kundagol	6 79
		Navalgund	30 00
	Total		**64 805**
18	CHAMARAJA NAGAR	Chamarajanagar	32 00
		Kollegal	49 89
		Gundlupet	48 00
		Yelandur	-
	Total		**129 89**
19	TUMKUR	Tumkur	96 78
		Sira	45 00
		Kunigal	28 00
		Pavagada	36 00
		Gubbi	15 49
		Madhugiri	53 50
		Chickkanayakana halli	40 00
		Koratagere	2 00
		Tiptur	12 00
	Total		**328 77**
20	SHIMOGA	Shimoga	29 00
		Bhadravathi	62 62
		Theerthahalli	10 00

		Sagar	24 10
		Hosanagara	27 25
		Shikaripura	49 18
		Sorab	32 09
	Total		**234 24**
21	CHITRADURGA	Holalkere	0 00
		Challakere	20 20
		Molakalmur	30 00
		Chitradurga	44 00
		Hiriyur	30 00
	Total		**124 20**
22	RAICHUR	Sindhanur	263 13
		Manvi	73 00
	Total		**336 13**
23	DAKSHINA KANNADA	Bantwal	13 84
		Belthangadi	11 50
		Mangalore	22 50
		Puttur	12 25
		Sulya	4 64
	Total		**64 73**
24	MYSORE	Mysore	37 66
		Nanjangud	8 04
		KR Nagar	37 50
		Piriyapatna	98 80
		T Narsipura	85 00
	Total		**267 00**
25	BANGALORE (Rural)	Kanakapura	54 82

		Devanahalli	14 00
		DB Pura	30 00
		Hosakote	24 00
		Nelamangala	5 00
	Total		**127 82**
26	BELLARY	Bellary	126 73
		Hadagali	96 55
		Hagaribommana halli	65 00
		Koodligi	48 89
		Hospet	119 75
		Siraguppa	28 75
	Total		**485 67**
27	BELGAUM	Athani	104 50
		Bailahongala	85 00
		Belgaum	124 50
		Gokak	41 50
		Hukeri	32 60
		Raibag	4 90
		Ramdurga	67 50
		Khanapur	30 00
		Soundatti	35 00
		Chickodi	25 00
	Total		**550 50**
	GRAND TOTAL		**5352 01**

108 (22) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಬಿ ಪಿ ಎಲ್ ಕಾರ್ಡು ಹೊಂದಿರುವವರೆಷ್ಟು ,

ಆ) ರಾಜ್ಯದ ಎಲ್ಲಾ ಕಡುಬಡವರಿಗೆ ಹಸಿರು ಕಾರ್ಡು ವಿತರಣೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ , ಹಸಿರು ಕಾರ್ಡು ವಿತರಣೆ ಮಾಡಲು ತಗಲುವ ಒಟ್ಟು ವೆಚ್ಚವೆಷ್ಟು ,

ಇ) ಗಣಕೀಕರಣದ ಪಡಿತರ ಚೀಟಿ ವಿತರಣೆ ಮಾಡುವುದರಲ್ಲಿ ಆದ ಲೋಪದೋಷಗಳನ್ನು ಸರಿಪಡಿಸಲಾಗಿದೆಯೇ , ಗಣಕೀಕರಣದ ಪಡಿತರ ಚೀಟಿ ವಿತರಣೆ ಮಾಡಲು ಯಾವ ಐಟಿ ಕಂಪನಿಗೆ ಗುತ್ತಿಗೆ ನೀಡಲಾಗಿದೆ ,

ಈ) ಒಟ್ಟು ಗುತ್ತಿಗೆ ಮೊತ್ತವೆಷ್ಟ ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಪ್ರಸ್ತುತ ಬಿ ಪಿ ಎಲ್ ಕಾರ್ಡು ಹೊಂದಿರುವವರ ವಿವರ ಕೆಳಕಂಡಂತಿದೆ

ಎಎವೈ	–	11,75,959
ಬಿಪಿಎಲ್	–	53,85,258
ಅನ್ನಪೂರ್ಣ	–	25,452
ಒಟ್ಟು	–	65,86,669

ಆ) ಇಲ್ಲ ಆದರೆ, ಬಡವರಿಗೆ ಅಕ್ಷಯ ಪಡಿತರ ಚೀಟಿಯನ್ನು ಹಾಗೂ ಕಡುಬಡವರಿಗೆ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿ ಮತ್ತು ನಿರ್ಗತಿಕರಿಗೆ ಅನ್ನಪೂರ್ಣ ಪಡಿತರ ಚೀಟಿವಿತರಿಸಲಾಗುತ್ತಿದೆ

ಸದರಿ ಯೋಜನೆಯ ಸಂಪೂರ್ಣ ವೆಚ್ಚವನ್ನು ತಾತ್ಕಾಲಿಕ ಪಡಿತರ ಕೂಪನ್, ಪಡಿತರ ಚೀಟಿ ಮತ್ತು ಆಹಾರ ಕೂಪನ್‌ಗಳ ಹಾಗೂ ಇತರೇ ಸೇವೆಗಳಿಗೆ ನಿಗದಿಪಡಿಸಿರುವ ಶುಲ್ಕದಿಂದ ಭರಿಸಲಾಗುತ್ತಿದೆ ಈ ಯೋಜನೆಗೆ ಸರ್ಕಾರವು ಯಾವುದೇ ಅನುದಾನ ಒದಗಿಸಿರುವುದಿಲ್ಲ

ಇ) ಸರಿಪಡಿಸಲಾಗುತ್ತಿದೆ

ಗಣಕೀಕರಣದ ಪಡಿತರ ಚೀಟಿ ವಿತರಣೆ ಮಾಡಲು

1) ಮೆ॥ ಕಾಮನ್ ಟೆಕ್ನಾಲಜೀಸ್ ಲಿ, ಹಾಗೂ ಸಹ ಪಾಲುದಾರರಿಂದ

2) ಮೆ॥ ಮ್ಯಾಕ್ರೋ ಇನ್ಫೋಟೆಕ್,

3) ಆಡ್‌ವ್ಯೂಸ್ ಡಿಜಿಟಲ್ ಸಿಸ್ಟಂ,

4) ಸಿಎಂಎಸ್ ಕಂಪ್ಯೂಟರ್ಸ್

5) ಶ್ರೀ ಕಂಪ್ಯೂಟರ್ಸ್ ಇವರಿಗೆ "ಸಾರ್ವಜನಿಕ" – ಖಾಸಗಿ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸಲು 5 1/2 ವರ್ಷಗಳ ಅವಧಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿರುತ್ತದೆ ;

ಈ) ಯೋಜನೆಯ ಪೂರ್ಣ 5 1/2 ವರ್ಷಗಳ ಕಾಲಾವಧಿಗೆ ರೂ 98 ಕೋಟಿಗಳ ಅಂದಾಜು ವೆಚ್ಚವನ್ನು ಒಳಗೊಂಡಂತೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿರುತ್ತದೆ ಸದರಿ ಯೋಜನೆಯ ಸಂಪೂರ್ಣ ವೆಚ್ಚವನ್ನು ತಾತ್ಕಾಲಿಕ ಪಡಿತರ ಕೂಪನ್, ಪಡಿತರ ಚೀಟಿ ಮತ್ತು ಆಹಾರ ಕೂಪನ್‌ಗಳು ಹಾಗೂ ಇತರೇ ಸೇವೆಗಳಿಗೆ ನಿಗಧಿಪಡಿಸಿರುವ ಶುಲ್ಕದಿಂದ ಭರಿಸಲಾಗುತ್ತಿದೆ ಈ ಯೋಜನೆಗೆ ಸರ್ಕಾರದ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ

109 (427) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳೆಷ್ಟು,

ಆ) ದೇವಸ್ಥಾನದ ನೌಕರಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗದವರಿಗೆ ಮೀಸಲಾತಿ ನೀಡಿದೆಯೇ (ವರ್ಜಿವಾರು ವಿವರವನ್ನು ನೀಡುವುದು) ,

ಇ) ಮೀಸಲಾತಿ ನೀಡುವಲ್ಲಿ ಅನ್ಯಾಯವಾಗಿದೆಯೆಂಬುದು ತಿಳಿದಿದ್ದರೂ ಮರುನೇಮಕಾತಿ ಸಂದರ್ಭದಲ್ಲೂ ಇಂತಹ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ವರ್ಗವಾರು ಮೀಸಲಾತಿ ನೀಡುವ ಸಂದರ್ಭದಲ್ಲಿ ಅನುಸರಿಸುತ್ತಿರುವ ಮಾನದಂಡವೇನು ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳ ಸಂಖ್ಯೆ 34,194

ಆ) ಮುಜರಾಯಿ ದೇವಸ್ಥಾನಗಳ ನೌಕರರನ್ನು ಪ್ರಮುಖವಾಗಿ 2 ರೀತಿ ವರ್ಗೀಕರಿಸಲಾಗಿರುತ್ತದೆ

1 **ಒಳಾಂಗಣ ನೌಕರರು (ಆಗಮೀಕರು, ಅರ್ಚಕರು, ಉಪಾದಿವಂತರು, ಪರಿಚಾರಕರು)** – ಅರ್ಚಕ, ಆಗಮಿಕ, ಪರಿಚಾರಕ, ಉಪಾದಿವಂತ, ಪಾಚಕ, ಸ್ಥಾನಿಕ, ಜೋಯಿಸ, ಶ್ರೀಪಾದ, ಶ್ರೀಗಂಧ, ಕಟ್ಟಿಗೆ

ಮತ್ತು ಸೇವಾಕಾರಿಗಳು ಹಾಗೂ ಮಂತ್ರಗಳು, ವೇದಗಳು, ಪ್ರಬಂಧಗಳು, ಪುರಾಣಗಳ ಪರಣಕ್ಕಾಗಿ ನೇಮಕರಾದ ವ್ಯಕ್ತಿಗಳು ಮತ್ತು ಮುಖ್ಯವಾಗಿ ಪೂಜೆಗಳು ಮತ್ತು ರೂಢಿಗಳ ಆಚರಣೆಗಳನ್ನು ಮಾಡುವ ಅಥವಾ ಅದರ ಆಚರಣೆಗೆ ನೆರವು ನೀಡುವ ಕರ್ತವ್ಯಗಳನ್ನು ಹೊಂದಿರುವ ಜ್ಯೋತಿಷಿಗಳು ದೇವಸ್ಥಾನದ ಒಳಾಂಗಣ ನೌಕರರಾಗಿರುತ್ತಾರೆ

2 **ಹೊರಾಂಗಣ ನೌಕರರು (ಪಾರುಪತ್ತೇದಾರರು, ಅಡಿಗೆಯವರು, ರಂಗವಲ್ಲಿ, ವಾದ್ಯದವರು, ಕಸಗುಡಿಸುವವರು, ಕಾವಲುಗಾರರು, ಇತ್ಯಾದಿ)** – ರಾಜ್ಯ ಸರ್ಕಾರದಿಂದ ಪ್ರತಿನಿಯೋಜಿತರಾದ ಸರ್ಕಾರಿ ನೌಕರರನ್ನು ಹೊರತುಪಡಿಸಿ, ದೇವಸ್ಥಾನದಲ್ಲಿನ ವಿವಿಧ ಕರ್ತವ್ಯಗಳನ್ನು ನಿರ್ವಹಿಸಲು ನಿಯೋಜಿತರಾಗಿರುವ ಪಾರುಪತ್ತೇಗಾರ, ಪೇಷ್ಕಾರ್, ಬಿಲ್ ಸಂಗ್ರಾಹಕ, ಗುಮಾಸ್ತ, ಬೆರಳಚ್ಚುಗಾರ ಮತ್ತು ಇತರ ವ್ಯಕ್ತಿಗಳು ದೇವಸ್ಥಾನದ ಹೊರಾಂಗಣ ನೌಕರರಾಗಿರುತ್ತಾರೆ ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 90/ಎಂಇಟಿ 96, ದಿನಾಂಕ 28–2–87ರ ಸುತ್ತೋಲೆಯಲ್ಲಿ ವಂಶಪಾರಂಪರ್ಯ ಆಧಾರದ ಮೇಲೆ ತುಂಬಬೇಕಾದ ಅರ್ಚಕರ ಹುದ್ದೆಗಳನ್ನು ಹೊರತುಪಡಿಸಿ, ಉಳಿದ ಅನುವಂಶಿಕ ಹುದ್ದೆಗಳಿಗೆ ನೇಮಕ ಮಾಡುವಾಗ ವಿದ್ಯಾರ್ಹತೆ ಪಡೆದ ಎಲ್ಲಾ ಕೋಮಿನವರಿಗೂ ಸಮಾನ ಅವಕಾಶ ನೀಡಬೇಕೆಂದು ನಿರ್ದೇಶಿಸಿರುತ್ತದೆ ಈ ಪ್ರಕಾರ ದೇವಾಲಯದ ಒಳಾಂಗಣ ಮತ್ತು ಹೊರಾಂಗಣ ಹುದ್ದೆಗಳಲ್ಲಿ ಅನುವಂಶಿಕ ಹುದ್ದೆಗಳನ್ನು ಹೊರತುಪಡಿಸಿ ಉಳಿದ ಹುದ್ದೆಗಳಿಗೆ ಆಯಾ ಹುದ್ದೆಗಳಿಗೆ ಅನುಗುಣವಾದ ವಿದ್ಯಾರ್ಹತೆ ಪಡೆದ ಎಲ್ಲಾ ಕೋಮಿನವರನ್ನು ನೇಮಕಾತಿಗೆ ಪರಿಗಣಿಸಲಾಗುತ್ತಿದೆ

ದೇವಾಲಯದ ಸಿಬ್ಬಂದಿಯ ವೇತನವನ್ನು ಆಯಾಯ ದೇವಾಲಯದ ನಿಧಿಯಿಂದ ಭರಿಸಬೇಕಾಗಿದ್ದು, ನೌಕರರ ವೇತನವನ್ನು ಆಯಾಯ ದೇವಾಲಯದ ಆರ್ಥಿಕ ಸ್ಥಿತಿ–ಗತಿಗನುಗುಣವಾಗಿ ನಿರ್ಧರಿಸಬೇಕಾಗಿರುವುದರಿಂದ ಕನಿಷ್ಠ ವೇತನ ಪಡೆಯುವ ಹುದ್ದೆಗಳಿಗೆ ಸ್ಥಳೀಯರಲ್ಲದೇ ಬೇರೆ ಅಭ್ಯರ್ಥಿಗಳು ಮುಂದೆ ಬರುವ ಸಾಧ್ಯತೆ ತೀರ ಕಡಿಮೆ ಇದ್ದು, ಇಂತಹ ಸಂದರ್ಭಗಳಲ್ಲಿ ಮೀಸಲಾತಿ ಪರಿಗಣಿಸುವುದು ಕಷ್ಟಸಾಧ್ಯವಾಗುತ್ತಿದ್ದರೂ, ಅನುವಂಶಿಕ ವಲ್ಲದ ಒಳಾಂಗಣ ಮತ್ತು ಹೊರಾಂಗಣ ಹುದ್ದೆಗಳಿಗೆ ಪರಿಶಿಷ್ಟ ವರ್ಗದವರನ್ನು ನೇಮಕ ಮಾಡಲು ಕ್ರಮ ಜರುಗಿಸಲಾಗುತ್ತಿದೆ

ಅರ್ಚಕರಾಗಿ ನೇಮಕಾತಿ ಹೊಂದುವವರು ಆಯಾ ದೇವಾಲಯದ ಸಂಪ್ರದಾಯ/ಪದ್ಧತಿಗೆ ಅನುಗುಣವಾಗಿ ನಿಗಧಿಪಡಿಸಿದ ಆಗಮ–ಶಿಕ್ಷಣ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗಿರುವುದು ಕಡ್ಡಾಯವಾಗಿದೆ ಅರ್ಚಕರ ವೃತ್ತಿಗೆ ಸಂಬಂಧಿಸಿದಂತೆ, ಸರ್ಕಾರದ ವತಿಯಿಂದ ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು (ಆಗಮ ವಿಭಾಗ) ಮತ್ತು ಸರ್ಕಾರಿ ಸಂಸ್ಕೃತ ಕಾಲೇಜು ಮೇಲುಕೋಟೆ ಇಲ್ಲಿ ವಿದ್ಯಾರ್ಥಿಗಳಿಗೆ ಆಗಮ ಶಿಕ್ಷಣವನ್ನು ಬೋಧಿಸಲಾಗುತ್ತಿದೆ ಉಳಿದಂತೆ ರಾಜ್ಯದಲ್ಲಿ 27 ಖಾಸಗಿ ಸಂಸ್ಥೆಗಳಿಗೆ ಆಗಮ ಶಿಕ್ಷಣ ಭೋದಿಸಲು ಇಲಾಖೆಯಿಂದ ಅನುಮೋದನೆ ನೀಡಲಾಗಿದೆ ಈ ಪಾರ ಶಾಲೆಗಳಲ್ಲಿ ಆಗಮ ವಿದ್ಯಾಭ್ಯಾಸ ಮಾಡಲು ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಹ - ಅವಕಾಶವಿದ್ದು, ಸಂಸ್ಥೆಗೆ ಪಾವತಿಸುವ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ ಶಿಷ್ಯ ವೇತನ ಹಾಗೂ ವಿದ್ಯಾರ್ಥಿನಿಲಯದ ಸೌಲಭ್ಯವನ್ನು ಕಲ್ಪಿಸಲಾಗಿದೆ ಆಸಕ್ತರಾದ ಎಲ್ಲಾ ಕೋಮಿನ ವಿದ್ಯಾರ್ಥಿಗಳು ಈ ಆಗಮ ಶಾಲೆಗಳಿಂದ ಆಗಮ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಲಾಗಿದೆ

ಪ್ರಸ್ತುತ ದೇವಾಲಯದ ಒಳಾಂಗಣ ಮತ್ತು ಹೊರಾಂಗಣ ನೌಕರರ ನೇಮಕಾತಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಕಲ್ಪಿಸಿಲ್ಲವಾದ್ದರಿಂದ ಅನುವಂಶಿಕ ಹುದ್ದೆಗಳ ನೇಮಕಾತಿಯಲ್ಲಿ ಕೂಡ ಮೀಸಲಾತಿ ಕಲ್ಪಿಸುವ ಬಗ್ಗೆ ಪರಿಶೀಲಿಸಿ, ನಿರ್ಧಾರ ಕೈಗೊಳ್ಳಲಾಗುವುದು

ಇ) 'ಆ' ಗೆ ನೀಡಿರುವ ಉತ್ತರದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಈ) 'ಆ" ಗೆ ನೀಡಿದ ಉತ್ತರದಿಂದಕ್ಕಾಗಿ ಉದ್ಭವಿಸುವುದಿಲ್ಲ

110 (429) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಬಡವರಿಗೆ ನೀಡುವ ಬಿಪಿಎಲ್ ಪಡಿತರ ಕಾರ್ಡ್ ವಿತರಣೆ ಯಾವಾಗ ಪೂರ್ಣಗೊಳಿಸಲಾಗುವುದು ,

ಆ) ವಿಳಂಬಕ್ಕೆ ಕಾರಣಗಳೇನು ,

ಇ) ಶೇಕಡವಾರು ಕಡ್ಡಾಯ ಮಾಡಿದಲ್ಲಿ ನೈಜ ಫಲಾನುಭವಿಗಳಿಗೆ ಅನ್ಯಾಯವಾಗುವುದು ತಿಳಿದಿದೆಯೇ ,

ಈ) ಚಾಮರಾಜನಗರದಂತಹ ತೀರ ಹಿಂದುಳಿದ ಜಿಲ್ಲೆಗೆ ಇಂತಹ ಮಾನದಂಡ ಅನುಸರಿಸುವುದರಿಂದ ಅಲ್ಲಿನ ಬಡವರಿಗೆ ನ್ಯಾಯ ಸಿಕ್ಕದಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಉ) ಎಷ್ಟು ಕಾಲಮಿತಿಯೊಳಗೆ ಪಡಿತರ ಕಾರ್ಡ್‌ಗಳನ್ನು ವಿತರಣೆ ಮಾಡಲಾಗುವುದು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಎಲ್ಲಾ ಅಹವಾಲುಗಳನ್ನು ಪೂರ್ಣ ಪ್ರಮಾಣದಲ್ಲಿ ವಿಲೇವಾರಿಗೊಳಿಸಿ ಕಾರ್ಯ ಕ್ರಮವನ್ನು ಪೂರೈಸಲಾಗುವುದು

ಆ) ಸಾರ್ವಜನಿಕರಿಂದ ನಿರೀಕ್ಷೆಗೂ ಮೀರಿ ಅಹವಾಲುಗಳು ಸ್ವೀಕೃತವಾದ್ದರಿಂದ ವಿಳಂಬವಾಗಿರುತ್ತದೆ

ಇ) ನೈಜ ಫಲಾನುಭವಿಗಳಿಗೆ ಅನ್ಯಾಯವಾಗದಂತೆ ಅರ್ಹರಿಗೆ ಪಡಿತರ ಚೀಟಿಯನ್ನು ವಿತರಿಸಲಾಗುವುದು

ಈ) ರಾಜ್ಯಾದ್ಯಂತ ಸಮೀಕ್ಷೆಯನ್ನು ಕೈಗೊಂಡು ವಿವಿಧ ವರ್ಗವಾರು ನೈಜ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಅರ್ಹತೆಗೆ ಅನುಗುಣವಾಗಿ ಪಡಿತರ ಚೀಟಿಯನ್ನು ವಿತರಿಸಲಾಗುವುದು

ಉ) ಅಹವಾಲುಗಳ ಪೂರ್ಣ ವಿಲೇವಾರಿಯ ನಂತರ ಖಾಯಂ ಪಡಿತರ ಚೀಟಿಗಳ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು ನಂತರ ಖಾಯಂ ಪಡಿತರ ಚೀಟಿಯನ್ನು ನೀಡಲಾಗುವುದು, ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳನ್ನು ಪೂರೈಸಲು ಕನಿಷ್ಠ 6 ತಿಂಗಳ ಕಲಾವಕಾಶ ಬೇಕಿರುತ್ತದೆ

111 (430) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಇರುವ ಒಳನಾಡು / ಕರಾವಳಿ ಮೀನುಗಾರರಿಗೆ ನೀಡುತ್ತಿರುವ ಅನುದಾನವೆಷ್ಟು ಹಾಗೂ ಅವರ ಅಭಿವೃದ್ಧಿಗೆ ತೆಗೆದುಕೊಂಡಿರುವ ಕ್ರಮಗಳೇನು ,

ಆ) ಒಳನಾಡು ಮೀನುಗಾರರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಶೇಕಡವಾರು ಮೀನುಗಾರರ ಸಂಖ್ಯೆಯಲ್ಲಿ ಒಳನಾಡು ಮೀನುಗಾರರು ಹೆಚ್ಚಿನ ಸಂಖ್ಯೆಯಲ್ಲಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಈ) ಒಳನಾಡು ಮೀನುಗಾರರಿಗೆ ಮುಂದಿನ 2007–08ನೇ ಸಾಲಿನಲ್ಲಿದ್ದರೂ ಹೆಚ್ಚಿನ ಅನುದಾನ ಒದಗಿಸಿ ಮೀನುಗಾರರ ಅಭಿವೃದ್ಧಿಯನ್ನು ಮಾಡಲಾಗುವುದೇ ,

ಉ) ಈ ಸಾಲಿನಲ್ಲಿ ತಾಲ್ಲೂಕಿನ 10 ಮೀನುಗಾರರಿಗೆ ಮಾತ್ರ ಮನೆ ನಿರ್ಮಿಸಲು ಗುರಿ ಇರುವುದರಿಂದ, ಇನ್ನು ಎಷ್ಟು ವರ್ಷಗಳಲ್ಲಿ ವಸತಿರಹಿತರಿಗೆ ಮನೆ ನೀಡಲು ಕಾಲಮಿತಿ ಬೇಕಾಗಿರುವುದೆಷ್ಟು (ಮಾಹಿತಿ ನೀಡುವುದು) ,

ಊ) ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರದ ಕ್ರಮವೇನು ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಮೀನುಗಾರಿಕೆಗೆ 2006–07ನೇ ಸಾಲಿನಲ್ಲಿ ಒಟ್ಟು ರೂ 3613 53 ಲಕ್ಷಗಳ ಅನುದಾನ ಒದಗಿಸಲಾಗಿದ್ದು ಇದರಲ್ಲಿ ಕರಾವಳಿ ಮೀನುಗಾರಿಕೆಗೆ ರೂ 1016 18 ಲಕ್ಷಗಳು, ಒಳನಾಡು ಮೀನುಗಾರಿಕೆಗೆ ರೂ 685 48 ಲಕ್ಷಗಳು ಮತ್ಸಾ್ಯಶ್ರಯ ಇತ್ಯಾದಿ ಸಾಮೊನ್ಯ ಯೋಜನೆಗಳಿಗೆ ರೂ 1911 87 ಲಕ್ಷಗಳ ಅನುದಾನ ಒದಗಿಸಲಾಗಿದೆ ಮೀನುಗಾರಿಕೆ ಪ್ರೋತ್ಸಾಹಕ್ಕಾಗಿ ಮೀನುಗಾರಿಕೆ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ

1 ಕರಾವಳಿ ಮೀನುಗಾರಿಕೆ

ಯಾಂತ್ರೀಕೃತ ದೋಣಿಗಳು ಬಳಸುವ 70,000 ಕಿ ಲೀ ರಾಜ್ಯ ಮಾರಾಟಕರ ರಹಿತ ಡೀಸೆಲ್ ಸರಬರಾಜು

ಕೇಂದ್ರ ವಲಯ ಯಾಂತ್ರೀಕೃತ ಮೀನುಗಾರಿಕಾ ದೋಣಿಗಳು ಉಪಯೋಗಿಸುವ ಇಂಧನದ ಮೇಲೆ ಕೇಂದ್ರ ಅಬ್ಕಾರಿ ಶುಲ್ಕ ರಿಯಾಯಿತಿ

ಕೇಂದ್ರ ಪುರಸ್ಕ ೃತ – ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳ ಯಾಂತ್ರಿಕರಣ

ನಾಡ ದೋಣಿಗಳಿಗೆ ಪಡಿತರ ಸೀಮೆಎಣ್ಣೆಯನ್ನು ಒದಗಿಸುವುದು

ಮೀನುಗಾರಿಕೆ ಬಂದರುಗಳ ಮತ್ತು ಇಳಿದಾಣ ಕೇಂದ್ರಗಳ ನಿರ್ಮಾಣ ಮತ್ತು ನಿರ್ವಹಣೆ

ಮೀನುಗಾರಿಕೆ ದೋಣಿಗಳಲ್ಲಿ ಜೀವರಕ್ಷಕ ಸಾಧನೆಗಳನ್ನು ಅಳವಡಿಸಲು ಸಹಾಯ, ದೂರ ತೀರದ ದೋಣಿಗಳಿಗೆ ಫಿಶ್ ಫೈಂಡರ್, ಜಿಪಿಎಸ್ ಇತ್ಯಾದಿ ಅಳವಡಿಸಲು ಸಹಾಯ, ಕೊಂಡಿರಸ್ತೆ ನಿರ್ಮಾಣ ಹಾಗೂ ಸೀರ್ಯಾಂಚಿಂಗ್

ಕೇಂದ್ರ ಪುರಸ್ಕೃತ ಹಿನ್ನೀರು ಜಲಕೃಷಿ ಅಭಿವೃದ್ಧಿಗಾಗಿ ಸೀಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಗಳಿಗೆ ಸಹಾಯ

2 ಒಳನಾಡು ಮೀನುಗಾರಿಕೆ

ರಾಜ್ಯದಲ್ಲಿರುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿವಿಧ ಸಂಘ/ಸಂಸ್ಥೆಗಳಿಗೆ ಕಡಿಮೆ ಮೊತ್ತಕ್ಕೆ ಗುತ್ತಿಗೆ ನೀಡುವುದು ಅಥವಾ ಟೆಂಡರ್–ಕಂ–ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿ ಪಡಿಸುವುದು

ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ ಯೋಜನೆಯಡಿ

ಖಾಸಗಿ ಕ್ಷೇತ್ರದಲ್ಲಿ ಮೀನು ಕೊಳ ನಿರ್ಮಾಣಕ್ಕೆ ಸಹಾಯಧನ

ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಕೊಳ್ಳಲು ಸಹಾಯಧನ

ಹುಲ್ಲುಗೆಂಡೆ ಮೀನು ಮರಿ ಸರಬರಾಜಿಗೆ ಸಹಾಯಧನ

ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯಧನ

ಸಿಹಿನೀರು ಸೀಗಡಿ ಕೃಷಿಗೆ ಸಹಾಯಧನ

ಕೇಂದ್ರ ಪುರಸ್ಕೃತ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮುಖಾಂತರ ಒಳನಾಡು ಮೀನುಗಾರಿಕೆಯ ಅಭಿವೃದ್ಧಿ

ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆ

ಕೇಂದ್ರ ಪುರಸ್ಕೃತ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಮತ್ತು ಜಲಕೃಷಿ ಯೋಜನೆ

3 ಇತರೆ ಸಾಮಾನ್ಯ ಯೋಜನೆಗಳು

ಕೇಂದ್ರ ಪುರಸ್ಕೃತ ಮೀನುಗಾರರ ಉಳಿತಾಯ ಪರಿಹಾರ ಯೋಜನೆ, ಮನೆಗಳ ನಿರ್ಮಾಣ ಹಾಗೂ ಸಾಮೂಹಿಕ ವಿಮಾ ಯೋಜನೆ

ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯ

ಮೀನುಗಾರಿಕೆ ಸಾಮಾಗ್ರಿಗಳನ್ನು ಖರೀದಿಸಲು ಸಹಾಯ

ಮೀನು ಮಾರುಕಟ್ಟೆ ನಿರ್ಮಾಣಕ್ಕಾಗಿ ಸಹಾಯ

ಮೀನುಗಾರಿಕೆ ಸಹಕಾರ ಸಂಘಗಳಿಗೆ ಬಂಡವಾಳ ಹೂಡಲು ಸಹಾಯ, ವ್ಯವಸ್ಥಾಪನಾ ಸಹಾಯ

ಮಹಿಳಾ ಮೀನುಗಾರರಿಗೆ "ಮತ್ಸ್ಯ ಮಹಿಳಾ ಸ್ವಾವಲಂಬನಾ" ಯೋಜನೆ

ಮತ್ಸ್ಯಾಶ್ರಯ ಯೋಜನೆ

ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ಮೀನುಗಾರರಿಗೆ ಪರಿಹಾರ ನೀಡುವುದು

ಆ) ಒಳನಾಡು ಮೀನುಗಾರರ ಬೇಡಿಕೆ ಹಾಗೂ ಅನುದಾನ ಲಭ್ಯತೆಗೆ ಅನುಗುಣವಾಗಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಅನುಷ್ಠಾನಗೊಳಿಸಲಾಗುತ್ತಿದೆ

ಇ) ಹೌದು ತಿಳಿದಿದೆ

ಈ) ಒಳನಾಡು ಮೀನುಗಾರಿಕೆಗೆ 2007–08ನೇ ಸಾಲಿನಿಂದ ಹೆಚ್ಚು ಪ್ರಮುಖ್ಯತೆಯನ್ನು ನೀಡಿ, ಕೇಂದ್ರ ಸರ್ಕಾರದ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ್ ಇವರ ಧನ ಸಹಾಯದಿಂದ ಜಲಾಶಯ ಅಭಿವೃದ್ಧಿಯನ್ನು ಹಾಗೂ ಒಳನಾಡು ಜಲಸಂಪನ್ಮೂಲದ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು

ಉ) ಪ್ರಸಕ್ತ ಸಾಲಿನಲ್ಲಿ ಮಂಜೂರಾದ 2660 ಮನೆಗಳಲ್ಲಿ ತಲಾ 10 ಮನೆಗಳನ್ನು ಕೊಳ್ಳೇಗಾಲ ಮತ್ತು ಹಾನೂರು ಕ್ಷೇತ್ರಕ್ಕೆ ಹಂಚಿಕೆ ಮಾಡಲಾಗಿದೆ ಇದುವರೆವಿಗೂ ಸದರಿ ಯೋಜನೆಯಲ್ಲಿ ಕೊಳ್ಳೆಗಾಲ ತಾಲ್ಲೂಕಿಗೆ 580 ಮನೆಗಳನ್ನು ಮಂಜೂರು ಮಾಡಲಾಗಿದೆ ಕಾಲಕಾಲಕ್ಕೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ ಆಧರಿಸಿ ಮನೆಗಳನ್ನು ಮಂಜೂರು ಮಾಡಲಾಗುವುದು ಆದಾಗ್ಯೂ ಇನ್ನು ಐದು ವರ್ಷಗಳಲ್ಲಿ ಪ್ರಸಕ್ತ ಇರುವ ಬೇಡಿಕೆಯನ್ನು ಪೂರೈಸಲು ಕಾಲಮಿತಿ ನಿಗಧಿಪಡಿಸಲಾಗಿದೆ

ಊ) ಮೀನುಗಾರರಿಂದ ಮನೆಗಳಿಗೆ ಇರುವ ಬೇಡಿಕೆಯನ್ನು ಪೂರೈಸಲು ಕಾಲಕಾಲಕ್ಕೆ ಅಗತ್ಯ ಅನುದಾನ ಒದಗಿಸಲು ಕ್ರಮ ವಹಿಸಲಾಗುವುದು

112 (224) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) 2006–07ನೇ ಸಾಲಿನಲ್ಲಿ ಈವರೆವಿಗೆ ರಾಜ್ಯದಲ್ಲಿ ಟ್ರಾಕ್ಟರ್ ಮತ್ತು ಪವರ್ ಟೆಲ್ಲರ್‌ಗಳನ್ನು ಒದಗಿಸುವ ಯೋಜನೆಯಡಿ ಪ್ರಯೋಜನವನ್ನು ಪಡೆದಿರುವ ರೈತ ಫಲಾನುಭವಿಗಳೆಷ್ಟು ,

ಆ) ಟ್ರಾಕ್ಟರ್ ಮತ್ತು ಪವರ್ ಟೆಲ್ಲರ್‌ಗಳನ್ನು ಖರೀದಿಸಲು ಸಹಾಯ ಧನಕ್ಕೆ ಈವರೆವಿಗೂ ಸ್ವೀಕರಿಸಲಾದ ಅರ್ಜಿಗಳೆಷ್ಟು ,

ಇ) ಆ ಪೈಕಿ ಪರಿಗಣಿಸಿ ಸಬ್ಸಿಡಿಯನ್ನು ಒದಗಿಸಿರುವುದೆಷ್ಟು ,

ಈ) ಉಳಿದ ಅರ್ಜಿಗಳನ್ನು ಇತ್ಯರ್ಥಗೊಳಿಸಲು ಸರ್ಕಾರದ ಕ್ರಮವೇನು ,

ಉ) ಈ ಕಾರ್ಯಕ್ರಮಕ್ಕಾಗಿ ಸರ್ಕಾರವು ಒದಗಿಸಲಾದ ಅನುದಾನವೆಷ್ಟು , ಇದರಲ್ಲಿ ವಿತರಿಸಲಾದ ಅನುದಾನವೆಷ್ಟು ,

ಊ) ಒಟ್ಟು ಅನುದಾನದಲ್ಲಿ ಸರ್ಕಾರದ ಸಹಾಯಧನವೆಷ್ಟು , ರೈತರು ನೀಡಬೇಕಾದ ಸಾಲದ ಮೊತ್ತವೆಷ್ಟು (ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು)

ಅ) 4079

ಆ) 12680

ಇ) 4079

ಈ) ಅನುದಾನದ ಲಭ್ಯತೆ ಆಧಾರದ ಮೇಲೆ ಉಳಿದ ಅರ್ಜಿಗಳನ್ನು ಇತ್ಯರ್ಥ ಪಡಿಸಲಾಗುವುದು

ಉ) ಈ ಕಾರ್ಯಕ್ರಮಕ್ಕೆ ಸರ್ಕಾರವು ರೂ 3925 99 ಲಕ್ಷ ಅನುದಾನವನ್ನು ಒದಗಿಸಿದ್ದು, ಅದರಲ್ಲಿ ಈ ವರೆಗೆ ರೂ 3816 30 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

ಊ) ಒದಗಿಸಲಾಗಿರುವ ಅನುದಾನವು ಪೂರ್ಣವಾಗಿ ಸಹಾಯಧನವೇ ಆಗಿದ್ದು, ಇದರಲ್ಲಿ ಪ್ರತಿ ಟ್ರಾಕ್ಟರ್ ಒಂದಕ್ಕೆ 60,000 00 ರೂ ಹಾಗೂ ಪವರ್ ಟೆಲ್ಲರ್ ಒಂದಕ್ಕೆ 49700 00 ರೂಗಳಷ್ಟು ಸಹಾಯಧನ ನೀಡಲಾಗುತ್ತಿದೆ ರೈತರು ಭರಿಸಬೇಕಾದ ತಮ್ಮ ಪಾಲಿನ ಹಣಕ್ಕೆ ಸಂಘಸಂಸ್ಥೆಗಳಿಂದ ಸಾಲ ಪಡೆಯಬಹುದಾಗಿದೆ ಅಥವಾ ತಮ್ಮದೇ ಆದ ಸಂಪನ್ಮೂಲದಿಂದ ಭರಿಸಬಹುದಾಗಿದೆ

113 (225) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಕೇಂದ್ರ ಸರ್ಕಾರ ಹಾಗೂ ವಿವಿಧ ಮೂಲಗಳಿಂದ ರಾಜ್ಯದಲ್ಲಿನ ತೋಟಗಾರಿಕೆ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರಕ್ಕೆ ಬಂದಿರುವ ಅನುದಾನವೆಷ್ಟು,

ಆ) ಇದನ್ನು ಯಾವ ಯಾವ ಯೋಜನೆಗಳಿಗೆ ವಿನಿಯೋಗಿಸಲಾಗಿದೆ (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) ,

ಇ) ಈ ಕಾರ್ಯಕ್ರಮಗಳನ್ನು ಯಾವ ಯಾವ ಜಿಲ್ಲೆಗೆ ವಿಸ್ತರಿಸಲಾಗಿದೆ ಸರ್ಕಾರದ ಒಟ್ಟು ಅನುದಾನದಲ್ಲಿ ಸಬ್ಸಿಡಿ ಮತ್ತು ಸಾಲವೆಷ್ಟು (ಹಣದ ವಿವರ ನೀಡುವುದು) ?

ಶ್ರೀ ಶಶಿಕಾಂತ ಅಕ್ಕಪ್ಪನಾಯಕ್ (ತೋಟಗಾರಿಕೆ ಸಚಿವರು)

ಅ) ಕೇಂದ್ರ ಸರ್ಕಾರ ಹಾಗೂ ವಿವಿಧ ಮೂಲಗಳಿಂದ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ರಾಜ್ಯಸರ್ಕಾರಕ್ಕೆ 2006–07ನೇ ಸಾಲಿನಲ್ಲಿ ರೂ 12614 42 ಲಕ್ಷಗಳ ಅನುದಾನ ಬಂದಿರುತ್ತದೆ

ಆ) ಕೇಂದ್ರ ಸರ್ಕಾರ ಹಾಗೂ ವಿವಿಧ ಮೂಲಗಳಿಂದ ಬಂದಿರುವ ಅನುದಾನವನ್ನು ಕೆಳಕಾಣಿಸಿದ ಯೋಜನೆಗಳಿಗೆ ವಿನಿಯೋಗಿಸಲಾಗಿದೆ

1 ಸಾಮರ್ಥ್ಯವಿರುವ ರಾಜ್ಯಗಳಲ್ಲಿ ತಾಳೆಬೆಳೆ ವ್ಯವಸಾಯ

2 ತೆಂಗು ಅಭಿವೃದ್ಧಿ ಮಂಡಳಿ ಸಹಾಯದಲ್ಲಿ ಸಮಗ್ರ ತೆಂಗು ಬೇಸಾಯ

3 ರಾಷ್ಟ್ರೀಯ ತೋಟಗಾರಿಕೆ ಮಿಷನ್

4 ಕೇಂದ್ರ ಪುರಸ್ಕೃತ ಸೂಕ್ಷ್ಮ ಹನಿ ನೀರಾವರಿ ಯೋಜನೆಗಳಿಗೆ ವಿನಿಯೋಗಿಸಲಾಗಿದೆ

ಯೋಜನೆಗಳಿಗೆ ಬಿಡುಗಡೆ ಮಾಡಲಾದ ಅನುದಾನದ, ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಇ) ಈ ಕಾರ್ಯಕ್ರಮಗಳನ್ನು ವಿಸ್ತರಿಸಲಾದ ಜಿಲ್ಲೆಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ ಒಟ್ಟು ಅನುದಾನ ರೂ 12614 42 ಲಕ್ಷಗಳು ಸಹಾಯಧನವಾಗಿರುತ್ತದೆ ಸಾಲದ ರೂಪದಲ್ಲಿ ಅನುದಾನ ಬಂದಿರುವುದಿಲ್ಲ

ಅನುಬಂಧ

2006–07ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಹಾಗೂ ವಿವಿಧ ಮೂಲಗಳಿಂದ ರಾಜ್ಯದಲ್ಲಿನ ತೋಟಗಾರಿಕೆ ಅಭಿವೃದ್ಧಿಗಾಗಿ ವಿನಿಯೋಗಿಸಲು ಬಿಡುಗಡೆಮಾಡಲಾದ ಅನುದಾನದ ಜಿಲ್ಲಾವಾರು ವಿವರಗಳು

(ರೂ ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆ / ಅನುಷ್ಟಾನಾಧಿಕಾರಿಗಳು	ರಾಷ್ಟ್ರೀಯ ತೋಟಗಾರಿಕೆ ಮಿಷನ್	ತಾಳೆ ಬೆಳೆ ಅಭಿವೃದ್ಧಿ ಯೋಜನೆ
1	ಬೆಂಗಳೂರು ನಗರ		
2	ಬೆಂಗಳೂರು (ಗ್ರಾ)	349 00	
3	ಚಿತ್ರದುರ್ಗ	330 00	
4	ಕೋಲಾರ	298 00	
5	ಶಿವಮೊಗ್ಗ	651 00	12 39
6	ತುಮಕೂರು	338 00	
7	ದಾವಣಗೆರೆ		1 81
8	ಮೈಸೂರು	134 00	22 92
9	ಚಿಕ್ಕಮಗಳೂರು	345 00	1 40
10	ದಕ್ಷಿಣ ಕನ್ನಡ	174 00	
11	ಹಾಸನ	315 00	
12	ಮಂಡ್ಯ		1 77
13	ಚಾಮರಾಜನಗರ		1 250
14	ಉಡುಪಿ	91 00	
15	ಬೆಳಗಾಂ	350 00	4 40
16	ಉತ್ತರ ಕನ್ನಡ	176 00	
17	ಬಾಗಲಕೋಟೆ	178 00	1 5
18	ಬಳ್ಳಾರಿ		2 16
19	ಬೀದರ್		
20	ಬಿಜಾಪುರ	305 00	1 75
21	ಕೊಡಗು	265 00	4 00

22	ಧಾರವಾಡ		
23	ಗದಗ್		1 9
24	ಗುಲ್ಬರ್ಗಾ	170 00	0 75
25	ಹಾವೇರಿ		1 40
26	ಕೊಪ್ಪಳ	196 00	9 12
27	ರಾಯಚೂರು		
28	ಅಪರನಿರ್ದೇಶಕರು ತಾಳೆಬೆಳೆ(ಬೆಂ)		257 33
29	ಕಾಯ್ದಿರಿಸಿದ ಮೊತ್ತ	3683 00	
	ಒಟ್ಟು	8348 00	325 85

ಕ್ರ ಸಂ	ಜಿಲ್ಲೆ / ಅನುಷ್ಠಾನಾಧಿಕಾರಿಗಳು	ತೆಂಗು ಅಭಿವೃದ್ಧಿ ಯೋಜನೆ	ಸೂಕ್ಷ್ಮ ಹನಿ ನೀರಾವರಿ	ಒಟ್ಟು
1	ಬೆಂಗಳೂರು ನಗರ	14 12	33 55	47 67
2	ಬೆಂಗಳೂರು (ಗ್ರಾ)	20 66	53 63	423 29
3	ಚಿತ್ರದುರ್ಗ	28 71	574 65	933 36
4	ಕೋಲಾರ	12 35	198 00	508 35
5	ಶಿವಮೊಗ್ಗ	18 65	90 56	772 60
6	ತುಮಕೂರು	48 65	171 36	558 01
7	ದಾವಣಗೆರೆ	19 50	508 84	530 15
8	ಮೈಸೂರು	20 96	43 63	221 51
9	ಚಿಕ್ಕಮಗಳೂರು	22 78	208 32	577 50
10	ದಕ್ಷಿಣ ಕನ್ನಡ	32 88	16 72	223 60
11	ಹಾಸನ	26 18	27 30	368 48
12	ಮಂಡ್ಯ	25 35	38 91	66 03
13	ಚಾಮರಾಜನಗರ	25 20	165 58	192 03
14	ಉಡುಪಿ	21 04	26 94	138 98
15	ಬೆಳಗಾಂ	6 13	134 97	495 50
16	ಉತ್ತರ ಕನ್ನಡ	13 27	56 74	246 01

17	ಬಾಗಲಕೋಟೆ	–	102 39	281 89
18	ಬಳ್ಳಾರಿ	–	165 16	167 32
19	ಬೀದರ್	–	84 66	84 66
20	ಬಿಜಾಪುರ	–	189 53	496 28
21	ಕೊಡಗು	–	44 62	313 62
22	ಧಾರವಾಡ	–	12 77	12 77
23	ಗದಗ್	–	55 02	56 92
24	ಗುಲ್ಬರ್ಗಾ	–	170 30	341 05
25	ಹಾವೇರಿ	–	206 28	207 68
26	ಕೊಪ್ಪಳ	–	163 22	368 34
27	ರಾಯಚೂರು	–	40 45	40 45
28	ಅಪರನಿರ್ದೇಶಕರು ತಾಳೆಬೆಳೆ (ಬೆಂ)	–		257 33
29	ಕಾಯ್ದಿರಿಸಿದ ಮೊತ್ತ			3683 00
	ಒಟ್ಟು	356 47	3584 10	12614 42

114 (228) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) 2006–07ನೇ ಸಾಲಿನಲ್ಲಿ ಈವರೆವಿಗೆ ಯಾವ ಯಾವ ವರ್ಗದ ರೈತರಿಗೆ ಬೀಜ ಮತ್ತು ಗೊಬ್ಬರಕ್ಕಾಗಿ ಸಹಾಯಧನ ಒದಗಿಸಲಾಗಿದೆ , ಇದರ ಪ್ರಯೋಜನವನ್ನು ಪಡೆದ ಫಲಾನುಭವಿಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ,

ಆ) ಈ ಕಾರ್ಯಕ್ರಮಕ್ಕಾಗಿ ಸರ್ಕಾರದಿಂದ ಒದಗಿಸಲಾದ ಒಟ್ಟು ಅನುದಾನವೆಷ್ಟು, ಆ ಪೈಕಿ ರೈತರಿಗೆ ವಿತರಿಸಲಾದ ಅನುದಾನವೆಷ್ಟು (ಜಿಲ್ಲಾವಾರು ಮಾಹಿತಿಯನ್ನು ನೀಡುವುದು),

ಇ) ಬೀಜ ಮತ್ತು ಗೊಬ್ಬರವನ್ನು ಯಾವ ಯಾವ ಸಂಸ್ಥೆಗಳಿಂದ ಪಡೆದು ವಿತರಿಸಲಾಗುವುದು ಹಾಗೂ ಸಂಸ್ಥೆಗಳನ್ನು ಆಯ್ಕೆ ಮಾಡುವಾಗ ಅನುಸರಿಸಲಾದ ಕ್ರಮವೇನು,

ಈ) ವಿತರಣೆಗೆ ಮುಂಚೆ ಬೀಜಗಳ ಗುಣಮಟ್ಟವನ್ನು ಯಾವ ರೀತಿ ಪ್ರಯೋಗಕ್ಕೆ ಒಳಪಡಿಸಲಾಗುವುದು ,

ಊ) ಕಳಪೆ ಗುಣಮಟ್ಟದ ಬೀಜ ವಿತರಣೆ ಆಗಿರುವುದಕ್ಕೆ ಸರ್ಕಾರದ ಗಮನಕ್ಕೆ ಬಂದಿದೆಯೇ ,

ಋ) ಬಂದಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ತೆಗೆದುಕೊಂಡ ಕ್ರಮವೇನು?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) 2006–07ನೇ ಸಾಲಿನಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇ 75ರ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸಲು ಸಹಾಯಧನ ಒದಗಿಸಲಾಗಿದೆ 21,22,069 ರೈತರು ಇದರ ಪ್ರಯೋಜನ ಪಡೆದಿರುತ್ತಾರೆ ಇದರ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ನಿಯಂತ್ರಿತ ಯೂರಿಯಾ ಮತ್ತು ಅನಿಯಂತ್ರಿತ ಡಿ ಎ ಪಿ, ಎಮ್ ಒ ಪಿ, ಎಸ್ ಎಸ್ ಪಿ ಮತ್ತು ಸಂಯುಕ್ತ ರಸಗೊಬ್ಬರಗಳಿಗೆ ಕೇಂದ್ರ ಸರ್ಕಾರದಿಂದ ರಿಯಾಯಿತಿ ನೀಡಲಾಗುತ್ತಿದೆ ರಾಜ್ಯ ಸರ್ಕಾರದಿಂದ ಯಾವುದೇ ತರಹದ ರಿಯಾಯಿತಿ ನೀಡಲಾಗುತ್ತಿಲ್ಲ ಕೇಂದ್ರ ಸರ್ಕಾರದ ಮಾನದಂಡ ಪ್ರಕಾರ ಸಬ್ಸಿಡಿಯನ್ನು ಎಲ್ಲಾ ವರ್ಗದ ರೈತರಿಗೆ ತಾರತಮ್ಯ ಇಲ್ಲದೇ ಒಂದೇ ಧರದಲ್ಲಿ ವಿತರಿಸಲಾಗುತ್ತಿದೆ

ಆ) ಪ್ರಸ್ತುತ ಸಾಲಿನಲ್ಲಿ ಇದುವರೆವಿಗೆ ರೂ 8700 00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಇದನ್ನು ಪೂರ್ಣವಾಗಿ ಬಿತ್ತನೆ ಬೀಜದ ರಿಯಾಯಿತಿಗೆ ಬಳಸಲಾಗಿದೆ

ಇದರ ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲೇ ನೀಡಲಾಗಿದೆ

ಇ) ಬಿತ್ತನೆ ಬೀಜದ ಮೂಲ ಮತ್ತು ಮಾರಾಟದ ದರವನ್ನು ನಿಗದಿಪಡಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದನುಸಾರ ಟೆಂಡರುಗಳನ್ನು ಕರೆದು, ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದೆ ರಸಗೊಬ್ಬರಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದಿಂದ ಯಾವುದೇ ತರಹದ ರಿಯಾಯಿತಿ ನೀಡಲಾಗುತ್ತಿಲ್ಲ ರೈತರು ಅಧಿಕೃತ ಮಾರಾಟಗಾರರಿಂದ ರಸಗೊಬ್ಬರವನ್ನು ನೇರವಾಗಿ ಖರೀದಿಸಬಹುದಾಗಿದೆ

ಈ) ಸರಬರಾಜು ಮಾಡುವ ಎಲ್ಲಾ ಬಿತ್ತನೆ ಬೀಜಗಳ ಗುಣಮಟ್ಟ ಬೀಜ ಅಧಿನಿಯಮ 1966ರನ್ವಯ ಇರಬೇಕೆಂದು ಕಡ್ಡಾಯ ಮಾಡಲಾಗಿದೆ ಇದನ್ನು ಖಾತರಿ ಪಡಿಸಿಕೊಳ್ಳಲು ಬೀಜ ಪರಿವೀಕ್ಷಕರು ರ್ಯಾಂಡಂ ಆಗಿ ಮಾದರಿಗಳನ್ನು ತೆಗೆದು ಬೀಜ ಪರೀಕ್ಷಾ ಕೇಂದ್ರಕ್ಕೆ ಕಳುಹಿಸಿ

ವಿಶ್ಲೇಷಣೆಗೊಳಪಡಿಸುವ ಮೂಲಕ ಗುಣಮಟ್ಟವನ್ನು ಖಾತರಿ ಮಾಡಿಕೊಳ್ಳಲಾಗುತ್ತಿದೆ

ಉ) ಹೌದು

ಊ) ಬೀಜ ಕಾನೂನುನಿನನ್ವಯ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತಿದೆ

ವಿಧಾನ ಸಭೆ ಪ್ರಶ್ನೆ ಸಂಖ್ಯೆ 228ಕ್ಕೆ ಅನುಬಂಧ

2006–07ರ ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣಾ ಪ್ರಗತಿ

(ಭೌತಿಕ – ಕ್ವಿಂಟಾಲುಗಳಲ್ಲಿ ಆರ್ಥಿಕ – ರೂ ಗಳಲ್ಲಿ)

ಕ್ರ. ಸಂ	ಜಿಲ್ಲೆ	ಮುಂಗಾರು		ಹಿಂಗಾರು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಬಾಗಲಕೋಟೆ	6175 65	30605442	4299 10	8758576
2	ಬೆಂಗಳೂರು (ಗ್ರಾ)	5316 42	6230951	0 00	0
3	ಬೆಂಗಳೂರು ನಗರ	912 85	1203013	0 00	0
4	ಬೆಳಗಾಂ	34075 76	74979801	5700 54	9762659
5	ಬಳ್ಳಾರಿ	17116 95	43388013	3548 56	6985589
6	ಬೀದರ್	18945 81	45836570	4301 70	6797281
7	ಬಿಜಾಪುರ	6036 87	45816812	8777 42	13427807
8	ಚಾಮರಾಜನಗರ	14905 71	23099894	285 00	269664
9	ಚಿಕ್ಕಮಗಳೂರು	4904 26	16998546	405 93	605049
10	ಚಿತ್ರದುರ್ಗ	13334 66	28406475	2132 49	3721799
11	ದಕ್ಷಿಣ ಕನ್ನಡ	295 05	292205	0 00	0
12	ದಾವಣಗೆರೆ	22174 48	65457050	339 08	1389465
13	ಧಾರವಾಡ	9855 99	28730830	4267 12	6744354
14	ಗದಗ್	5172 28	20199298	5757 13	12661140
15	ಗುಲ್ಬರ್ಗಾ	11647 65	63275770	8031 03	13099042
16	ಹಾಸನ	11439 27	25821471	375 57	545501

17	ಹಾವೇರಿ	24441 58	58524378	756 62	1267546
18	ಕೊಡಗು	1901 79	2689801	0 00	0
19	ಕೋಲಾರ	16875 31	20112511	27 58	345050
20	ಕೊಪ್ಪಳ	8965 75	36212547	2425 83	4153081
21	ಮಂಡ್ಯ	28044 08	25748260	0 00	0
22	ಮೈಸೂರು	25331 87	62771273	179 87	237911
23	ರಾಯಚೂರು	12060 23	54054283	6554 30	13736873
24	ಶಿವಮೊಗ್ಗ	24721 00	41243459	0 00	0
25	ತುಮಕೂರು	41042 37	40991649	51 75	67275
26	ಉಡುಪಿ	1788 71	1787572	0 00	0
27	ಉತ್ತರ ಕನ್ನಡ	5604 22	14439858	0 00	0
ಮಹಾಮೊತ್ತ		373086 57	878917732	58216 62	104575662

ಕ್ರ ಸಂ	ಜಿಲ್ಲೆ	ಒಟ್ಟು		ಫಲಾನುಭವಿಗಳ ಸಂಖ್ಯೆ		ಒಟ್ಟು
		ಬೌತಿಕ	ಆರ್ಥಿಕ	ಮುಂ ಗಾರು	ಹಿಂ ಗಾರು	
1	ಬಾಗಲಕೋಟೆ	10474 75	39364018	61053	19599	80652
2	ಬೆಂಗಳೂರು (ಗ್ರಾ)	5316 42	6230951	25045	0	25045
3	ಬೆಂಗಳೂರು ನಗರ	912 85	1203013	4407	0	4407
4	ಬೆಳಗಾಂ	39776 30	84742460	160525	30678	191203
5	ಬಳ್ಳಾರಿ	20665 51	50373602	84345	13733	98078
6	ಬೀದರ್	23247 51	52633851	99210	19984	119194
7	ಬಿಜಾಪುರ	14814 29	59244619	89047	32758	121805
8	ಚಾಮರಾಜ ನಗರ	15190 71	23369558	55998	1131	57129
9	ಚಿಕ್ಕಮಗಳೂರು	5310 19	17603595	32979	1649	34628
10	ಚಿತ್ರದುರ್ಗ	15467 15	32128274	68315	7291	75606

11	ದಕ್ಷಿಣ ಕನ್ನಡ	295 05	292205	770	0	770
12	ದಾವಣಗೆರೆ	22513 56	66846515	167130	4584	171714
13	ಧಾರವಾಡ	14123 11	35475184	50217	13778	63995
14	ಗದಗ್	10929 41	32860438	37594	32132	69726
15	ಗುಲ್ಬರ್ಗಾ	19678 68	76374812	98928	20792	119720
16	ಹಾಸನ	11814 84	26366972	88594	2242	90836
17	ಹಾವೇರಿ	25198 20	59791924	102735	7005	109740
18	ಕೊಡಗು	1901 79	2689801	4872	0	4872
19	ಕೋಲಾರ	16902 89	20457561	76651	447	77098
20	ಕೊಪ್ಪಳ	11391 58	40365628	84465	14939	99404
21	ಮಂಡ್ಯ	28044 08	25748260	69749	0	69749
22	ಮೈಸೂರು	25511 74	63009184	110420	957	111377
23	ರಾಯಚೂರು	18614 53	67791156	77833	21720	99553
24	ಶಿವಮೊಗ್ಗ	24721 00	41243459	97985	0	97985
25	ತುಮಕೂರು	41094 12	41058924	92540	803	93343
26	ಉಡುಪಿ	1788 71	1787572	4138	0	4138
27	ಉತ್ತರ ಕನ್ನಡ	5604 22	14439858	30302	0	30302
ಮಹಾಮೊತ್ತ		431303 19	983493394	1875847	346222	2122069

115 (245) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ

ಅ) ಟಾಸ್ಕ್ ಫೋರ್ಸ್ ಯೋಜನೆಯಲ್ಲಿ ಕುಡಿಯುವ ನೀರಿಗಾಗಿ ಎಷ್ಟು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಇದಕ್ಕೆ ಬಿಡುಗಡೆಯಾಗಿರುವ ಅನುದಾನವೆಷ್ಟು,

ಆ) ಕಾಮಗಾರಿ ಪೂರ್ಣಗೊಳ್ಳಲು ಅನುದಾನ ಬಿಡುಗಡೆಗಾಗಿ ಸರ್ಕಾರದ ಕ್ರಮವೇನು ,

ಇ) ಜಿಲ್ಲಾವಾರು ಎಷ್ಟು ಕಾಮಗಾರಿಗಳು ಮಂಜೂರಾಗಿದೆ ಹಾಗೂ ಇದಕ್ಕಾಗಿ ನಿಗದಿಪಡಿಸಿರುವ ಅನುದಾನವೆಷ್ಟು ,

ಈ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾದ ಕಾಮಗಾರಿಗಳೆಷ್ಟು ಹಾಗೂ ನಿಗದಿ ಪಡಿಸಿರುವ ಅನುದಾನವೆಷ್ಟು ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) ಟಾಸ್ಕ್‌ಫೋರ್ಸ್ ಅಡಿಯಲ್ಲಿ ಇದುವರೆವಿಗೂ ಒಟ್ಟು 7031 ಕುಡಿಯುವ ನೀರಿನ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ, ಇದಕ್ಕಾಗಿ 2006–07ರಲ್ಲಿ ಬಿಡುಗಡೆಯಾಗಿರುವ ಅನುದಾನ ರೂ 3162 00 ಲಕ್ಷಗಳು

ಆ) ಕಾಮಗಾರಿ ಪೂರ್ಣಗೊಳ್ಳಲು ರೂ 6310 28 ಲಕ್ಷ ಹೆಚ್ಚುವರಿ ಅನುದಾನ ಬೇಕಾಗಿದೆ

ಇ) ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ

ಈ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾದ ಒಟ್ಟು ಕಾಮಗಾರಿಗಳು–146, ನಿಗದಿಪಡಿಸಿರುವ ಅನುದಾನ – 15 617 ಲಕ್ಷ

ಶ್ರೀ ಧ್ರುವನಾರಾಯಣ ಆರ್ (ಸಂತೇಮಾರಳ್ಳಿ) ಶಾಸಕರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 245ಕ್ಕೆ ಲಗತ್ತು

ಅನುಬಂಧ

(ರೂ ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆಗಳ ಹೆಸರು	Task Force ಅಡಿಯಲ್ಲಿ					
		ಮಂಜೂರಾದ ಕಾಮಗಾರಿಗಳು			ಕೈಗೆತ್ತಿಕೊಳ್ಳಲಾದ ಕಾಮಗಾರಿಗಳು		
		PWS	MWS	BWS	PWS	MWS	BWS
1	2	3	4	5	6	7	8
1	ಬೆಂಗಳೂರು (ನಗರ)	106	120	526	106	120	526
2	ಬೆಂಗಳೂರು (ಗ್ರಾ)	40	196	468	34	131	468
3	ಕೋಲಾರ	47	81	37	46	81	37
4	ತುಮಕೂರು	87	1120	788	21	583	757
5	ದಾವಣಗೆರೆ	15	6	48	15	6	48
6	ಚಿತ್ರದುರ್ಗ	92	245	828	18	61	107
7	ಶಿವಮೊಗ್ಗ	16	30	90	16	27	78

8	ಮೈಸೂರು	117	40	84	24	10	28
9	ಮಂಡ್ಯ	112	113	330	134	91	330
10	ಚಾಮರಾಜನಗರ	89	401	500	36	129	216
11	ಹಾಸನ	30	263	338	6	26	77
12	ದಕ್ಷಿಣ ಕನ್ನಡ	36	21	76	30	21	76
13	ಉಡುಪಿ	15	3	20	15	3	20
14	ಕೊಡಗು	23	12	26	23	12	26
15	ಚಿಕ್ಕಮಗಳೂರು	33	99	51	33	99	51
16	ಬೆಳಗಾಂ	5	56	205	5	56	205
17	ಬಿಜಾಪುರ	0	279	1202	0	216	506
18	ಬಾಗಲಕೋಟೆ	4	70	334	4	70	334
19	ಧಾರವಾಡ	14	1	59	10	1	15
20	ಹಾವೇರಿ	129	87	263	0	1	263
21	ಗದಗ	16	60	11	7	37	11
22	ಕಾರವಾರ	10	4	55	10	4	54
23	ಗುಲ್ಬರ್ಗ	4	31	127	6	29	127
24	ಬೀದರ್	6	2	49	4	2	49
25	ಬಳ್ಳಾರಿ	14	21	25	14	21	25
26	ರಾಯಚೂರು	2	18	181	2	8	61
27	ಕೊಪ್ಪಳ	0	7	85	0	7	85
	ಒಟ್ಟು	1062	3386	6806	619	1832	4580
	ನಿವ್ವಳ	11254			7031		

ಕ್ರ ಸಂ	ಜಿಲ್ಲೆಗಳ ಹೆಸರು	Task Force ಅಡಿಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳು		
		PWS	MWS	BWS
1	2	9	10	11
1	ಬೆಂಗಳೂರು (ನಗರ)	106	120	526
2	ಬೆಂಗಳೂರು (ಗ್ರಾ)	30	43	419

3	ಕೋಲಾರ	38	71	37
4	ತುಮಕೂರು	3	59	760
5	ದಾವಣಗೆರೆ	15	6	48
6	ಚಿತ್ರದುರ್ಗ	8	17	107
7	ಶಿವಮೊಗ್ಗ	6	20	43
8	ಮೈಸೂರು	23	7	23
9	ಮಂಡ್ಯ	73	54	330
10	ಚಾಮರಾಜನಗರ	36	124	130
11	ಹಾಸನ	6	26	77
12	ದಕ್ಷಿಣ ಕನ್ನಡ	30	23	76
13	ಉಡುಪಿ	12	3	19
14	ಕೊಡಗು	23	12	26
15	ಚಿಕ್ಕಮಗಳೂರು	9	48	35
16	ಬೆಳಗಾಂ	5	35	159
17	ಬಿಜಾಮರ	0	216	506
18	ಬಾಗಲಕೋಟೆ	4	33	299
19	ಧಾರವಾಡ	1	0	15
20	ಹಾವೇರಿ	0	1	263
21	ಗದಗ	7	18	10
22	ಕಾರವಾರ	2	0	13
23	ಗುಲ್ಬರ್ಗ	0	8	97
24	ಬೀದರ್	4	2	49
25	ಬಳ್ಳಾರಿ	11	17	15
26	ರಾಯಚೂರು	2	4	57
27	ಕೊಪ್ಪಳ	0	7	85
	ಒಟ್ಟು	454	974	4224
	ನಿವ್ವಳ	5652		

ಕ್ರ ಸಂ	ಜಿಲ್ಲೆಗಳ ಹೆಸರು	ಕಾಮಗಾರಿ ಮಂಜೂರಾದ ಅಂದಾಜು ಮೊತ್ತ	ಬಿಡುಗಡೆಯಾದ ಹಣ	ವೆಚ್ಚವಾದ ಹಣ
1	2	12	13	14
1	ಬೆಂಗಳೂರು (ನಗರ)	812 02	812 02	812 02
2	ಬೆಂಗಳೂರು (ಗ್ರಾ)	662 99	77 32	77 32
3	ಕೋಲಾರ	137 77	137 77	119 59
4	ತುಮಕೂರು	2136 11	577 47	561 31
5	ದಾವಣಗೆರೆ	74 82	67 13	67 13
6	ಚಿತ್ರದುರ್ಗ	1390 63	44 50	44 50
7	ಶಿವಮೊಗ್ಗ	74 435	74 435	31 55
8	ಮೈಸೂರು	149 13	61 655	40 515
9	ಮಂಡ್ಯ	460 03	66 83	198 1
10	ಚಾಮರಾಜನಗರ	1208 84	34 61	34 61
11	ಹಾಸನ	493 13	59 39	59 39
12	ದಕ್ಷಿಣ ಕನ್ನಡ	124 77	59 4	59 4
13	ಉಡುಪಿ	44 55	44 55	39 1
14	ಕೊಡಗು	35 95	35 95	35 95
15	ಚಿಕ್ಕಮಗಳೂರು	204 3	118 15	59 1
16	ಬೆಳಗಾಂ	168 79	126 36	59 39
17	ಬಿಜಾಪುರ	207 58	207 58	171 23
18	ಬಾಗಲಕೋಟೆ	407 3	159 16	159 16
19	ಧಾರವಾಡ	37 125	0	0
20	ಹಾವೇರಿ	44 55	44 55	44 5
21	ಗದಗ	189 27	37 13	25 78
22	ಕಾರವಾರ	51 95	51 95	8 22
23	ಗುಲ್ಬರ್ಗ	76 78	45 555	26 938

24	ಬೀದರ್	44 55	44 55	23 56
25	ಬಳ್ಳಾರಿ	59 4	59 4	38 35
26	ರಾಯಚೂರು	138 38	44 55	38 01
27	ಕೊಪ್ಪಳ	37 13	37 13	37 13
	ಒಟ್ಟು	9472 28	3129 086	2871 84
	ನಿವ್ವಳ			

116 (246) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಮಂಜೂರಾಗಿರುವ ಕೃಷಿ ಸಹಾಯಕ, ಸಹಾಯಕ ಕೃಷಿ ಅಧಿಕಾರಿಗಳ ಹಾಗೂ ಕೃಷಿ ಅಧಿಕಾರಿಗಳ ಸಂಖ್ಯೆ ಎಷ್ಟು ,

ಆ) ಕೃಷಿ ಸಹಾಯಕ, ಸಹಾಯಕ ಕೃಷಿ ಅಧಿಕಾರಿ, ಕೃಷಿ ಅಧಿಕಾರಿ ಹುದ್ದೆಗಳು ಎಷ್ಟು ಖಾಲಿ ಇವೆ ,

ಇ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ

1) 2938 – ಕೃಷಿ ಸಹಾಯಕ

2) 979 – ಸಹಾಯಕ ಕೃಷಿ ಅಧಿಕಾರಿ

3) 1616 – ಕೃಷಿ ಅಧಿಕಾರಿ ಹುದ್ದೆಗಳು ಮಂಜೂರಾಗಿರುತ್ತದೆ

ಆ) 586 – ಕೃಷಿ ಸಹಾಯಕ, 366 ಸಹಾಯಕ ಕೃಷಿ ಅಧಿಕಾರಿ ಹಾಗೂ 1167 ಕೃಷಿ ಅಧಿಕಾರಿಗಳ ಹುದ್ದೆಗಳು ಖಾಲಿ ಇರುತ್ತವೆ

ಇ) 1) ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಕೃಷಿ ಸಹಾಯಕರ ಹುದ್ದೆಗೆ ನೇರ ನೇಮಕಾತಿ ಸ್ಥಗಿತಗೊಳಿಸಲಾಗಿದೆ

2) ಕೃಷಿ ಸಹಾಯಕ ಹುದ್ದೆಯಿಂದ ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಗೆ ಮುಂಬಡ್ತಿ ನೀಡಲು ಕರಮ ವಹಿಸಲಾಗುತ್ತಿದೆ

3) ಕೃಷಿ ಅಧಿಕಾರಿಗಳ ಖಾಲಿ ಇರುವ ಹುದ್ದೆಗಳ ಪೈಕಿ 687 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ

117 (247) ಶ್ರೀ ಧ್ರುವನಾರಾಯಣ ಆರ್ (ಸಂತೇಮಾರಳ್ಳಿ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಮೀನುಗಾರಿಕಾ ಇಲಾಖೆಯಲ್ಲಿ 2006–07ನೇ ಸಾಲಿನಲ್ಲಿ ವಸತಿಹೀನ ಮೀನುಗಾರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ ,

ಆ) ಹಾಗಿದ್ದಲ್ಲಿ, ಸರ್ಕಾರ ಮಂಜೂರು ಮಾಡಿರುವ ಮನೆಗಳೆಷ್ಟು ,

ಇ) ಬಿಡುಗಡೆಯಾಗಿರುವ ಅನುದಾನವೆಷ್ಟು (ಜಿಲ್ಲಾವಾರು ವಿವರ ನೀಡುವುದು) ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಹೌದು

ಆ) ಮತ್ಸ್ಯಾಶ್ರಯ 3ನೇ ಹಂತದಡಿ 2006–07ನೇ ಸಾಲಿಗೆ 2660 ಮನೆಗಳನ್ನು ಸರ್ಕಾರವು ಮಂಜೂರು ಮಡಿದೆ

ಇ) ಅನುದಾನ ಬಿಡುಗಡೆ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

118 (248) ಶ್ರೀ ಧ್ರುವನಾರಾಯಣ ಆರ್ (ಸಂತೇಮಾರಳ್ಳಿ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಕರ್ನಾಟಕ ರಾಜ್ಯ ಮೀನುಗಾರಿಕಾ ಮಹಾಮಂಡಳಿಯಿಂದ 2004–05, 2005–06, 2006–07ನೇ ಸಾಲುಗಳಲ್ಲಿ ಸರ್ಕಾರಕ್ಕೆ ಸಂದಾಯವಾದ ಹಣವೆಷ್ಟು ,

ಆ) ಈ ಮಹಾಮಂಡಳಿಯು ಸರ್ಕಾರ ಬೊಕ್ಕಸಕ್ಕೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕಾ ಮಹಾಮಂಡಳಿ (ನಿ), ಮೈಸೂರು ಇವರಿಂದ 2004–05, 2005–06 ಮತ್ತು 2006–07ನೇ ಸಾಲಿನಲ್ಲಿ ಕೆರೆಗಳ ಗುತ್ತಿಗೆ ಹಣದ ಬಾಬ್ತು ಕ್ರಮವಾಗಿ ರೂ 14 12 ಲಕ್ಷ,

ರೂ 28 46 ಲಕ್ಷ ಮತ್ತು ರೂ 21 98 ಲಕ್ಷಗಳನ್ನು ಮರು ಪಾವತಿಸಲಾಗಿದೆ ಸರ್ಕಾರಕ್ಕೆ ಪಾವತಿಸಬೇಕಾದ ಸಾಲ ಮತ್ತು ಬಡ್ಡಿ ಬಾಬ್ತು 2004–05, 2005–06 ಮತ್ತು 2006–07ನೇ ಸಾಲುಗಳಲ್ಲಿ ಮರುಪಾವತಿ ಮಾಡಿರುವುದಿಲ್ಲ

ಆ) ಈ ಮಹಾಮಂಡಳಿಯಿಂದ 31–03–2006ರ ಅಂತ್ಯಕ್ಕೆ ಸರ್ಕಾರಕ್ಕೆ ರೂ 54 32 ಲಕ್ಷ ಸಾಲ ಮತ್ತು ರೂ 159 23 ಲಕ್ಷ ಬಡ್ಡಿ ಮತ್ತು ದಂಡನಾ ಬಡ್ಡಿ ಒಟ್ಟು 213 55 ಲಕ್ಷಗಳು ಪಾವತಿಸಲು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೇ

ಇ) ಸರ್ಕಾರಕ್ಕೆ ಪಾವತಿಸಲು ಬಾಕಿ ಇರುವ ಸಾಲ ಮತ್ತು ಬಡ್ಡಿಯನ್ನು ಪಾವತಿಸುವಂತೆ ಮಹಾಮಂಡಳಿಗೆ ಸೂಚಿಸಲಾಗಿದೆ

119 (252) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಸರ್ಕಾರದಿಂದ ಅರ್ಹ ಫಲಾನುಭವಿಗಳಿಗೆ ತಾತ್ಕಾಲಿಕ ಪಡಿತರ ಚೀಟಿ ವಿತರಿಸಿ 6 ತಿಂಗಳು ಕಳೆದರೂ ಈವರೆಗೆ ನೀಡಿದ ತಾತ್ಕಾಲಿಕ ಪಡಿತರ ಚೀಟಿಯಲ್ಲಿರುವ ಕುಂದು ಕೊರತೆಗಳನ್ನು ಸರಿಪಡಿಸಿ ಖಾಯಂ ಪಡಿತರ ಚೀಟಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ, ಖಾಯಂ ಪಡಿತರ ಚೀಟಿಯನ್ನು ಯಾವಾಗ – ವಿತರಣೆ ಮಾಡಲಾಗುವುದು ,

ಇ) ಬಡತನ ರೇಖೆಯಿಂದ ಮೇಲಿರುವ ನಾಗರೀಕರ ಪಡಿತರ ಚೀಟಿಗೆ ಹಿಂದೆ ನೀಡಲಾಗುತ್ತಿದ್ದ ಸೀಮೆಎಣ್ಣೆ ಸೌಲಭ್ಯವನ್ನು ರದ್ದುಪಡಿಸಿದ್ದರಿಂದ ರಾತ್ರಿ ವೇಳೆಯಲ್ಲಿ ವಿದ್ಯುತ್ ಕಡಿತ ಹಾಗೂ ಇತರೆ ಕಾರಣಗಳಿಂದ ರಾತ್ರಿ ವೇಳೆ ವಿದ್ಯುತ್ ಇಲ್ಲದೇ ಇದ್ದಾಗ ಇಂತಹವರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದ್ದೆಯೇ ,

144 (229) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಾದ್ಯಂತ ಮುಜರಾಯಿ ಇಲಾಖೆಗೆ ಸೇರಿದ ಎಲ್ಲಾ ದೇವಸ್ಥಾನಗಳಲ್ಲಿರುವ ಅರ್ಚಕ ಹಾಗೂ ಇತರೇ ಸಿಬ್ಬಂದಿಗಳ ಒಟ್ಟು ಸಂಖ್ಯೆ ಎಷ್ಟು (ದೇವಸ್ಥಾನವಾರು, ಅರ್ಚಕರವಾರು ಹಾಗೂ ಸಿಬ್ಬಂದಿವಾರು ಮಾಹಿತಿ ನೀಡುವುದು) ,

ಆ) ಈ ದೇವಸ್ಥಾನಗಳಲ್ಲಿರುವ ಅರ್ಚಕರ ಹಾಗೂ ಸಿಬ್ಬಂದಿಗಳ ರಾಜ್ಯ ಸಂಘಟನೆಯವರು ಸರ್ಕಾರದ ಮುಂದೆ ಇಟ್ಟಿರುವ ಬೇಡಿಕೆಗಳೇನು ,

ಇ) ಈ ಬೇಡಿಕೆಗಳ ಪೈಕಿ ಈಗಾಗಲೇ ಈಡೇರಿಸಿರುವ ಬೇಡಿಕೆಗಳು ಯಾವುವು ,

ಈ) ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಯಾವ ಕ್ರಮವಹಿಸಿದೆ?

ಶ್ರೀ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಸಂಖ್ಯೆ 34194 ಈ ದೇವಸ್ಥಾನಗಳಲ್ಲಿರುವ, ಸಂಸ್ಥೆವಾರು ಅರ್ಚಕವಾರು ಹಾಗೂ ಇತರೆ ಸಿಬ್ಬಂದಿವಾರು ವಿವರಗಳು ತಕ್ಷಣದಲ್ಲಿ ಲಭ್ಯವಿಲ್ಲ ಅದನ್ನು ಕ್ರೂಢೀಕರಿಸಿ ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು

ಆ) ದಿನಾಂಕ 24 6 99ರಲ್ಲಿ ಅಖಿಲ ಭಾರತ ಹಿಂದು ದೇವಾಲಯಗಳ ಅರ್ಚಕರ, ಆಗಮಿಕರ, ಉಪಾಧಿವಂತರ ಒಕ್ಕೂಟದವರು ಅರ್ಚಕರ ಬೃಹತ್ ವಿಧಾನಸೌಧ ಚಲೋ ಸಂದರ್ಭದಲ್ಲಿ ಸರ್ಕಾರದ ಮುಂದೆ ಇಟ್ಟಿರುವ ಪ್ರಮುಖ ಬೇಡಿಕೆಗಳು ಕೆಳಕಂಡಂತೆ ಇದೆ –

1) ತಸ್ಧೀಕ್‌ನ್ನು ಹೆಚ್ಚಿಸುವುದು

2) ಏಕರೂಪಶಾಸನ ಜಾರಿಗೆ ತರುವುದು

3) ಗ್ರಾಮಗಳಲ್ಲಿ ಅರ್ಚಕರು ಮತ್ತು ಸಿಬ್ಬಂದಿಯವರಿಗೆ ಅಗುತ್ತಿರುವ ಕಿರುಕುಳಗಳಿಗೆ ಪೊಲೀಸ್ ರಕ್ಷಣೆ

4) ತಸ್ಧೀಕ್ ಅಂತಿಮಗೊಳಿಸದೇ ಇರುವ ಸಂಸ್ಥೆಗಳಿಗೆ ಕೂಡಲೇ ತಸ್ಧೀಕ್ ನಿಗಧಿಪಡಿಸುವುದು

5) ಭಾವಚಿತ್ರವುಳ್ಳ ಗುರುತು ಚೀಟಿಗಳನ್ನು ಅರ್ಚಕರಿಗೆ ಮತ್ತು ಸಿಬ್ಬಂದಿವರ್ಗದವರಿಗೆ ವಿತರಿಸುವುದು

6) ಮುಜರಾಯಿ ಇಲಾಖೆಯನ್ನು ಕಂದಾಯ ಇಲಾಖೆಯಿಂದ ಬೇರ್ಪಡಿಸುವುದು

7) ಸಂಭಾವನೆ ಮತ್ತು ತಸ್ಧೀಕ್ ಮೊತ್ತವನ್ನು ಸಂಬಂಧಿಸಿದವರಿಗೆ ಪಾವತಿಸಲು ಒಂದು ನಿಗಧಿತ ದಿನಾಂಕ ನಿಗಧಿಪಡಿಸಿ ಅರ್ಚಕರು ಮತ್ತು ಸಿಬ್ಬಂದಿವರ್ಗದವರು ಆನೇಕ ಬಾರಿ ಅಲೆಯುವುದನ್ನು ತಪ್ಪಿಸುವುದು

8) ದೇವಾಲಯಗಳ ವಿದ್ಯುಚ್ಛಕ್ತಿ ಹಣವನ್ನು ಮುಜರಾಯಿ ಇಲಾಖೆಯಿಂದಲೇ ಭರಿಸುವುದು

9) ಮುಜರಾಯಿ ಇಲಾಖೆಯಿಂದ ಜಿಲ್ಲೆಗೊಂದು ಆಗಮ ಪಾರಶಾಲೆ ತೆರೆಯುವುದು ಮತ್ತು ಆಗಮ ಪರೀಕ್ಷೆಯಲ್ಲಿ ಪಾಸಾಗದವರಿಗೆ ಮೂರು ವರ್ಷ ಕಾಲಾವಕಾಶ ನೀಡುವುದು

ಇ) ಅರ್ಚಕರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೈಗೊಂಡ ಕ್ರಮ ಕೆಳಕಂಡಂತೆ ಇದೆ

1) ವಾರ್ಷಿಕ ರೂ 6000 00ಗಳಿಗಿಂತ ಕಡಿಮೆ ತಸ್ಧೀಕ್ ಪಡೆಯುತ್ತಿರುವ ದೇವಾಲಯಗಳ ತಸ್ಧೀಕ್‌ನ್ನು ಸರ್ಕಾರದ ಆದೇಶ ಸಂಖ್ಯೆ ಕಂಇ 3 ಮುತಬ / 2003 ದಿನಾಂಕ 16 6 2006ರಲ್ಲಿ ರೂ 6000–00ಗಳಿಗೆ ಕಚ್ಚಿಸಲಾಗಿದೆ "ಮತ್ತು 2006–07ನೇ ಸಾಲಿನ ಆಯವ್ಯಯದಲ್ಲಿ ತಸ್ಧೀಕ್ ಪಾವತಿಗಾಗಿ ರೂ 21,24,48,000–00 ಗಳನ್ನು ಒದಗಿಸಿದೆ

2) ದಿ 1 5 2003 ರಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದರ್ಮದಾಯ ದತ್ತಿಗಳ ಅಧಿನಿಯಮ 1997ನ್ನು ಜಾರಿಗೆ ತರಲಾಯಿತು ಸದರಿ ಕಾಯ್ದೆಯನ್ನು ಕರ್ನಾಟಕ ರಾಜ್ಯ ಮಾನ್ಯ ಉಚ್ಚನ್ಯಾಯಾಲಯವು ದಿ 8 9 2006 ರಂದು ಅನೂರ್ಚಿತಗೊಳಿಸಿರುತ್ತದೆ ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ 8 9 2006ರ ತೀರ್ಪಿಗೆ ತಡೆಯಾಜ್ಞೆ ಕೋರಿ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್ ಎಲ್ ಪಿ ಯನ್ನು ದಾಖಲಿಸಿದ್ದು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಗೆ ಬರುವುದನ್ನು ನಿರೀಕ್ಷಿಸಲಾಗಿದೆ

3) ಪ್ರತಿ ತಾಲ್ಲೂಕಿನ ಮುಜರಾಯಿ ಅಧಿಕಾರಿಗಳು ಹಾಗೂ ತಾಲ್ಲೂಕು ದಂಡಾಧಿಕಾರಿಗಳು, ತಹಶೀಲ್ದಾರ್ ರವರಾಗಿದ್ದು, ನಿರ್ದಿಷ್ಟ

ದೂರುಗಳು ಬಂದಲ್ಲಿ ದೇವಾಲಯದ ಆಸ್ತಿ ಮತ್ತು ಅರ್ಚಕರುಗಳಿಗೆ ರಕ್ಷಣೆ ಒದಗಿಸಲು ಕ್ರಮ ಜರುಗಿಸಲಾಗುತ್ತಿದೆ

4) ಇನಾಂ ಜಮೀನುಗಳನ್ನು ಹೊಂದಿದ ಸಂಸ್ಥೆಗಳಿಗೆ ಈಗಾಗಲೇ ಶೇಕಡಾ 99 ರಷ್ಟು ಸಂಸ್ಥೆಗಳಿಗೆ ತಸ್ಫೀಕ್ ನಿಗಧಿ ಪಡಿಸಲಾಗಿದೆ ವಿವಾದವಿರುವ ಪ್ರಕರಣಗಳು ಮಾತ್ರ ತಸ್ಫೀಕ್ ನಿಗಧಿಗೆ ಬಾಕಿ ಇರುತ್ತದೆ ಅರ್ಚಕರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಚರ್ಚಿಸುವ ಸಲುವಾಗಿ ಕೇಂದ್ರ ಕಛೇರಿಯಲ್ಲಿ ಕರೆದಿದ್ದ ಸಭೆಯಲ್ಲಿ ಗ್ರಾಮೀಣಪ್ರದೇಶದ ಸಂಸ್ಥೆಗಳಿಗೆ ಅಂತಿಮ ತಸ್ಫೀಕ್ ನಿಗಧಿಪಡಿಸಲು ಬಾಕಿ ಇರುವುದು ಸಭೆಯ ಗಮನಕ್ಕೆ ಬಂದಾಗ ಈ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ತಿಳುವಳಿಕೆ ನೀಡಿ, ಬಾಕಿ ಇರುವ ಸಂಸ್ಥೆಗಳಿಗೆ ಕೂಡಲೇ ಅಂತಿಮ ತಸ್ಫೀಕ್ ನಿಗದಿ ಪಡಿಸಲು ಸೂಚನೆಗಳನ್ನು ನೀಡಲಾಗಿರುತ್ತದೆ

5) ಇಲಾಖಾ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅರ್ಚಕರು ಮತ್ತು ಇತರೆ ಸಿಬ್ಬಂದಿಯವರುಗಳಿಗೆ ಬಾವಚಿತ್ರ ಮತ್ತು ವಿಳಾಸವನ್ನು ಒಳಗೊಂಡಂತೆ ಗುರುತಿನ ಚೀಟಿಯನ್ನು ಆಯಾ ದೇವಾಲಯಗಳ ನಿಧಿಯಿಂದ ವೆಚ್ಚಗಳನ್ನು ಭರಿಸಿ ನೀಡಲು ಈ ಕಛೇರಿ ಸುತ್ತೋಲೆ ಸಂಖ್ಯೆ ಎಡಿಎಂlಸಿಆರ್ 141 93–94 ದಿ 25 2 2000 ರಲ್ಲಿ ಮಂಜೂರಾತಿ ನೀಡಲಾಗಿರುತ್ತದೆ

6) ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಲಾಗುತ್ತಿದೆ

7) ಇಲಾಖಾ ವ್ಯಾಪ್ತಿಗೆ ಒಳಪಟ್ಟ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕಾದಿ ನೌಕರರಿಗೆ ಪಾವತಿಸಬೇಕಾದ ವೇತನ ಮತ್ತು ಇತರೆ ಪಾವತಿಗಳನ್ನು ಯಾವುದೇ ವಿಳಂಬಕ್ಕೆ ಅವಕಾಶ ನೀಡದೆ ಪಾವತಿಸಲು ಈಗಾಗಲೇ ಹಲವಾರು ಸುತ್ತೋಲೆಗಳ ಮೂಲಕ ಸ್ಥಳೀಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ವಿಳಂಬವಾಗುತ್ತಿರುವ ಬಗ್ಗೆ ನಿರ್ಧಿಷ್ಟ ದೂರುಗಳು ಕೇಂದ್ರ ಕಛೇರಿಗೆ ಬಂದ ಸಂದರ್ಭಗಳಲ್ಲಿ ಅವುಗಳಿಗೆ ಕೂಡಲೇ ಸ್ಪಂಧಿಸಿ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ತಹಸೀಲ್ದಾರರುಗಳಿಗೆ ಕಟ್ಟುನಿಟ್ಟಾದ ಸೂಚನೆಗಳು ನೀಡಲಾಗುತ್ತಿದೆ

8) ದೇವಾಲಯಗಳ ವಿದ್ಯುಚ್ಚಕ್ತಿ ವೆಚ್ಚವನ್ನು ಆಯಾಯ ದೇವಾಲಯಗಳ ನಿಧಿಯಿಂದ ಅಥವಾ ಭಕ್ತಾಧಿಗಳಿಂದ ಸಹಕಾರದಿಂದ ಭರಿಸುತ್ತಿದ್ದು ಇಲಾಖಾ ವತಿಯಿಂದ ಭರಿಸಲು ಅವಕಾಶವಿರುವುದಿಲ್ಲ

9) ಪ್ರಸ್ತುತ ಇಲಾಖಾ ವ್ಯಾಪ್ತಿಯಲ್ಲಿ ಸರ್ಕಾರಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಮತ್ತು ಮೇಲುಕೋಟೆ ಸಂಸ್ಕೃತ ಕಾಲೇಜಿನಲ್ಲಿ ಆಗಮ ಶಿಕ್ಷಣ ನೀಡಲಾಗುತ್ತಿದೆ ಅಲ್ಲದೆ ರಾಜ್ಯದಲ್ಲಿ ಒಟ್ಟು 27 ಖಾಸಗಿ ಸಂಸ್ಥೆಗಳಲ್ಲಿ ಆಗಮ ಶಿಕ್ಷಣ ನೀಡಲು ಮಾನ್ಯತೆ ನೀಡಲಾಗಿದೆ ಆಸಕ್ತಿಯುಳ್ಳವರು ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದಾಗಿದೆ

ಈ) ಪ್ರಶ್ನೆ 3ಕ್ಕೆ ಉತ್ತರಿಸಿದಂತೆ

145 (230) ಶ್ರೀ ಶಂಕಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಮೈಸೂರು ನಗರದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳು ಹಾಗೂ ಛತ್ರಗಳೆಷ್ಟು (ಆಸ್ತಿಗಳೊಂದಿಗೆ ವಿವರ ನೀಡುವುದು),

ಆ) ದೇವಸ್ಥಾನ ಮತ್ತು ಛತ್ರಗಳ ಕಟ್ಟಡಗಳ ವಿಸ್ತೀರ್ಣ, ಆಸ್ತಿಗಳ ವಿವರಗಳೇನು ,

ಇ) ದೇವಸ್ಥಾನಗಳ ಮತ್ತು ಛತ್ರಗಳ ಜೀರ್ಣೋದ್ಧಾರ ಆಸ್ತಿಗಳ ರಕ್ಷಣೆಗೆ ಹಾಗೂ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ,

ಈ) ಇಲ್ಲದಿದ್ದಲ್ಲಿ, ಕ್ರಮ ಕೈಗೊಳ್ಳಲಾಗುವುದೇ , ಇದಕ್ಕಾಗಿರುವ ಯೋಜನಾ ವೆಚ್ಚವೆಷ್ಟು (ವಿವರ ನೀಡುವುದು) ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಮೈಸೂರು ನಗರದಲ್ಲಿ ಶ್ರೀ ಚಾಮುಂಡೇಶ್ವರಿ ದೇವಾಲಯ ಹಾಗೂ ಇದಕ್ಕೆ ಸೇರಿದ 22 ಅರಮನೆಗೆ ಸೇರಿದ ಮುಜರಾಯಿ ಸಂಸ್ಥೆಗಳೂ ಸೇರಿದಂತೆ ಒಟ್ಟು 58 ದೇವಾಲಯಗಳು ಇರುತ್ತವೆ

ವಿವರ ಅನುಬಂಧ–1, ಮತ್ತು 11 ರಲ್ಲಿ ಲಗತ್ತಿಸಿದೆ

ಮೈಸೂರು ನಗರದಲ್ಲಿ ಈ ಕೆಳಕಂಡಂತೆ 4 ಛತ್ರಗಳು ಇರುತ್ತವೆ

1) ಶ್ರೀ ನಂಜರಾಜ ಬಹದ್ದೂರ್ ಛತ್ರ – ವಿನೋಬ ರಸ್ತೆ, ಮೈಸೂರು

2) ಶ್ರೀ ಬೊಮ್ಮಯ್ಯ ಛತ್ರ – ಹಳೇ ಸಂತೇಪೇಟೆ, ಮೈಸೂರು

3) ಶ್ರೀ ಚಿಕ್ಕಮುನಿಸ್ವಾಮಿ ಛತ್ರ – ಅಶೋಕ ರಸ್ತೆ, ಮೈಸೂರು

4) ಶ್ರೀ ಮನ್ ಮಹಾರಾಜ ಛತ್ರ – ಮೈಸೂರು

ಆ) 1) ಅರಮನೆ ಮುಜರಾಯಿ ಸಂಸ್ಥೆಗಳಿಗೆ ಸೇರಿದಂತೆ 23 ಸಂಸ್ಥೆಗಳ ಆಸ್ತಿಗಳ ಪಟ್ಟಿ ಅನುಬಂಧ–111 ರಲ್ಲಿ ಲಗತ್ತಿಸಿದೆ

2) ನಗರದ 35 ದೇವಾಲಯಗಳಲ್ಲಿ ಈ ಕೆಳಕಂಡ ದೇವಸ್ಥಾನಗಳಿಗೆ / ಛತ್ರಗಳಿಗೆ ಮಾತ್ರ ಆಸ್ತಿ ಇರುತ್ತವೆ

ಕ್ರ ಸಂ	ವಿವರ	ಚ ಮಿ ಗಳಲ್ಲಿ
1	ಶ್ರೀ ಪ್ರಸನ್ನ ನಂಜುಂಡೇಶ್ವರ ದೇವಸ್ಥಾನ, ಹಳೇ ಸಂತೇಪೇಟೆ, ಮೈಸೂರು	30 ಅಂಗಡಿ ಮಳಿಗೆಗಳು
2	ಶ್ರೀ ಪಂಚಮುಖಿ ಅಂಜನೇಯ ದೇವಸ್ಥಾನ, ಇರ್ವಿನ್ ರಸ್ತೆ, ಮೈಸೂರು	2 ಅಂಗಡಿ ಮಳಿಗೆಗಳು
3	ಶ್ರೀ ಬೊಮ್ಮಯ್ಯ ಛತ್ರ, ಹಳೇ ಸಂತೇಪೇಟೆ	4 ಅಂಗಡಿ ಮಳಿಗೆಗಳು
4	ಶ್ರೀ ನಂಜರಾಜ ಬಹದ್ದೂರ್ ಛತ್ರ, ವಿನೋಬ ರಸ್ತೆ	ಛತ್ರದ ಒಟ್ಟು ವಿಸ್ತೀರ್ಣ 31,937 ಚ ಮೀ

ಛತ್ರದ ಒಟ್ಟು ವಿಸ್ತೀರ್ಣ – 32,287 ಚದರ ಮೀಟರ್

ಕ್ರ ಸಂ	ವಿವರ	ಚ ಮೀ ಗಳಲ್ಲಿ
1	ಛತ್ರದ ಕಟ್ಟಡದ ವಿಸ್ತೀರ್ಣ	15,275
2	ಬೆಗ್ಗರ್ಸ್ ಹೌಸ್ ಕಟ್ಟಡದ ವಿಸ್ತೀರ್ಣ	3,200
3	ದನದ ಕೊಟ್ಟಿಗೆ	450
4	ಗುತ್ತಿಗೆಗೆ ನೀಡಿರುವ ಜಾಗದ ವಿಸ್ತೀರ್ಣ	9,504
5	ಖಾಲಿ ಇರುವ ವಿಸ್ತೀರ್ಣ	3,508
	ಒಟ್ಟು	31,937

ಇ) 1) ದೇವಸ್ಥಾನದ ಆಸ್ತಿ ಸಂರಕ್ಷಣೆಗೆ ಸಂಬಂಧಿಸಿದಂತೆ ಆಸ್ತಿಗಳನ್ನು ಸರ್ವೆ ಮಾಡಿಸಿ, ತಂತಿ ಬೇಲಿ ನಿರ್ಮಿಸುವ ಬಗ್ಗೆ ಕ್ರಮ ಜರುಗಿಸಲಾಗುತ್ತಿದೆ

2) ನಂಜರಾಜ ಬಹದ್ದೂರ್ ಛತ್ರದ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಮಾಸ್ಟರ್ ಪ್ಲಾನ್ ಯೋಜನೆಯನ್ನು ರೂಪಿಸಲಾಗುತ್ತಿದೆ

3) ಮೈಸೂರು ಮಹಾರಾಜ ಛತ್ರವನ್ನು ಕೆಡವಿ, ಹೊಸದಾಗಿ ವಾಣಿಜ್ಯ ಮಳಿಗೆಯನ್ನು ನಿರ್ಮಿಸಲಾಗಿದೆ

4) ದಿವಾನ್ ಪೂರ್ಣಯ್ಯನವರ ಕಲ್ಯಾಣ ಮಂಟಪವನ್ನು ಹೊಸದಾಗಿ ನಿರ್ಮಿಸುವ ಕಾಮಗಾರಿಯು ಅಂತಿಮ ಹಂತದಲ್ಲಿರುತ್ತದೆ

5) ಚಿಕ್ಕಮುನಿಸ್ವಾಮಿ ಛತ್ರವು ಶಿಥಿಲಾವಸ್ಥೆಯಲ್ಲಿದ್ದು, ರಾಜ್ಯ ಉಚ್ಚನ್ಯಾಯಾಲಯವು ಈ ಕಟ್ಟಡವನ್ನು ಕೆಡವಲು ಆದೇಶಿಸಿರುತ್ತದೆ ಈ ಕಟ್ಟಡದಲ್ಲಿ ಬಾಡಿಗೆಗೆ ಇರುವವರನ್ನು ಖಾಲಿ ಮಾಡಿಸುವ ಬಗ್ಗೆ ಪಿ ಪಿ ಎ ಕಾಯ್ದೆ ಪ್ರಕಾರ ಕ್ರಮ ಜರುಗಿಸಲಾಗುತ್ತಿದೆ

ಮೈಸೂರು ನಗರ ಕಾವೇರಿ ಶಾಖೆ ಎದುರು ಇರುವ ಮಳಲವಾಡಿ ಶ್ರೀ ಮರುಳೇಶ್ವರ ದೇವಾಲಯವನ್ನು ಹಾಗೂ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಾಲಯದ ಜೀರ್ಣೋದ್ಧಾರ ಕಾಮಗಾರಿಯನ್ನು ದಾನಿಗಳ ವತಿಯಿಂದ ಕೈಗೊಳ್ಳಲಾಗುತ್ತಿದೆ ಹಾಗೂ ಮೈಸೂರು ಹೆಬ್ಬಾಳು ಬಡಾವಣೆಯ ಶ್ರೀ ಲಕ್ಷ್ಮೀಕಾಂತ ದೇವಾಲಯದ ಜೀರ್ಣೋದ್ಧಾರಕ್ಕೆ ಸರ್ಕಾರದಿಂದ ಸಹಾಯಧನ ಮಂಜೂರಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ

ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಇದಕ್ಕೆ ಸೇರಿದ ಅರಮನೆ ಮುಜರಾಯಿ ಸಂಸ್ಥೆಗಳ ಆಸ್ತಿಗಳ ಸಂರಕ್ಷಣೆಯನ್ನು ಅಭಿವೃದ್ಧಿ ಜೀರ್ಣೋದ್ಧಾರ ಕಾಮಗಾರಿಗಳನ್ನು ಅರಮನೆ ಮುಜರಾಯಿ ಸಂಸ್ಥೆಗಳ ನಿಧಿಯಿಂದ ನಿರ್ವಹಿಸಲಾಗುತ್ತಿದೆ

ಈ) ಅರಮನೆ ಮುಜರಾಯಿ ಸಂಸ್ಥೆಗಳ ಜೀರ್ಣೋದ್ಧಾರ ಕಾಮಗಾರಿಗಳನ್ನು ಅರಮನೆ ಮುಜರಾಯಿ ಸಂಸ್ಥೆಗಳ ನಿಧಿಯಿಂದ ಕೈಗೊಳ್ಳಲಾಗುತ್ತದೆ ಮೈಸೂರು ನಗರದ ಇತರೆ ಮುಜರಾಯಿ ಸಂಸ್ಥೆಗಳ ಜೀರ್ಣೋದ್ಧಾರ ಅಭಿವೃದ್ಧಿ ಕಾಮಗಾರಿಯನ್ನು ದಾನಿಗಳ ವತಿಯಿಂದ / ಸರ್ಕಾರದ ವತಿಯಿಂದ ಕೈಗೊಳ್ಳಲಾಗುತ್ತಿದ್ದು, ಈ ಬಗ್ಗೆ ಪ್ರತ್ಯೇಕವಾಗಿ ಯಾವುದೇ ಯೋಜನಾ ವೆಚ್ಚವನ್ನು ಅಳವಡಿಸಿರುವುದಿಲ್ಲ

ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸೇರಿದ ಹಾಗೂ ಅರಮನೆ ಸಂಸ್ಥೆಗಳ ವಿವರ

ಅನುಬಂಧ–1

I) 1) ಶ್ರೀ ಚಾಮುಂಡೇಶ್ವರಿ ದೇವಾಲಯ

2) ಶ್ರೀ ಮಹಾಲಿಂಗೇಶ್ವರ ದೇವಾಲಯ

3) ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯ
4) ಶ್ರೀ ಜ್ವಾಲಾ ತ್ರಿಪುರ ಸುಂದರಿ ದೇವಾಲಯ

ಅರಮನೆ ಮುಜರಾಯಿ ಸಂಸ್ಥೆಗಳ ವಿವರ

II) 1) ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ
2) ಶ್ರೀ ಲಕ್ಷ್ಮೀರಮಣ ಸ್ವಾಮಿ ದೇವಾಲಯ
3) ಶ್ರೀ ಶ್ವೇತವರಹಾಸ್ವಾಮಿ ದೇವಾಲಯ
4) ಶ್ರೀ ಬಿಲ್ಲೆ ವೆಂಕರಮಣಸ್ವಾಮಿ ದೇವಾಲಯ
5) ಶ್ರೀ ಪ್ರಾಣೇಶ್ವರಸ್ವಾಮಿ ದೇವಾಲಯ
6) ಶ್ರೀ ಕೋಡಿ ಸೋಮೇಶ್ವರಸ್ವಾಮಿ ದೇವಾಲಯ
7) ಶ್ರೀ ಗಾಯಿತ್ರಿ ದೇವಾಲಯ
8) ಶ್ರೀ ಭುವನೇಶ್ವರಿ ದೇವಾಲಯ
9) ಶ್ರೀ ಕಾಮಕಾಮೇಶ್ವರಿ ದೇವಾಲಯ
10) ಶ್ರೀ ಉತ್ತರ ಬಾಗಿಲು ಆಂಜನೇಯ ದೇವಾಲಯ
11) ಶ್ರೀ ವಿನಾಯಕ ದೇವಾಲಯ
12) ಶ್ರೀ ಚಂದ್ರಮೌಳೇಶ್ವರ ದೇವಾಲಯ
13) ಶ್ರೀ ಸಂಜೀವ ಆಂಜನೇಯಸ್ವಾಮಿ ದೇವಾಲಯ
14) ಪಶ್ಚಿಮ ಬಾಗಿಲು ಶ್ರೀ ಗಣಪತಿ ದೇವಾಲಯ
15) ದಕ್ಷಿಣ ಬಾಗಿಲು ಶ್ರೀ ಆಂಜನೇಯಸ್ವಾಮಿ ದೇವಾಲಯ
16) ಶ್ರೀ ವಿರೋಭ ದೇವಾಲಯ
17) ಶ್ರೀ ಗಣಪತಿ ದೇವಾಲಯ (ದೇವಿ ರಮಣ್ಣಿ ಅಗ್ರಹರ)
18) ಶ್ರೀ ಭೈರವೇಶ್ವರ ದೇವಾಲಯ
19) ಶ್ರೀ ಪಾದದ ಗುಡಿ

ನಗರದ ಇತರೆ ಅರಮನೆ ಮುಜರಾಯಿ ಸಂಸ್ಥೆಗಳ ವಿವರ

ಅನುಬಂಧ–2

1) ಪ್ರಸನ್ನ ನಂಜುಂಡೇಶ್ವರ, ಹಳೇ ಸಂತೇಪೇಟೆ, ಮೈಸೂರು
2) ಪ್ರಸನ್ನ ವೆಂಕಟರಮಣ ಬಿಂಡಿಕೇರಿ, ಮೈಸೂರು
3) ಮಹದೇಶ್ವರ ದೇವಸ್ಥಾನ, ಅಶೋಕ ರಸ್ತೆ, ಮೈಸೂರು
4) ಪಂಚಮುಖಿ ಆಂಜನೇಯಸ್ವಾಮಿ ಇಡ್ವಿನ್ ರಸ್ತೆ, ಮೈಸೂರು
5) ಆಂಜನೇಯಸ್ವಾಮಿ ಮಾನಂದವಾಡಿ ರಸ್ತೆ, ಮೈಸೂರು

6) ಚಮ್ಮನಕಟ್ಟಿ ಬಸವೇಶ್ವರ, ರಾಮಾನುಜ ರಸ್ತೆ, ಮೈಸೂರು
7) ಶಾಂತೇಶ್ವರ ದೇವಸ್ಥಾನ ನ್ಯೂ ಸಯ್ಯಾಬಿರಾವ್ ರಸ್ತೆ, ಮೈಸೂರು
8) ಕೋದಂಡರಾಮದೇವರು, ದೊಡ್ಡಕೆರೆ
9) ವಿದ್ಯಾಗಣಪತಿ, ಮಹಾರಾಜ ಸಂಸ್ಕೃತ ಕಾಲೇಜ್ ಆವರಣ, ಮೈಸೂರು
10) ಕೋದಂಡರಾಮ, ನಜರ್‌ಬಾದ್, ಮೈಸೂರು
11) ಸುಬ್ಬರಾಯ ಛಾರಿಟಿ ವೆಂಕಟರಮಣ, ರಮಾವಿಲಾಸ್ ರಸ್ತೆ, ಮೈಸೂರು
12) ಶಂಕರನಾರಾಯಣ ಮೈಸೂರು
13) ಶಿವಲಿಂಗೇಶ್ವರ ದೇವಸ್ಥಾನ, ಕಾಮಟಗೇರಿ
14) ಮರಳೇಶ್ವರ ದೇವಸ್ಥಾನ, ಮಳಲವಾಡಿ
15) ಮಾರಮ್ಮ ಹೆಬ್ಬಾಳು
16) ಮಾರಮ್ಮ ಹೂಟಗಳ್ಳಿ
17) ನವಸಾರ ಆಂಜನೇಯ ಕೆಸರೆ
18) ಮಾರಮ್ಮ ಬೋಗಾದಿ
19) ಆಂಜನೇಯ, ಈರನಗೆರೆ
20) ಬಸವೇಶ್ವರ ಬಂಡಿಪಾಳ್ಯ
21) ಬಸವೇಶ್ವರ ಪಡುವಾರಹಳ್ಳಿ
22) ಮಾರಮ್ಮ ದಟ್ಟಗಳ್ಳಿ
23) ಬಸವೇಶ್ವರ ದಡ್ಡಗಳ್ಳಿ
24) ಸೋಮೇಶ್ವರ ಹೆಬ್ಬಾಳು
25) ಹುಲಿಯಮ್ಮ, ಕ್ಯಾತಮಾರನಹಳ್ಳಿ
26) ಬಸವೇಶ್ವರ, ಕೆಸರೆ
27) ಮಾರಮ್ಮ, ಕೆಸರೆ
28) ಮಾರಮ್ಮ, ಈರನಗೆರೆ
29) ಮಹಾಲಿಂಗೇಶ್ವರ, ಮೇಟಗಳ್ಳಿ
30) ಮಾರಮ್ಮ, ಮಳಲವಾಡಿ
31) ಮಾರಮ್ಮ, ಮೇಟಗಳ್ಳಿ

32) ವೆಂಕಟೇಶ್ವರ, ಕೆಸರೆ
33) ವೆಂಕಟರಮಣ, ಮೇಟಗಳ್ಳಿ
34) ಲಕ್ಷ್ಮೀಕಾಂತ ಹೆಬ್ಬಾಳು
35) ಸಿದ್ದಪ್ಪಾಜಿ, ಮೇಟಗಳ್ಳಿ

ಅನುಬಂಧ–3

ಕ್ರ ಸಂ	ವಿವರ	ತರಹ	ಮಾದರಿ	ವಿಸ್ತೀರ್ಣ (ಮೀಟರ್ ಗಳಲ್ಲಿ)
1	ಕಲ್ಲಿನ ಮಂಟಪ	ಮಂಟಪ	ಕಲ್ಲುತಾರಸಿ	10 00 x 7 70
2	ರಾಗರಾಗಿಣಿ ಮಂಟಪ	ಮಂಟಪ	ಆರ್ ಸಿ ಸಿ	6 90 x 6 90
3	ರಥದ ಮನೆ	ಮನೆ	ಮಂ ಹೆಂಚು	12 x 6 90
4	ಶ್ರೀ ಚಾಮುಂಡೇಶ್ವರಿ ದೇವಸ್ಥಾನ	ಕಛೇರಿ ಭಾಗ	ಆರ್ ಸಿ ಸಿ	10 40 x 11 00
5	ಭಸವೇಶ್ವರ ಮಹದೇಶ್ವರ ದೇವಸ್ಥಾನ	ದೇವಸ್ಥಾನ	ಕಲ್ಲುಛಾವಣಿ ಆರ್ ಸಿ ಸಿ	6 60 x 8 0
6	ಶ್ರೀ ನಾರಾಯಣಸ್ವಾಮಿ ದೇವಸ್ಥಾನ	ದೇವಸ್ಥಾನ	ಮದ್ರಾಸ ಆರ್ ಸಿ ಸಿ	42 60 x 28 50
7	ಶ್ರೀ ಮಹಾಬಲೇಶ್ವರ ದೇವಸ್ಥಾನ	ದೇವಸ್ಥಾನ	ಮದ್ರಾಸ್ ಆರ್ ಸಿ ಸಿ	124 80 x 84 20
8	ಶ್ರೀ ಚಾಮುಂಡೇಶ್ವರಿ ಹಾಗೂ ಮಹಾಭಲೇಶ್ವರ ದೇವಸ್ಥಾನದ ಮಧ್ಯದ ಖಾಲಿ ಜಾಗ	ನಿವೇಶನ	ಖಾಲಿ ಜಾಗ	

ಕ್ರ ಸಂ	ವಿವರ	ತರಹ	ಮಾದರಿ	ವಿಸ್ತೀರ್ಣ (ಮೀಟರ್ ಗಳಲ್ಲಿ)
9	ದೇವಸ್ಥಾನದ ವಾಹನದ ಮನೆ	ಮನೆ	ಆರ್ ಸಿ ಸಿ	14 10 x 9 6
10	ದೇವಸ್ಥಾನದ ಖಾಲಿ ಜಾಗ	ನಿವೇಶನ	ಖಾಲಿಜಾಗ	– ( )
11	ಮಹಾಬಲೇಶ್ವರ ದೇವಸ್ಥಾನದ ರಥದ ಮನೆ ಹಾಗೂ ಮುಂದಿನ ಜಾಗ	ದೇವಸ್ಥಾನ	ಮಂಗಳೂರು ಹೆಂಚು	–
12	ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ವಾಹನದ ಮನೆ	ಮನೆ	ಆರ್ ಸಿ ಸಿ	–
13	ಶ್ರೀ ಚಾಮುಂಡೇಶ್ವರಿ ದೇವಸ್ಥಾನ	ದೇವಸ್ಥಾನ	ಮದ್ರಾಸ ತಾರಸಿ	–
14	ದೇವಸ್ಥಾನದ ಸಾರ್ವಜನಿಕ ಶೌಚಾಲಯ	ಮನೆ	ಆರ್ ಸಿ ಸಿ	15 60 x 3 20
15	–ಡಿಟೋ– ಚಾಮುಂಡಿಬೆಟ್ಟದ ಸಾರ್ವಜನಿಕ ಹಾಸ್ಟೆಲ್ ಮುಂಭಾಗದಲ್ಲಿರುವ ಮುಡಿಮಂಟಪ	ಮನೆ ಕಲ್ಲಿನ ಮಂಟಪ	ಆರ್ ಸಿ ಸಿ ಮಂಟಪ	14 95 x 3 30
16	ಮಹಾಬಲೇಶ್ವರ ದೇವಸ್ಥಾನದ ಬಲ ಭಾಗದ ಖಾಲಿ ನಿವೇಶನ (ತಳಪಾಯ ಹಾಕಿ ಬಿಟ್ಟಿರುವುದು)	ಖಾಲಿ ನಿವೇಶನ	ನಿವೇಶನ	–

ಕ್ರ ಸಂ	ವಿವರ	ತರಹ	ಮಾದರಿ	ವಿಸ್ತೀರ್ಣ (ಮೀಟರ್ ಗಳಲ್ಲಿ)
17	ಚಾಮುಂಡಿಬೆಟ್ಟದ ದೇವಿಕೆರೆ ಮತ್ತು ಅದರ ಬಳಿ ಇರುವ ಒಂದು ಮಂಟಪ ಮತ್ತು ಮಹಾರಾಜರು ಕೂರುವ ಮಂಟಪ	ಮಂಟಪ	ಆರ್ ಸಿ ಸಿ ಮತ್ತು ಕಲ್ಲಿನ ಮಂಟಪ	–
18	ದೇವಿಕೆರೆ ಬಳಿ ಇರುವ ಹೂ ತೋಟ	ತೋಟ	ರೂಟ	1 39 ಎಕರೆ
19	ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ದಾಸೋಹ ಭವನ ಹಾಗೂ 20 ಕೊರಡಿಗಳ ಅತಿಥಿಗೃಹ ಸ ನಂ 27 ಸರ್ಕಾರದಿಂದ ಮಂಜೂರಾದ 126 ಎಕರೆ ಜಾಗದಲ್ಲಿ ನಿರ್ಮಿಸಿರುವ ಕಟ್ಟಡ ಹಾಗೂ ಉಳಿಕೆ ಜಾಗ	ಕಟ್ಟಡ	ಆರ್ ಸಿ ಸಿ	ಗೆಸ್ಟ್ ಹೌಸ್ 12860 ದಾಸೋಹ ಭವನ 17000
20	ಶ್ರೀ ಚಾಮುಂಡೇಶ್ವರಿ ದೇವಸ್ಥಾನದ 20 ಕೊರಡಿಗಳ ಶ್ರೀ ರಾಜರಾಜೇಶ್ವರಿ ಅತಿಥಿಗೃಹ ಹಾಗೂ ಉಳಿಕೆ ಜಾಗ	ಕಟ್ಟಡ	ಆರ್ ಸಿ ಸಿ	12860 Sft

ಕ್ರ ಸಂ	ವಿವರ	ತರಹ	ಮಾದರಿ	ವಿಸ್ತೀರ್ಣ (ಮೀಟರ್ ಗಳಲ್ಲಿ)
21	ದಿವಾನ್ ಪೂಣಯ್ಯ ಛತ್ರ ಮೈಸೂರು	ಕಟ್ಟಡ	ಆರ್ ಸಿ ಸಿ	21600 sft
22	ಶ್ರೀ ಕಾಂತ ಪ್ರೌಢಶಾಲೆ	ಕಟ್ಟಡ	ಆರ್ ಸಿ ಸಿ	2431 0 ಚದರಡಿ ಕಟ್ಟಡ 2,860 ಚದರಡಿ ಖಾಲಿ ಜಾಗ (ಆಟದ ಮೈದಾನ)
23	ಮೈಸೂರು ಎಂ ಜಿ ರಸ್ತೆಯಲ್ಲಿ ನಿರ್ಮಿಸಿರುವ ಅಂಗಡಿ ಮಳಿಗೆಗಳು	ಕಟ್ಟಡ	ಆರ್ ಸಿ ಸಿ	2173 43 ಚದರಡಿ ಕಟ್ಟಡ 5115 65 ಚದರಡಿ ಕಾರಿಡಾರ್ ಹಾಗೂ ಪಾರ್ಕಿಂಗ್ ಜಾಗ
24	ಉತ್ತನಹಳ್ಳಿ ಶ್ರೀ ಜ್ವಾಲಾ ತ್ರಿಪುರಸುಂದರಿ ಅಮ್ಮನವರ ದೇವಸ್ಥಾನ	ಖಾಲಿಜಾಗ	ಖಾಲಿಜಾಗ	(ಸರ್ವೆ ನಂ 1 ರಲ್ಲಿನ 19 75 ಎಕರೆ ಗುಡ್ಡ ಪ್ರದೇಶ

146 (231) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಹೊಸ ಪಡಿತರ ಚೀಟಿ ವಿತರಿಸಬೇಕೆಂಬ ತೀರ್ಮಾನದ ಹಿನ್ನೆಲೆಯಲ್ಲಿ ಮನೆ ಮನೆ ಸರ್ವೇ ಕಾರ್ಯ ಪ್ರಾರಂಭಿಸಿದ್ದು ಯಾವಾಗ ,

ಆ) ಯಾವ ಯಾವ ಮಾನದಂಡದೊಂದಿಗೆ ಯಾವ ಯಾವ ವರ್ಗದ ನಾಗರಿಕರಿಗೆ ಯಾವ ಯಾವ ಪಡಿತರ ಚೀಟಿ ನೀಡಲಾಗುವುದು ,

ಇ) ತಾತ್ಕಾಲಿಕ ಪಡಿತರ ಚೀಟಿಯನ್ನು ಎಷ್ಟು ಜನಕ್ಕೆ ವಿತರಿಸಲಾಗಿದೆ, ಬಾಕಿ ಉಳಿದಿರುವುದೆಷ್ಟು ,

ಈ) ತಾತ್ಕಾಲಿಕ ಪಡಿತರ ಚೀಟಿ ವಿತರಣೆಯಲ್ಲಿನ ಲೋಪದೋಷಗಳು ಸರ್ಕಾರದ ಗಮನಕ್ಕೆ ಬಂದಿದೆಯೇ , ಬಂದಿದ್ದಲ್ಲಿ, ಲೋಪದೋಷಗಳು ಏನು (ವಿವರ ನೀಡುವುದು) ,

ಉ) ಲೋಪದೋಷಗಳಿಲ್ಲದಂತೆ ಶಾಶ್ವತವಾಗಿ ಪಡಿತರ ಚೀಟಿಯನ್ನು ನೀಡಲಾಗುವುದೇ ,

ಊ) ಹಾಗಿದ್ದಲ್ಲಿ, ಇದಕ್ಕಾಗಿ ಯೋಜಿಸಿರುವ ಕಾಲಮಿತಿ ಮತ್ತು ವೆಚ್ಚಗಳು ಎಷ್ಟು , (ವಿವರ ನೀಡುವುದು) ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಅರ್ಹ ಫಲಾನುಭವಿಗಳನ್ನು ಗುರುತಿಸಿ ಹೊಸ ಪಡಿತರ ಚೀಟಿಗಳನ್ನು ವಿತರಿಸಲು ಜನವರಿ, 2005ರಿಂದ ಮನೆ ಮನೆ ಸಮೀಕ್ಷಾ ಕಾರ್ಯವನ್ನು ಕೈಗೊಳ್ಳಲಾಗಿತ್ತು

ಆ) ಅನ್ನಪೂರ್ಣ, ಎಎವೈ, ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿದಾರರನ್ನು ಗುರುತಿಸಲು ಅಳವಡಿಸಿರುವ ಮಾನದಂಡಗಳ ವಿವರಗಳು ಕೆಳಕಂಡಂತಿರುತ್ತವೆ ,

ಅನ್ನಪೂರ್ಣ ಯೋಜನೆಯಡಿಯಲ್ಲಿ 65 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯೋಮಿತಿಯುಳ್ಳ ನಿರ್ಗತಿಕ ಹಾಗೂ ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಂದ ವೃದ್ಧಾಪ್ಯ ವೇತನವನ್ನು ಪಡೆಯದೇ ಇರುವಂತಹ ವ್ಯಕ್ತಿಗಳು ಈ ಯೋಜನೆಯ ಪಡಿತರ ಚೀಟಿ ಪಡೆಯಲು ಅರ್ಹರಾಗಿರುತ್ತಾರೆ

ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ ಬಿಪಿಎಲ್ ಪಡಿತರ ಚೀಟಿಯನ್ನು ಪಡೆದ ಕಡುಬಡವರು ಅಂದರೆ, ಕೃಷಿ ಕಾರ್ಮಿಕರು ಮತ್ತು

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ವಿಧವೆಯರೇ ಮುಖ್ಯಸ್ಥರಾಗಿರುವ ಕುಟುಂಬ, ಸಾಮಾಜಿಕ ನೆರವಿಲ್ಲದ ವಯೋವೃದ್ಧ ಅಂಗವಿಕಲರು ಪಡಿತರ ಚೀಟಿ ಪಡೆಯಲು ಅರ್ಹರಾಗಿರುತ್ತಾರೆ

ಬಿಪಿಎಲ್ ಪಡಿತರ ಚೀಟಿ ವಿತರಿಸಲು ಗುರುತಿಸಲು ಕೆಳಕಂಡ ಮಾನದಂಡಗಳನ್ನು ಹೊಂದಿರುವವರು ಅರ್ಹರಿರುವುದಿಲ್ಲ

1) ಮೂರು ಹೆಕ್ಟೇರ್ ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹೊಂದಿರುವವರು

2) ಸ್ಥಿರ ದೂರವಾಣಿ ಹೊಂದಿರುವವರು

3) ಸ್ವಂತವಾಗಿ ಯಾರೇ ಡೀಸಲ್ / ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು (ಲೂನಾ / ಟಿವಿಎಸ್ ಮೊಪೆಡ್‌ಗಳನ್ನು ಹೊಂದಿರುವವರನ್ನು ಹೊರತುಪಡಿಸಿ)

4) ಬ್ಯಾಂಕ್ / ಸಹಕಾರಿ ಸಂಘಗಳಲ್ಲಿ 100 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು

5) ಒಂದು ಬೋರ್‌ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು

6) ತಿಂಗಳಿಗೆ ರೂ 1,000ಕ್ಕೆ ಕಡಿಮೆ ಇಲ್ಲದೇ ವೇತನ ಪಡೆಯುವ ಸರ್ಕಾರಿ / ಸರ್ಕಾರೇತರ ಖಾಸಗಿ ಸಿಬ್ಬಂದಿಗಳು

7) ಆದಾಯ ತೆರಿಗೆ ಪಾವತಿಸುವವರು

8) ರಿಜಿಸ್ಟರ್ಡ್ ಕಾಂಟ್ರಾಕ್ಟರ್, ಎಪಿಎಂಸಿ ಟ್ರೇಡರ್ಸ್ / ಕಮೀಷನ್ ಏಜೆಂಟ್ಸ್ / Dealers in Seeds / Fertilizers, etc ,

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸಲಾಗುವುದು

ತದನಂತರ ನಗರ ಪ್ರದೇಶಕ್ಕೆ ನೀಡಿದ ಮಾರ್ಗಸೂಚಿಗಳಲ್ಲಿ ಈ ಕೆಳಕಂಡ ಮಾನದಂಡಗಳನ್ನು ನಿಗದಿ ಪಡಿಸಲಾಗಿರುತ್ತದೆ

1) 20"x30" ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು

2) ರಸ್ತೆ ಬದಿಯಲ್ಲಿ ಹಾಗೂ ಸಣ್ಣ ಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ

ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು

3) ವಾಸದ / ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ 2,000/– ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ

ಮೇಲ್ಕಂಡ ಮಾನದಂಡಗಳಿಗೆ ಒಳಪಟ್ಟಲ್ಲಿ ಅಂತಹ ಫಲಾನುಭವಿಗಳು ಬಿಪಿಎಲ್ ಪಡಿತರ ಚೀಟಿಯನ್ನು ಹೊಂದಲು ಅನರ್ಹರಾಗಿರುತ್ತಾರೆ

ಗ್ರಾಮೀಣ ಪ್ರದೇಶದಲ್ಲಿ ರೂ 12,000/– ಮತ್ತು ನಗರ ಪ್ರದೇಶದಲ್ಲಿ ರೂ 17,000/– ವಾರ್ಷಿಕ ಆದಾಯ ಮಿತಿಗೆ ಮೇಲ್ಪಟ್ಟು ಆದಾಯ ಹೊಂದಿರುವವರು ಎಪಿಎಲ್ ಪಡಿತರ ಚೀಟಿ ಹೊಂದಲು ಅರ್ಹರಾಗಿರುತ್ತಾರೆ

ಇ) ತಾತ್ಕಾಲಿಕ ಪಡಿತರ ಚೀಟಿಯನ್ನು ಕುಟುಂಬದ ಮುಖ್ಯಸ್ಥರ ಹೆಸರಿನಲ್ಲಿ ವಿತರಿಸಲಾಗಿದ್ದು, ಪ್ರಸ್ತುತ ರಾಜ್ಯದಲ್ಲಿ ವಿತರಿಸಿರುವ ಪಡಿತರ ಚೀಟಿಗಳ ವಿವರ ಕೆಳಕಂಡಂತಿದೆ

ಅಂ ಅ ಯೋ	11,75,959
ಅಕ್ಷಯ	53,85,258
ಅನ್ನಪೂರ್ಣ	25,452
ಎಪಿಎಲ್	52,49,489
ಒಟ್ಟು	1,18,36,158

ಈ) ಬಂದಿದೆ ತಾತ್ಕಾಲಿಕ ಪಡಿತರ ಚೀಟಿ ವಿತರಣೆಯಲ್ಲಿ ಹಲವು ರೀತಿಯ ಲೋಪದೋಷಗಳು ವರದಿಯಾಗಿದ್ದು ಆ ಪೈಕಿ ವರ್ಗಾವಾರು ಅಹವಾಲುಗಳ ವಿವರ ಕೆಳಕಂಡಂತಿದೆ

1 ನ್ಯಾಯಬೆಲೆ ಅಂಗಡಿ ಬದಲಾವಣೆ
2 ಪಡಿತರ ಚೀಟಿಯಲ್ಲಿ ಹೊಸ ಕುಟುಂಬ ಸದಸ್ಯರ ಸೇರ್ಪಡೆ
3 ಪಡಿತರ ಚೀಟಿಯಲ್ಲಿ ಕುಟುಂಬ ಸದಸ್ಯರ ತೆಗೆದು ಹಾಕುವ ಬಗ್ಗೆ
4 ಕುಟುಂಬದ ಮುಖ್ಯಸ್ಥರ ಬದಲಾವಣೆ
5 ಇತರೇ ಯಾವುದೇ ರೀತಿಯ ಅಹವಾಲುಗಳು, ತಿದ್ದುಪಡಿಗಳು

6 ವರ್ಗ ಬದಲಾವಣೆ ಕೋರಿರುವ ಅಹವಾಲುಗಳು

7 ಹೊಸದಾಗಿ ಪಡಿತರ ಚೀಟಿ ಕೋರಿರುವ ಅಹವಾಲುಗಳು

ಉ) ಹೌದು

ಊ) ಲೋಪದೋಷಗಳ ಬಗ್ಗೆ ಸೌರ್ವಜನಿಕರಿಂದ ಸ್ವೀಕರಿಸಿರುವ ಅಹವಾಲುಗಳನ್ನು ಪೂರ್ಣ ಪ್ರಮಾಣದಲ್ಲಿ ವಿಲೇವಾರಿಗೊಳಿಸಿ ಖಾಯಂ ಪಡಿತರ ಚೀಟಿ ವಿತರಣೆಗೆ ಕ್ರಮ ವಹಿಸಲಾಗುವುದು ಇದಕ್ಕೆ 6 ತಿಂಗಳ ಕಾಲಾವಕಾಶದಲ್ಲಿ ಕ್ರಮ ವಹಿಸಲಾಗುವುದು ಶಾಶ್ವತ ಪಡಿತರ ಚೀಟಿಗಳನ್ನು ನೀಡಲು ರೂ 45–00 ಶುಲ್ಕವನ್ನು ನಿಗಧಿ ಪಡಿಸಲಾಗಿದೆ

147 (232) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಮೈಸೂರಿನ ಹಾಪ್‌ಕಾಮ್ಸ್‌ನ್ನು ಬೆಂಗಳೂರಿನ ಹಾಪ್‌ಕಾಮ್ಸ್‌ಗೆ ವಿಲೀನ ಗೊಳಿಸಬೇಕೆಂಬ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ ,

ಆ) ಬಂದಿದ್ದಲ್ಲಿ, ಮೈಸೂರಿನ ಭಾಗದ ರೈತರಿಗೆ ಅನುಕೂಲವಾಗುವುದೆಂಬುದು ಸರ್ಕಾರಕ್ಕೆ ತಿಳಿದಿದೆಯೇ ,

ಇ) ಹಾಗಿದ್ದಲ್ಲಿ, ಈ ಪ್ರಸ್ತಾವನೆಗೆ ತೆಗೆದುಕೊಂಡ ಕ್ರಮವೇನು , (ವಿವರ ನೀಡುವುದು)?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ಹೌದು

ಆ) ಇಲ್ಲ

ಇ) ಮೈಸೂರು ಹಾಪ್‌ಕಾಮ್ಸ್‌ನ್ನು ಬೆಂಗಳೂರು ಹಾಪ್‌ಕಾಮ್ಸ್‌ಗೆ ವಿಲೀನಗೊಳಿಸಲು ನೌಕರರು ಮತ್ತು ರೈತರಿಂದ ಮನವಿ ಬಂದಿತ್ತು ಈ ಬಗ್ಗೆ ಸರ್ಕಾರ ಪರಿಶೀಲಿಸಿ, ಪ್ರತಿಯೊಂದು ಜಿಲ್ಲಾ ಹಾಪ್‌ಕಾಮ್‌ಗಳು ಸ್ವಂತ ಸಂಪನ್ಮೂಲ ರೂಢಿಸಿಕೊಂಡು ಆ ವ್ಯಾಪ್ತಿಯ ರೈತರು ಮತ್ತು ಗ್ರಾಹಕರುಗಳಿಗೆ ಸಹಾಯವಾಗಬೇಕೆಂಬ ಉದ್ದೇಶದಿಂದ ವಿಲೀನಗೊಳಿಸುವ ಮನವಿಯನ್ನು ಪರಿಗಣಿಸಿರುವುದಿಲ್ಲ

148 (233) ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಮೈಸೂರಿನ ಆರ್ ಎಂ ಸಿ ಯಲ್ಲಿನ ಮಳಿಗೆಗಳು, ದಾಸ್ತಾನು ಮಳಿಗೆಗಳು ಹಾಗೂ ಇತರೆ ಕಟ್ಟಡಗಳೆಷ್ಟು (ವಿವರ ನೀಡುವುದು) ,

ಆ) ಈ ಕಟ್ಟಡಗಳ ನಿರ್ವಹಣೆಗಾಗಿ ಕಳೆದ 3 ವರ್ಷಗಳಲ್ಲಿ ಖರ್ಚು ಮಾಡಿರುವ ಹಣವೆಷ್ಟು , (ವಿವರ ನೀಡುವುದು) ,

ಇ) ಮೈಸೂರಿನಲ್ಲಿರುವ ಆರ್ ಎಂ ಸಿ ಯಿಂದ ಯಾವ ಯಾವ ಮೂಲಗಳಿಂದ ಬರುವ ಆದಾಯವೆಷ್ಟು , (ಮಾಸಿಕವಾರು ಪ್ರಸಕ್ತ ಸಾಲಿನ ವಿವರ ನೀಡುವುದು) ,

ಈ) ಮೂಲಭೂತ ಸೌಕರ್ಯಗಳಾದ ಶೌಚಾಲಯ, ನೀರು, ವಿದ್ಯುಚ್ಛಕ್ತಿ, ರಸ್ತೆ, ಪ್ರಾಂಗಣಗಳು ಈ ಮಾರುಕಟ್ಟೆಯಲ್ಲಿವೆಯೇ ,

ಉ) ಈ ಮಾರುಕಟ್ಟೆಯ ಸಮಗ್ರ ಅಭಿವೃದ್ಧಿಗಾಗಿ ಹಾಗೂ ಅಧುನೀಕರಣಕ್ಕಾಗಿ ಸರ್ಕಾರ ಯಾವ ಕ್ರಮ ವಹಿಸಿದೆ (ವಿವರ ನೀಡುವುದು)?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಅ) ಬಂಡೀಪಾಳ್ಯ ಮುಖ್ಯ ಮಾರುಕಟ್ಟೆ ಪ್ರಾಂಗಣ

ಅಂಗಡಿ ಮಳಿಗೆಗಳು	8
ಅಂಗಡಿಗೋದಾಮುಗಳು	52
ಈರುಳ್ಳಿ ಆಲೂಗೆಡ್ಡೆ ಅಂಗಡಿಮಳಿಗೆ	20
ಎನ್ ಜಿ ಆರ್ ಜಿ ಗೋದಾಮು	2
ಕಚೇರಿ ಕಟ್ಟಡ	1
ಟೀಸ್ಟಾಲ್	3
ರೈತಭವನ	1
ಪೊಲೀಸ್ ರಾಣೆ ಕಟ್ಟಡ	1
ಶ್ರಮಿಕ ಭವನ	1
ಶೌಚಾಲಯ	6
ತನಿಖಾರಾಣೆ	2
ನೌಕರರ ವಸತಿಗೃಹ	14
ಹಮಾಲರ ವಸತಿಗೃಹ	120
ತರಕಾರಿ ಮಾರುಕಟ್ಟೆ ಉಪ ಪ್ರಾಂಗಣ	
ಕಛೇರಿ ಕಟ್ಟಡ	1
ಉಪಹಾರಗೃಹ	1
ಬ್ಯಾಂಕ್ ಹಾಗೂ ಇಂಜಿನಿಯರಿಂಗ್ ಶಾಖೆ ಕಟ್ಟಡ	1
ಗೋದಾಮುಗಳು	44
ಅಂಗಡಿಮಳಿಗೆ ಮತ್ತು ಕೊರಡಿ	60

ಆ) 2003–04 ರೂ 45,147–00
2004–05 ರೂ 33,468–00
2005–06 ರೂ 64,467–00

ಇ) ವಿವರ ಅನುಬಂಧದಲ್ಲಿ ನೀಡಿದೆ

ಈ) ಇವೆ

ಉ) ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣಕ್ಕಾಗಿ 159 ಎಕರೆ 38 5 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಂದಾಜು ರೂ 13 50 ಕೋಟಿ ವೆಚ್ಚದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿ, ಅಭಿವೃದ್ಧಿಪಡಿಸಲಾಗಿದೆ

ಅಧಿಸೂಚಿತ ಕೃಷಿ ಉತ್ಪನ್ನಗಳ ಟೆಂಡರ್ ಪದ್ಧತಿಯನ್ನು ಗಣಕೀಕರಣಗೊಳಿಸುವ (e-Tendering) ಕುರಿತು ಎನ್ ಐ ಸಿ ಸಂಸ್ಥೆಯ ತಾಂತ್ರಿಕ ನಿರ್ದೇಶನದಲ್ಲಿ ಯೋಜನೆ ರೂಪಿಸಿ ಜಾರಿಗೊಳಿಸಲು ಕ್ರಮ ಜರುಗಿಸಿದೆ

2006–07ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆ ಯಡಿಯಲ್ಲಿ ರೂ 175 00 ಲಕ್ಷಗಳ ವಿವಿಧ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, ಕಾಮಗಾರಿಗಳನ್ನು ಕೈಗೊಳ್ಳಲು ನಿಯಮಾನುಸಾರ ಕ್ರಮ ಜರುಗಿಸಲಾಗುತ್ತಿದೆ

ಅನುಬಂಧ

ಮೈಸೂರು ಸಮಿತಿಗೆ ವಿವಿಧ ಮೂಲಗಳಿಂದ ಬಂದಿರುವ ಆದಾಯದ ವಿವರ

ಮಾಹೆ	ಮಾರುಕಟ್ಟೆ ಶುಲ್ಕ	ಲೈಸನ್ಸ್ ಶುಲ್ಕ	ದಂಡ
ಏಪ್ರಿಲ್–06	18,87,197–00	3,520–00	45,812–00
ಮೇ–06	22,40,654–00	5,700–00	31,865–00
ಜೂನ್–06	22,81,353–00	1,550–00	2,57,071–00
ಜುಲೈ–06	22,93,205–00	2,950–00	1,14,946–00
ಆಗಸ್ಟ್ –06	34,02,217–00	9,050–00	81,106–00
ಸೆಪ್ಟೆಂಬರ್–06	18,20,730–00	2,600–00	1,05,924–00
ಅಕ್ಟೋಬರ್–06	22,26,214–00	2,450–00	51,593–00
ನವೆಂಬರ್–06	18,93,689–00	7,800–00	67,704–00
ಡಿಸೆಂಬರ್–06	17,79,260–00	5,950=00	71,782–00
ಒಟ್ಟು	1,97,94,601–00	4,1300–00	8,27,803–00

ಮಾಹೆ	ಲೀವ್ ಅಂಡ್ ಲೈಸನ್ಸ್ ಶುಲ್ಕ	ರೇವಣಿ ಮೇಲಿನ ಬಡ್ಡಿ
ಏಪ್ರಿಲ್–06	1,33,116–00	1,43,602–00
ಮೇ–06	2,06,854–00	–
ಜೂಟ್ಟ–06	1,03,138–00	–
ಜುಲೈ–06	2,46,073–00	93,465–00
ಆಗಸ್ಟ್ –06	3,37,770–00	–
ಸೆಪ್ಟೆಂಬರ್–06	2,96,787–00	–
ಅಕ್ಟೋಬರ್–06	2,84,857–00	1,07,517–00
ನವೆಂಬರ್–06	1,79,070–00	23,304–00
ಡಿಸೆಂಬರ್–06	1,90,913–00	–
ಒಟ್ಟು	19,78,598–00	3,67,888–00

149 (234) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯಾದ್ಯಂತ ವಿತರಿಸಲಾಗಿರುವ ಅಕ್ಷಯ, ಅಂತ್ಯೋದಯ, ಅನ್ನಪೂರ್ಣ ಮತ್ತು ಎ ಪಿ ಎಲ್ ಕಾರ್ಡುಗಳ ಒಟ್ಟು ಸಂಖ್ಯೆ ಎಷ್ಟು , (ಪ್ರತ್ಯೇಕ ವಿವರ ನೀಡುವುದು) ,

ಆ) ಜಮಖಂಡಿ ತಾಲ್ಲೂಕಿನಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳೆಷ್ಟು, (ಪ್ರತ್ಯೇಕ ವಿವರ ನೀಡುವುದು) ,

ಇ) ಈ ತಾಲ್ಲೂಕಿನಲ್ಲಿ ವಿತರಿಸಲಾದ ಕಾರ್ಡುಗಳೆಷ್ಟು , ಬಾಕಿ ಉಳಿದಿರುವವರಿಗೆ ಕಾರ್ಡುಗಳನ್ನು ಎಷ್ಟು ಕಾಲಮಿತಿಯೊಳಗಾಗಿ ವಿತರಿಸಲಾಗುವುದು ,

ಈ) ಕುಟುಂಬಗಳ ಸರ್ವೆಯಲ್ಲಿ ಭಾರಿ ಅವ್ಯವಹಾರ ಮತ್ತು ಪಕ್ಷಪಾತದಿಂದ ಬಡ ಕುಟುಂಬಗಳು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ಹಾಗಿದ್ದಲ್ಲಿ, ಖಾಸಗಿ ಏಜೆನ್ಸಿಗೆ ಸರ್ವೆ ಕಾರ್ಯವನ್ನು ಒಪ್ಪಿಸಲು ಕ್ರಮ ಕೈಗೊಳ್ಳಲಾಗಿದೆಯೇ ,

ಊ) ಕುಟುಂಬದಲ್ಲಿರುವ ಜನರ ಸಂಖ್ಯೆಗನುಗುಣವಾಗಿ ಪಡಿತರ ಚೀಟಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯಾದ್ಯಂತ ವಿತರಿಸಲಾಗಿರುವ ಪಡಿತರ ಚೀಟಿದಾರರ ಸಂಖ್ಯೆ ಈ ಕೆಳಕಂಡಂತಿರುತ್ತದೆ ,

ಅನ್ನಪೂರ್ಣ	–	25,452
ಎಎವೈ	–	11,75,959
ಬಿಪಿಎಲ್	–	53,85,258
ಎಪಿಎಲ್	–	52,49,489

ಆ) ಜಮಖಂಡಿ ತಾಲ್ಲೂಕಿನಲ್ಲಿ 53,725 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಲಾಗಿದೆ ಕುಟುಂಬಗಳ ವಿವರ ಕೆಳಕಂಡಂತಿದೆ

ಅನ್ನಪೂರ್ಣ	–	358
ಅಂ ಅ ಯೋ	–	10,412
ಅಕ್ಷಯ	–	42,955
ಒಟ್ಟು	–	53,725

ಇ) ತಾಲ್ಲೂಕಿನಲ್ಲಿ ವಿತರಿಸಿರುವ ಕಾರ್ಡ್‌ಗಳ ಸಂಖ್ಯೆ ಈ ಕೆಳಕಂಡಂತಿದೆ –

ಅನ್ನಪೂರ್ಣ	–	358
ಅಂ ಅ ಯೋ	–	10,412
ಅಕ್ಷಯ	–	42,955
ಎಪಿಎಲ್	–	41,504

ಸಾರ್ವಜನಿಕ ಅಹವಾಲುಗಳ ವಿಲೇವಾರಿಯ ನಂತರ ಅರ್ಹತೆಗೆ ಅನುಗುಣವಾಗಿ ಕಾರ್ಡುಗಳನ್ನು ವಿತರಿಸಲಾಗುವುದು

ಈ) ಇಲ್ಲಾ, ರಾಜ್ಯಾದ್ಯಂತ ಮನೆ ಮನೆ ಸಮೀಕ್ಷೆ ಕಾರ್ಯದಲ್ಲಿ ಫಲಾನುಭವಿಗಳನ್ನು ಗುರುತಿಸಿ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಣೆ ಮಾಡಲಾಗಿದೆ ಈ ಸಂದರ್ಭದಲ್ಲಿ ಪಡಿತರ ಚೀಟಿ ಪಡೆಯಲು ವಂಚಿತರಾದವರು / ಲೋಪದೋಷಗಳು ಕಂಡು ಬಂದಲ್ಲಿ ಅಂತಹವರಿಂದ ಅರ್ಜಿಗಳನ್ನು ಸ್ವೀಕರಿಸಲಾಗಿದೆ ಸದರಿ ಅಹವಾಲುಗಳನ್ನು ಶೀಘ್ರದಲ್ಲಿಯೇ ಪರಿಶೀಲಿಸಿ ಪೂರ್ಣ ಪ್ರಮಾಣದಲ್ಲಿ ವಿಲೇವಾರಿಗೊಳಿಸಲಾಗುವುದು

ಉ) ಇಲ್ಲ

ಊ) ಇಲ್ಲ

150 (236) ಶ್ರೀ ಸಿದ್ಧು ಸಾವದಿ (ಜಮಖಂಡಿ) ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿರುವ ಕುಟುಂಬಗಳೆಷ್ಟು , ಆ ಪೈಕಿ ಸ್ವಂತ ಶೌಚಾಲಯಗಳನ್ನು ಹೊಂದಿರುವುದೆಷ್ಟು ,

ಆ) ಬಯಲು ಶೌಚಾಲಯವೆಂಬ ಅನಿಷ್ಟ ಪದ್ಧತಿಯನ್ನು ತೊಲಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ,

ಇ) ರಾಜ್ಯದಲ್ಲಿ ಶೌಚಾಲಯಗಳಿಲ್ಲದ ಮನೆಗೆ ಶೌಚಾಲಯ ಕಟ್ಟಿಸುವ ಯೋಜನೆ ಸರ್ಕಾರಕ್ಕಿದೆಯೇ (ವಿವರ ನೀಡುವುದು) ,

ಈ) ಶೌಚಾಲಯಗಳ ನಿರ್ಮಾಣಕ್ಕಾಗಿ ಸಹಾಯ ಧನ ನೀಡುತ್ತಿರುವ ರೂ 1200/– ಅನ್ನು ರೂ 5000/–ಕ್ಕೆ ಹೆಚ್ಚಿಸಲಾಗುವುದೇ ?

ಶ್ರೀ ಎಸ್ ಎ ರವೀಂದ್ರ ನಾಥ್ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) 2004ರಲ್ಲಿ ನಡೆಸಿದ ತಳಮಟ್ಟದ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ ಒಟ್ಟು 69,62,238 ಗ್ರಾಮೀಣ ಕುಟುಂಬಗಳಿವೆ ಈ ಪೈಕಿ ರಾಜ್ಯದಲ್ಲಿ 24,90,474 ಕುಟುಂಬಗಳು ಶೌಚಾಲಯಗಳನ್ನು ಹೊಂದಿರುತ್ತವೆ

ಆ) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯವನ್ನು ಕಾಪಾಡುವ ಹಾಗೂ ಬಯಲು ಮಲವಿಸರ್ಜನೆಯಂತ ಅನಿಷ್ಟ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದು ಹಾಕುವ ಉದ್ದೇಶದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಸಂಪೂರ್ಣ ಸ್ವಚ್ಚತಾ ಆಂದೋಲನವನ್ನು ಅನುಷ್ಠಾನಗೊಳಿಸಲಾಗುತ್ತಿದೆ ಇದು ನಾಲ್ಕು ವರ್ಷಗಳ ಅವದಿಯ ಯೋಜನೆಯಾಗಿದ್ದು 2005 ರಿಂದ 2009 ರವರೆಗೆ ಜಾರಿಯಲ್ಲಿರುತ್ತದೆ

ಗ್ರಾಮೀಣ ಪ್ರದೇಶದ ಎಲ್ಲ ಕುಟುಂಬಗಳೂ ಶೌಚಾಲಯವನ್ನು ಹೊಂದುವಂತೆ ಹಾಗೂ ಬಳಕೆ ಮಾಡುವಂತೆ ಮಾಹಿತಿ, ಶಿಕ್ಷಣ, ಸಂವಹನ ಚಟುವಟಿಕೆಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ ಮತ್ತು ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳು ಶೌಚಾಲಯ ನಿರ್ಮಿಸಿಕೊಂಡು ಬಳಕೆ ಮಾಡಿದಲ್ಲಿ ರೂ 1200/–ಗಳ ಸಹಾಯಧನ ನೀಡಲಾಗುತ್ತಿದೆ ಗ್ರಾಮೀಣ ಪ್ರದೇಶದ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಮಕ್ಕಳಲ್ಲಿ ಎಳೆಯ ವಯಸ್ಸಿನಿಂದಲೇ ಶುಚಿತ್ವದ ಅಭ್ಯಾಸಗಳನ್ನು ಉತ್ತೇಜಿಸಲಾಗುತ್ತಿದೆ ಈ ಮೂಲಕ ಬಯಲು

ಮಲವಿಸರ್ಜನಾ ಪದ್ಧತಿಯನ್ನು ತೊಡೆದುಹಾಕುವ ನಿಟ್ಟಿನಲ್ಲಿ ಸಂಪೂರ್ಣ ಸ್ವಚ್ಚತಾ ಆಂದೋಲನವನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ

ಇ) ರಾಜ್ಯದಲ್ಲಿ ಸಂಪೂರ್ಣ ಸ್ವಚ್ಚತಾ ಆಂದೋಲನವು ಜಾರಿಯಲ್ಲಿದ್ದು ರಾಜ್ಯದ ಎಲ್ಲ ಗ್ರಾಮೀಣ ಕುಟುಂಬಗಳೂ ಶೌಚಾಲಯ ಹೊಂದುವ ಮೂಲಕ ಬರಲು ಮಲ ವಿಸರ್ಜನೆಯನ್ನು ಮುಕ್ತಗೊಳಿಸಲು ಉದ್ದೇಶಿಸಿ ಅನುಷ್ಠಾನಗೊಳುತ್ತಿದೆ ನಾಲ್ಕು ವರ್ಷಗಳ (2005–09) ಕಾಲಮಿತಿಯ ಈ ಯೋಜನೆಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಂಟಿ ಯೋಜನೆಯಾಗಿದ್ದು ಗ್ರಾಮ ಪಂಚಾಯತಿಗಳ ಮೂಲಕ ಅನುಷ್ಠಾನಗೊಳ್ಳುತ್ತಿದೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ತಲಾ ರೂ 1,200/– ಪ್ರೋತ್ಸಾಹ ಧನ ನೀಡಲಾಗುತ್ತಿದೆ

ಈ) ಇಲ್ಲ

151 (237) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಜಮಖಂಡಿ ತಾಲ್ಲೂಕಿನಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಕೈಗೊಂಡ ಕಾರ್ಯಕ್ರಮಗಳೇನು ,

ಆ) ದಿನಾಂಕ 01–04–2003 ರಿಂದ ಜಮಖಂಡಿ ತಾಲ್ಲೂಕಿನ ಮೀನುಗಾರಿಕೆಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗಿದೆ (ವಿವರ ನೀಡುವುದು) ,

ಇ) ಜಮಖಂಡಿ ತಾಲ್ಲೂಕಿನ ವರ್ಷವಾರು ಮೀನುಗಳ ಇಳುವರಿಯೆಷ್ಟು ,

ಈ) ಇತ್ತೀಚೆಗಿನ ದಿನಂಪ್ರತಿ ಇಳುವರಿಯೆಷ್ಟು , ಯಾವ ಜಾತಿ ಮೀನುಗಳನ್ನು ಬೇಸಾಯ ಮಾಡಲಾಗುವುದು ,

ಉ) ಮೀನುಗಳ ಮಾರಾಟಕ್ಕಾಗಿ ಸೌಕರ್ಯವನ್ನು ಒದಗಿಸಲಾಗಿದೆಯೇ ,

ಊ) ಜಮಖಂಡಿಯಲ್ಲಿಯ ಬಡ ಮೀನುಗಾರರಿಗೆ ಅವಶ್ಯವಿರುವ ಮನೆ, ಬಲೆ ಮತ್ತು ಶಿಧಲೀಕರಣ ಘಟಕಗಳನ್ನು ಯಾವಾಗ ಪೂರೈಸಲಾಗುವುದು ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಜಮಖಂಡಿ ತಾಲ್ಲೂಕಿನಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ

1 ಕೆರೆ ಮತ್ತು ನದಿ ಭಾಗಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡುವುದು ಮತ್ತು ಬಿತ್ತನೆ ಮೀನು ಮರಿ ಸರಬರಾಜು

2 ಮತ್ಸ್ಯ ಆಶ್ರಯ ಯೋಜನೆಯಡಿ ವಸತಿ ರಹಿತ ಬಡ ಮೀನುಗಾರರಿಗೆ ಮನೆ ನಿರ್ಮಾಣಕ್ಕೆ ಸಹಾಯ

3 ಮೀನುಗಾರರ ಸಹಕಾರ ಸಂಘಗಳಿಗೆ ವ್ಯಸ್ಥಾಪನಾ ಸಹಾಯ ಧನ ಹಾಗೂ ಹೂಡಿಕೆಗಾಗಿ ಸಹಾಯ

4 ಮೀನು ಮಾರಾಟಕ್ಕಾಗಿ ಮೀನುಗಾರಿಕೆ ಅಗತ್ಯ ವಸ್ತುಗಳ ಖರೀದಿಗಾಗಿ ಸಹಾಯ

5 ಮತ್ಸ್ಯಮಹಿಳಾ ಸ್ವಾವಲಂಬನೆ ಯೋಜನೆಯಡಿ ಮೀನುಗಾರ ಮಹಿಳೆಯರಿಗೆ ಆವರ್ತಕ ನಿಧಿ ನೀಡುವುದು

ಆ) 2003–04ನೇ ಸಾಲಿಗೆ ಮತ್ಸ್ಯಾಶ್ರಯ ಯೋಜನೆಯಡಿ 10 ಮನೆಗಳನ್ನು ರಾಜೀವ್‌ಗಾಂಧಿ ಮೀನುಗಾರಿಕೆ ಸಹಕಾರ ಸಂಘ (ನಿ) ಜಮಖಂಡಿ ಇದರ 10 ಸದಸ್ಯರಿಗೆ ಮಂಜೂರು ಮಾಡಲಾಗಿದೆ

2004–05ನೇ ಸಾಲಿನಲ್ಲಿ ಕೆರೆಗಳನ್ನು ಮೀನುಗಾರಿಕೆಗೆ ಒದಗಿಸಲಾಗಿದೆ

2005–06ನೇ ಸಾಲಿನಲ್ಲಿ ಈ ಕೆಳಗಿನ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ

1 ಸಹಕಾರ ಸಂಘದ ಕಾರ್ಯದರ್ಶಿಗಳಿಗೆ ವ್ಯವಸ್ಥಾಪನ ಸಹಾಯನದ ಯೋಜನೆಯಡಿ ಬಿಕೆ ಜಂಬಗಿ ಮೀನುಗಾರಿಕೆ ಸಹಕಾರ ಸಂಘ ಕಾರ್ಯದರ್ಶಿಗೆ ರೂ 4000/– ವ್ಯವಸ್ಥಾಪನ ಸಹಾಯದನ ನೀಡಲಾಗಿದೆ

2 ಮೀನುಗಾರಿಕೆ ಸಹಕಾರ ಸಂಘಗಳಿಗೆ ಹೂಡಿಕೆ ಯೋಜನೆಯಡಿ ಬಿಕೆ ಜಂಬಗಿ ಮೀನುಗಾರಿಕೆ ಸಹಕಾರ ಸಂಘ ಜಮಖಂಡಿ ಇವರಿಗೆ ರೂ 10,000/– ಹೂಡಿಕೆ ಮಂಜೂರು ಮಾಡಲಾಗಿದೆ

2006–07ನೇ ಸಾಲಿನಲ್ಲಿ ಡಿಸೆಂಬರ್ 2006ರ ತಿಂಗಳ ಅಂತ್ಯದವರೆಗೆ ಈ ಕೆಳಗಿನ ಯೋಜನೆಗಳಲ್ಲಿ ಪ್ರಯೋಜನ ಕಲ್ಪಿಸಲಾಗಿದೆ

1 ರೂ 3000 ಘಟಕ ವೆಚ್ಚದಲ್ಲಿ ಮೀನುಗಾರರಿಗೆ ಮೀನುಬಲೆ ಖರೀದಿಸಲು ಶೇ 33 1/3ರಷ್ಟು ಸಹಾಯಧನ ಯೋಜನೆಯಡಿ 10 ಫಲಾನುಭವಿಗಳಿಗೆ ತಲಾ ರೂ 1,000/– ರಂತೆ ರೂ 10000/– ಸಹಾಯಧನ ಒದಗಿಸಲಾಗಿದೆ

2 ಮೀನು ವ್ಯಾಪಾರಕ್ಕಾಗಿ ಸೈಕಲ್ ಮತ್ತು ಐಸ್ ಬಾಕ್ಸ್ ಖರೀದಿಸಲು ಶೇ 50 ರಷ್ಟು ಸಹಾಯಧನ ಯೋಜನೆಯಡಿ 11 ಫಲಾನುಭವಿಗಳಿಗೆ ತಲಾ 1250/– ರಂತೆ ರೂ 13,750/– ಸಹಾಯಧನ ಒದಗಿಸಲಾಗಿದೆ

3′ ಮತ್ಸ್ಯ ಮಹಿಳಾ ಸ್ವಾವಲಂಬನಾ ಯೋಜನೆಯಡಿ ಮೀನುಗಾರ ಮಹಿಳೆಯರಿಗೆ ಮೀನು ವ್ಯಾಪಾರಕ್ಕಾಗಿ ಸಹಕಾರ ಸಂಘಗಳಿಗೆ ಅವರ್ತಕ ನಿಧಿ ಯೋಜನೆಯಡಿ 3 ಸಹಕಾರ ಸಂಘದ ಮಹಿಳಾ ಮೀನುಗಾರರಿಗೆ ರೂ 40,000/– ಆವರ್ತಕ ನಿಧಿ ಮಂಜೂರು ಮಾಡಲಾಗಿದೆ

4 ಮತ್ಸ್ಯಶ್ರಯ ಯೋಜನೆಯಡಿ ಮೀನುಗಾರರಿಗೆ ತಲಾ ರೂ 10,000 ವೆಚ್ಚದಲ್ಲಿ ಮನೆ ನಿರ್ಮಾಣ ಯೋಜನೆಯಡಿ ತಾಲ್ಲೂಕಿನ 10 ಮೀನುಗಾರರಿಗೆ ಮನೆ ಮಂಜೂರು ಮಾಡಲಾಗಿದೆ ಫಲಾನುಭವಿಗಳ ಆಯ್ಕೆಪ್ರಕ್ರಿಯೆ ನಡೆದಿದೆ

ಇ) ಜಮಖಂಡಿ ತಾಲ್ಲೂಕಿನ ವರ್ಷವಾರು ಮೀನುಹಿಡುವಳಿ ಈ ಕೆಳಕಂಡಂತಿದೆ

2003–04 – 60 ಟನ್

2004–05 – 80 ಟನ್

2005–06 – 140 ಟನ್

2006–07 – ಸುಮಾರು 150 ಟನ್ ಮೀನು ಹಿಡುವಳಿ ಆಗುವ ನಿರೀಕ್ಷೆ ಇದೆ

ಈ) 2005–06 ಮತ್ತು 2006–07ನೇ ಸಾಲಿನಲ್ಲಿ ಕೆರೆಗಳಲ್ಲಿ ಹೆಚ್ಚಿನ ಮೀನುಮರಿ ಬಿತ್ತನೆ ಮಾಡಿರುವುದರಿಂದ ಕೆರೆಗಳಿಂದ ಮತ್ತು ನದಿ ಜಲಾಶಯಗಳಿಂದ ದಿನಂಪ್ರತಿ ಸರಾಸರಿ 200 ಕಿ ಗ್ರಾಂ ಮೀನು ಹಿಡುವಳಿ ಮಾಡಲಾಗುತ್ತಿದೆ ಬೇಸಿಗೆ ಕಾಲದಲ್ಲಿ ದಿನಂಪ್ರತಿ 400–500 ಕಿ ಗ್ರಾಂ ಮೀನು ಹಿಡುವಳಿ ಆಗುವ ನಿರೀಕ್ಷೆ ಇದೆ ಕಟ್ಲಾ, ರೋಹು, ಮೃಗಾಲ್ ಮತ್ತು ಸಾ ಗೆಂಡೆ ಜಾತಿಯ ಮೀನುಮರಿಗಳನ್ನು ಬೇಸಾಯ ಮಾಡಲಾಗುತ್ತಿದೆ

ಊ) ಪುರಸಭೆ ಜಮಖಂಡಿ ಇವರು ಮೀನು ಮಾರಾಟಕ್ಕಾಗಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದ್ದಾರೆ

ಋ) ಬಡ ಮೀನುಗಾರರಿಗೆ ಅವಶ್ಯವಿರುವ ಮನೆ, ಬಲೆ ಮತ್ತು ಶೀಥಲೀಕರಣ ಘಟಕಗಳನ್ನು ಅನುದಾನದ ಲಭ್ಯತೆ ಮೆರೆಗೆ ಆದ್ಯತೆಯನುಗುಣವಾಗಿ ಪರಿಶೀಲಿಸಿ ಪೂರೈಸಲಾಗುವುದು

152 (238) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಯಾವ ಯಾವ ಕಾರ್ಡುಗಳಿಗೆ ಎಷ್ಟೆಷ್ಟು ಸೀಮೆಎಣ್ಣೆಯನ್ನು ಪೂರೈಸಲಾಗುವುದು ,

ಆ) ಸೀಮೆಎಣ್ಣೆ ಪೂರೈಸಲಾದ ಕಾರ್ಡುಗಳ ಸಂಖ್ಯೆಗಳೆಷ್ಟು , ಅನಿಲಯುಕ್ತ ಕಾರ್ಡುಗಳಿಗೆ ಎಣ್ಣೆಯನ್ನು ಪೂರೈಸದಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಇ) ಹಾಗಿದ್ದಲ್ಲಿ, ವಿದ್ಯುತ್ ಇಲ್ಲದಿದ್ದಾಗ ದೀಪ ಬೆಳಗಿಸಲಾದರೂ ಸೀಮೆಎಣ್ಣೆ ಪೂರೈಸಲು ಕ್ರಮ ಕೈಗೊಳ್ಳಲಾಗುವುದೇ ,

ಈ) ಇಲ್ಲವಾದ್ದಲ್ಲಿ, ಮುಕ್ತ ಮಾರುಕಟ್ಟೆಯಲ್ಲಾದರೂ ಸೀಮೆಎಣ್ಣೆ ಸಿಗುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ,

ಉ) ಬಡವರಿಗಾಗಿ ಬಂದ ಹೆಚ್ಚಿನ ಸೀಮೆಎಣ್ಣೆ ಕಾಳ ಸಂತೆಯಲ್ಲಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಊ) ಬಂದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಅನಿಲ ರಹಿತ ಬಿಪಿಎಲ್ ಹಾಗೂ ಎಪಿಎಲ್ ಪಡಿತರ ಚೀಟಿದಾರರಿಗೆ ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಮಾಹೆಯಾನ 7 ಲೀಟರ್, ಪಟ್ಟಣ ಪ್ರದೇಶದಲ್ಲಿ–5 ಲೀಟರ್ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 4 ಲೀಟರ್‌ನಂತೆ ಪೈರೈಸಲಾಗುತ್ತಿದೆ

ಆ) ಅನಿಲ ರಹಿತ ಅಂತ್ಯೋದಯ, ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿದಾರರುಗಳಿಗೆ ಸೀಮೆಎಣ್ಣೆಯನ್ನು ಪೂರೈಸಲಾಗುತ್ತಿದೆ ಪ್ರದೇಶವಾರು ಕಾರ್ಡುಗಳ ಸಂಖ್ಯೆ ಈ ಕೆಳಕಂಡಂತಿದೆ

ಅನೌಪಚಾರಿಕ ಪಡಿತರ ಪ್ರದೇಶ	19,06,015
ಪಟ್ಟಣ ಪ್ರದೇಶ	8,76,730
ಗ್ರಾಮಾಂತರ ಪ್ರದೇಶ	77,56,802
ಒಟ್ಟು	1,05,39,547

ಹೌದು

ಇ) ಇಲ್ಲ

ಈ) ಮುಕ್ತ ಮಾರುಕಟ್ಟೆಯಲ್ಲಿ ಸೀಮೆಎಣ್ಣೆ ಖರೀದಿಸಲು ಯಾವುದೇ ನಿರ್ಬಂಧವಿರುವುದಿಲ್ಲ

ಉ) ಇಲ್ಲ

ಊ) ಪಡಿತರ -ಸೀಮೆಎಣ್ಣೆಯು ಕಾಳಸಂತೆಯಲ್ಲಿ ಮಾರಾಟವಾದ ಸಂದರ್ಭದಲ್ಲಿ ಅಗತ್ಯ ವಸ್ತುಗಳ ಕಾಯ್ದೆ `1955 ರನ್ವಯ ಕ್ರಮ ಜರುಗಿಸಲಾಗುತ್ತದೆ

153 (239) ಶ್ರೀ ಸಿಂಧೂರ ಜಿ ರಾಜಶೇಖರ್ (ಶಿಗ್ಗಾಂವ್) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಕರ್ನಾಟಕ ರಾಜ್ಯದ ಪೆಟ್ರೋಲ್ ಬಂಕ್‌ಗಳಲ್ಲಿ, ದೊಡ್ಡ ವಾಣಿಜ್ಯ ಮಳಿಗೆಗಳಲ್ಲಿ ಹಾಗೂ ವ್ಯಾಪಾರಸ್ಥರು ಗ್ರಾಹಕರಿಗೆ ವಸ್ತುಗಳನ್ನು ಕೊಡುವಾಗ ರಸೀತಿಯನ್ನು (ಕ್ಯಾಶ್ ಬಿಲ್) ಧರ್ಮಲ್ ಪೇಪರಗಳಲ್ಲಿ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಧರ್ಮಲ್ ಪೇಪರ್‌ನಲ್ಲಿ ರಸೀತಿ ಕೊಡುವುದರಿಂದ ಅದರ ಮೇಲೆ ಮುದ್ರಣ (ಪ್ರಿಂಟ್) ಆಗಿರುವ ಅಕ್ಷರಗಳು ಸುಮಾರು 3 ರಿಂದ 4 ತಿಂಗಳುಗಳಲ್ಲಿ ಅಳಿಸಿ ಹೋಗಿ ಗ್ರಾಹಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಇ) ವ್ಯಾಪಾರಸ್ಥರು ರಸೀತಿಯನ್ನು ಕೊಡುವಾಗ ಸಣ್ಣ ಪೇಪರನಲ್ಲಿ ನೀಡುವುದರಿಂದ ಅವುಗಳನ್ನು ಕಾಯ್ದಿರಿಸಲಿಕ್ಕೆ ಅನಾನುಕೂಲತೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ಹಾಗಿದ್ದಲ್ಲಿ, ಕರ್ನಾಟಕ ರಾಜ್ಯಾದ್ಯಂತ ಧರ್ಮಲ್ ಪೇಪರನಲ್ಲಿ ರಸೀತಿ ಕೊಡುವ ಬದಲಾಗಿ ಸಆದಾ ಪೇಪರಿನಲ್ಲಿ ಅಲ್ಲದೆ, ದೊಡ್ಡ ಪೇಪರಗಳಲ್ಲಿ ರಸೀತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ? `

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಬಂದಿದೆ

ಆ) ಬಂದಿದೆ ಒಂದು ವೇಳೆ ಗ್ರಾಹಕರು ಬಯಸಿದ್ದಲ್ಲಿ ರೂಡಿಯಲ್ಲಿರುವ ಸಾಮಾನ್ಯ ಪೇಪರಿನಲ್ಲಿಯೂ ಸಹ ರಸೀತಿಗಳನ್ನು ಧರ್ಮಲ್ ಬಿಲ್ಲಿನ ಜೊತೆಯಲ್ಲಿ ನೀಡಲಾಗುತ್ತಿದೆ

ಇ) ಪೆಟ್ರೋಲ್ ಬಂಕ್‌ಗಳಲ್ಲಿ ಗ್ರಾಹಕರಿಗೆ ರಸೀತಿ (ಕ್ಯಾಶ್ ಬಿಲ್) ಗಳನ್ನು ಸಣ್ಣ ಪೇಪರಿನಲ್ಲಿ ನೀಡುತ್ತಿರುವುದರಿಂದ ಗ್ರಾಹಕರು ಅವುಗಳನ್ನು ಕಾಯ್ದಿರಿಸಲು ಅನಾನುಕೂಲತೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಆದರೆ ಗ್ರಾಹಕರು ಬಯಸಿದ್ದಲ್ಲಿ, ರೂಡಿಯಲ್ಲಿರುವ ಸಾಮಾನ್ಯ ಪೇರಪರಿನಲ್ಲಿಯೂ ಸಹ ರಸೀತಿಗಳನ್ನು ಧರ್ಮಲ್ ಬಿಲ್ಲಿನ ಜೊತೆಯಲ್ಲಿ ನೀಡಲಾಗುತ್ತಿದೆ

ಈ) ಪೆಟ್ರೋಲ್ ಬಂಕ್‌ಗಳಿಗೆ ಸಂಬಂಧಪಟ್ಟಂತೆ, ಮೋಟಾರ್ ಸ್ಪಿರಿಟ್ ಮತ್ತು ಹೈಸ್ಪೀಡ್ ಡಿಸೇಲ್ (ರೆಗ್ಯೂಲೇಷನ್ ಆಫ್ ಸಪ್ಲೈ, ಡಿಸ್ಟ್ರಿಬ್ಯೂಷನ್ ಅಂಡ್ ಪ್ರಿವೆನ್ಸ್‌ನ್ ಆಫ್ ಮಾಲ್ ಪ್ರಾಕ್ಟೀಸಸ್) ಆದೇಶ 2005ರ ಕ್ಲಾಸ್ (7)(1) ಹಾಗೂ (7)(1)(d) ಪ್ರಕಾರ ರಾಜ್ಯ ಸರ್ಕಾರದಿಂದ ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಸಿಎಸ್ 42 ಆರ್‌ಪಿಆರ್ 2006 ದಿ 1–9–2006 ರಂತೆ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ "Search and Seizure" ಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ ಆದರೆ, ಕರ್ನಾಟಕ ರಾಜ್ಯಾದಾದ್ಯಂತ ಧರ್ಮಲ್ ಪೇಪರ್‌ನಲ್ಲಿ ರಸೀತಿ ಕೊಡುವ ಬದಲಾಗಿ ಸಾದಾ ಪೇಪರಿನಲ್ಲಿ ಅಲ್ಲದೆ, ದೊಡ್ಡ ಪೇಪರಗಳಲ್ಲಿ ರಸೀತಿ ನೀಡುವ ಸಂಬಂಧ, ಸದರಿ ಆದೇಶದ ಕ್ಲಾಸ್ (9) ರ ಪ್ರಕಾರ ಯಾವುದೇ ಮಾರಾಟಗಾರರಿಗೆ ಆಗಿಂದ್ದಾಗ್ಗೆ ಸಾಮಾನ್ಯ ಅಥವಾ ವಿಶೇಷವಾದ ಆದೇಶಗಳನ್ನು ನೀಡಲು ಕೇಂದ್ರ ಸರ್ಕಾರಕ್ಕೆ ಸಂಪೂರ್ಣವಾದ ಅಧಿಕಾರದ ಅವಕಾಶ ಕಲ್ಪಿಸಲಾಗಿದೆ ಇದರಂತೆ ಗ್ರಾಹಕರಿಗೆ ಅನುಕೂಲವಾಗುವಂತೆ ರಸೀತಿಗಳನ್ನು ರೂಡಿಯಲ್ಲಿರುವ ಸಾಮಾನ್ಯವಾದ ದೊಡ್ಡ ಸೈಜಿನ ಪೇಪರಿನಲ್ಲಿ ಕಡ್ಡಾಯವಾಗಿ ನೀಡುವಂತೆ ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು

154 (240) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಕಾಯ್ದಿರಿಸುವ ಅನುದಾನವೆಷ್ಟು ಈವರೆಗೆ ಬಿಡುಗಡೆಗೊಳಿಸಿರುವ ಅನುದಾನ ಎಷ್ಟು, ಬಿಡುಗಡೆ ಆಗದೇ ಉಳಿದಿರುವುದೆಷ್ಟು (ವಿವರ ನೀಡುವುದು) ,

ಆ) ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಸರ್ಕಾರ ಬಿಡುಗಡೆಗೊಳಿಸಿರುವ ಅನುದಾನವೆಷ್ಟು ಹಾಗೂ ಷರತ್ತುಗಳೇನು ,

ಇ) ಶಿಗ್ಗಾಂವ-ಸವಣೂರು ತಾಲ್ಲೂಕುಗಳಲ್ಲಿಯ ಎಷ್ಟು ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಲು ಸರ್ಕಾರ ಕ್ರಮ ತೆಗೆದುಕೊಂಡಿದೆ (ವಿವರ ನೀಡುವುದು) ,

ಈ) ಹಾಗಿಲ್ಲದಿದ್ದಲ್ಲಿ, ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಯಾವಾಗ ಅನುದಾನ ಬಿಡುಗಡೆಗೊಳಿಸಲಾಗುವುದು ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) 2006-07ನೇ ಸಾಲಿನ ಆಯ-ವ್ಯಯದಲ್ಲಿ ರೂ 698 85 ಲಕ್ಷಗಳನ್ನು ಕಾಯ್ದಿರಿಸಿದೆ ಈ ಹಣದಲ್ಲಿ ಇಲ್ಲಿಯವರೆಗೆ ರೂ 463 55 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ ಬಾಕಿ ರೂ 235 30 ಲಕ್ಷಗಳು ಬಿಡುಗಡೆ ಆಗಬೇಕಾಗಿದೆ

ಆ) 2006-07ನೇ ಸಾಲಿನಲ್ಲಿ ಈವರೆವಿಗೆ 1060 ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಸರ್ಕಾರವು ರೂ 463 55 ಲಕ್ಷಗಳನ್ನು ಮಂಜೂರು ಮಾಡಿರುತ್ತದೆ ಸರ್ಕಾರವು ದಿ 28-1-2000 ರಂದು ಹೊರಡಿಸಿರುವ ಸುತ್ತೋಲೆ ಸಂಖ್ಯೆ ಕಂಇ 20/ಎಂಎಲ್‌ಡಿ/2000 ರ ಅನ್ವಯ ಒಂದು ಸಂಸ್ಥೆಗೆ ಜೀರ್ಣೋದ್ಧಾರ / ರಿಪೇರಿಗಾಗಿ ಕನಿಷ್ಟ ರೂ 3 00 ಲಕ್ಷದವರೆಗೆ ಅನುದಾನ ಮಂಜುರು ಮಾಡಲು ಅವಕಾಶ ಕಲ್ಪಿಸಲಾಗಿದೆ ಸರ್ಕಾರದಿಂದ ಮಂಜೂರಾದ ಅನುದಾನವನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಬಿಡುಗಡೆಗೊಳಿಸುವುದಕ್ಕೆ ಸಮಬಂಧಿಸಿದಂತೆ ಸರ್ಕಾರವು ದಿ 4-9-2001 ರಂದು ಹೊರಡಿಸಿರುವ ಸುತ್ತೋಲೆ ಸಂಖ್ಯೆ ಕಂಇ 59/ ಮುಅಬಿ/2001ರಲ್ಲಿ

ಮಾರ್ಗಸೂಚಿಯನ್ನು ನೀಡಿದ್ದು, ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ, ಈ ಕೆಳಕಂಡ ನಿಯಮಗಳನ್ನು ಪಾಲಿಸಲು ನಿರ್ದೇಶಿಸಿರುತ್ತದೆ

1 ಅನುದಾನ ಮಂಜೂರಾದ ಸಂಸ್ಥೆಗಳು ಉದ್ದೇಶಿತ ಕಾಮಗಾರಿಗೆ ಸಂಬಂಧಿಸಿದಂತೆ ಅಂದಾಜುಪಟ್ಟಿ ಮತ್ತು ನಕ್ಷೆಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರಿಗಳಿಂದ ತಾಂತ್ರಿಕ ಅನುಮೋದನೆ / ಆಡಳಿತಾತ್ಮಕ ಮಂಜೂರಾತಿಗಳನ್ನು ಪಡೆಯಬೇಕಾಗುತ್ತದೆ

2 ಮಂಜೂರಾದ ಅನುದಾನದಲ್ಲಿ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ದೊರಕಿದ ನಂತರ ಮಂಜೂರಾದ ಅನುದಾನದಲ್ಲಿ ಶೇ 50 ರಷ್ಟು ಮೊತ್ತವನ್ನು ಮೊದಲನೆ ಕಂತಾಗಿ ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು ಪ್ರಥಮ ಕಂತಿನಲ್ಲಿ ಬಿಡುಗಡೆಯಾದ ಮೊತ್ತವನ್ನು ಸಂಬಂಧಪಟ್ಟ ಸಂಸ್ಥೆಗಳು ಉದ್ದೇಶಿತ ಕಾಮಗಾರಿಗಳಿಗೆ ಖರ್ಚು ಮಾಡಿರುವ ಬಗ್ಗೆ ಲೋಕೋಪಯೋಗಿ ಇಲಾಖೆ ಅಥವಾ ಜಿಲ್ಲಾ ಪಂಚಾಯತ್ ಅಭಿಯಂತರರು ಪರಿವೀಕ್ಷಣೆ ಮಾಡಿ, ಅವರ ಅನುಮೋದನೆಯೊಂದಿಗೆ ಮೊದಲನೆ ಕಂತಿನ ಬಳಕೆ ಪತ್ರವನ್ನು ಸಲ್ಲಿಸಿದ ನಂತರ, ಉಳಿದ ಅರ್ಧ ಅನುದಾವನ್ನು ಬಿಡುಗಡೆ ಮಾಡಲಾಗುವುದು

3 ಸರ್ಕಾರದಿಂದ ಮಂಜೂರಾದ ಅನುದಾನವನ್ನು ಹೊರತುಪಡಿಸಿ ಅಂದಾಜು ಪಟ್ಟಿಯ ಉಳಿಕೆ ವೆಚ್ಚವನ್ನು ಸಂಬಂಧಪಟ್ಟ ಸಂಸ್ಥೆಗಳು ಸಾರ್ವಜನಿಕ ವಂತಿಗೆಯಿಂದ ಭರಿಸಿ ಕಾಮಗಾರಿಯನ್ನು ಪೂರೈಸಬೇಕು ಸರ್ಕಾರದ ಅನುದಾನ ಹಾಗೂ ಸಾರ್ವಜನಿಕ ವಂತಿಗೆ ಹಣ ಕುರಿತಂತೆ ಸೂಕ್ತ ಲೆಕ್ಕ ಪತ್ರಗಳನ್ನು ನಿರ್ವಹಿಸಿ, ಲೆಕ್ಕ ಪರಿಶೋಧನೆಗೆ ಒಳಪಡಿಸಬೇಕು ಎರಡನೇ ಕಂತಿನ ಹಣವು ಪೂರ್ತಿ ಉಪಯೋಗವಾದ ನಂತರ ಸಕ್ಷಮ ಪ್ರಾಧಿಕಾರವು ಬಳಕೆ ಪ್ರಮಾಣ ಪತ್ರವನ್ನು ಆಯುಕ್ತರಿಗೆ ಸಲ್ಲಿಸುವುದು ಸರ್ಕಾರದಿಂದ ಅನುದಾನ ಮಂಜೂರಾಗಿರುವ ಪ್ರಕರಣಗಳಲ್ಲಿ ರೂ 5 00 ಲಕ್ಷಕ್ಕೂ ಮೀರಿದ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ನಿಯಮಗಳನ್ನು ಪಾಲಿಸುವುದು ಸಾರ್ವಜನಿಕ ಸ್ಥಳಗಳಾದ ಸಿ ಎ ನಿವೇಶನ, ಸರ್ವೀಸ್ ರಸ್ತೆಗಳು, ಪಾರ್ಕುಗಳು ಹಾಗೂ ಇತರೆ ಸಾರ್ವಜನಿಕ ಉಪಯೋಗ ಪಡೆಯುವ ಸ್ಥಳಗಳಲ್ಲಿ ದೇವಸ್ಥಾನಗಳು ಇದ್ದಲ್ಲಿ ಅಂತಹವುಗಳಿಗೆ ಯಾವುದೇ ಅನುದಾವನ್ನು ಬಿಡುಗಡೆ ಮಾಡುವಂತಿಲ್ಲ ಸರ್ಕಾರದಿಂದ ಅನುದಾನವು ಬಿಡುಗಡೆಯಾದ ಒಂದು ವರ್ಷದೊಳಗೆ ಮಂಜೂರಾದ ಅನುದಾನವನ್ನು

ಸಂಬಂಧಪಟ್ಟ ಸಂಸ್ಥೆಗಳ ಉದ್ದೇಶಿತ ಕಾಮಗಾರಿಗಳಿಗೆ ಒಂದು ವರ್ಷದೊಳಗೆ ಬಳಸಿಕೊಂಡು ಬಳಕೆ ಪತ್ರಗಳನ್ನು ಸಲ್ಲಿಸಬೇಕಾಗುತ್ತದೆ ಒಂದು ವರ್ಷದೊಳಗೆ ಅನುದಾನವನ್ನು ಬಿಡುಗಡೆ ಮಾಡಿಸಿಕೊಳ್ಳಲು ಸಂಸ್ಥೆಗಳು ಕ್ರಮವಹಿಸದಿದ್ದಲ್ಲಿ, ಇತರೆ ಸಂಸ್ಥೆಗಳಿಗೆ ಮರುಹಂಚಿಕೆ ಮಾಡಲಾಗುವುದು

ಇ) 2006–2007ನೇ ಸಾಲಿನಲ್ಲಿ ಶಿಗ್ಗಾಂವ್–ಸವಣೂರು ತಾಲ್ಲೂಕುಗಳಲ್ಲಿಯ 9 ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಅನುದಾನ ಕೋರಿ ಬೇಡಿಕೆ ಬಂದಿರುತ್ತದೆ ಈ ಸಂಸ್ಥೆಗಳಿಗೆ ಪ್ರಸ್ತುತ ಸಾಲಿನಲ್ಲಿ ಅನುದಾನ ಮಂಜುರು ಮಾಡಲು ಪರಿಶೀಲಿಸಲಾಗುವುದು

ದೇವಸ್ಥಾನಗಳ ವಿವರ ಕೆಳಕಂಡಂತಿರುತ್ತದೆ

(1) ಶ್ರೀ ಗ್ರಾಮದೇವಿ (ದ್ಯಾಮವ್ವ) ಜೀರ್ಣೋದ್ಧಾರ ಟ್ರಸ್ಟ್ ಕಮಿಟಿ, ಕಲಿವಾಳ ಗ್ರಾಮ, ಸವಣೂರು ತಾಲ್ಲೂಕು

(2) ಶ್ರೀ ಬೀರೇಶ್ವರ ದೇವಸ್ಥಾನ ಅಗಡಿ ಗ್ರಾಮ, ಹಾವೇರಿ ತಾಲ್ಲೂಕು

(3) ಶ್ರೀ ಬಸವಣ್ಣ ದೇವರ ದೇವಾಲಯ, ಆಲದಕಟ್ಟೆ ಗ್ರಾಮ, ಹಿರೇಕೆರೂರು ತಾಲ್ಲೂಕು

(4) ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಹಿರೇಬೆಂಡಿಗೇರಿ ಗ್ರಾಮ, ಶಿಗ್ಗಾಂವ ತಾಲ್ಲೂಕು

(5) ಶ್ರೀ ಚೌಡೇಶ್ವರಿ ದೇವಿ ಹಾಗೂ ವೆಂಕಟೇಶ್ವರ ದೇವಾಲಯ ಟ್ರಸ್ಟ್ ಕಮಿಟಿ (ರಿ)

(6) ಶ್ರೀ ಸೇವಾಲಾಲ ದೇವಸ್ಥಾನ, ಹತ್ತಿ ಮತ್ತೂರ ತಾಮಡಾ, ಸವಣೂರು ತಾಲ್ಲೂಕು

(7) ಮುಕ್ತಿ ಧಾಮದಲ್ಲಿ ಶಿವಮಂದಿರ, ಬ್ಯಾಡಗಿ ನಗರ, ಬ್ಯಾಡಗಿ ತಾಲ್ಲೂಕು

(8) ಶ್ರೀ ಬಸವಣ್ಣ ದೇವಸ್ಥಾನ, ಬಸವನಾಳ ಗ್ರಾಮ, ಶಿಗ್ಗಾಂವ ತಾಲ್ಲೂಕು

(9) ಶ್ರೀ ಬೀರದೇವರ ದೇವಸ್ಥಾನ, ತಡಸ ಗ್ರಾಮ, ಶಿಗ್ಗಾಂವ ತಾಲ್ಲೂಕು

ಈ) 2006–07ರ ಆರ್ಥಿಕ ವರ್ಷದ ಮುಕ್ತಾಯದ ಮುನ್ನ ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ಮಂಜೂರು ಮಾಡಲು ಪರಿಶೀಲಿಸಲಾಗುವುದು

155 (241) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಪ್ರಸಕ್ತ ವರ್ಷದಲ್ಲಿ ಒಣಮೆಣಸಿನಕಾಯಿ ಬೆಳೆ ಅತ್ಯುತ್ತಮವಾಗಿ ಬಂದಿದ್ದು, ಬೆಳೆಗೆ ಸರಿಯಾದ ಬಎಲೆ ದೊರಕದೇ ರೈತರು ಕಂಗಾಲಾಗಿರುವುದನ್ನು ಗಂಭೀರವಾಗಿ ಪರಿಗಣಿಸಿ, ಬೆಂಬಲ ಬೆಲೆ ಘೋಷಿಸುವುದು ಸರ್ಕಾರದ ಗಮನದಲ್ಲಿದೆಯೇ ,

ಆ) ಉತ್ತರ ಕರ್ನಾಟಕದಲ್ಲಿ ನಿರ್ಯಾ ಮಾಡುವಂತಹ ಒಣಮೆಣಸಿನಕಾಯಿ ಬೆಳೆಯುತ್ತಿದ್ದು, ಉತ್ತರ ಬೆಲೆ ಸಿಗುತ್ತಿಲ್ಲದಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಇ) ಆಂಧ್ರಪ್ರದೇಶದ ಮಾದರಿಯಲ್ಲಿ ಸರ್ಕಾರವು ಬೆಂಬಲ ಬೆಲೆ ನಿಗಧಿಪಡಿಸಿದಲ್ಲಿ ಕೇಂದ್ರ ಸರ್ಕಾರದಿಂದ ಅರ್ಧದಷ್ಟು ವೆಚ್ಚವನ್ನು ಭರಿಸಲು ವ್ಯವಸ್ಥೆಯಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಈ) ಹಾಗಿದ್ದಲ್ಲಿ, ಜರೂರಾಗಿ ಕೇಂದ್ರ ಸರ್ಕಾರದಿಂದ ಹೆಚ್ಚಿನ ಮಾಹಿತಿ ಪಡೆದು ಒನಮೆಣಸಿನಕಾಯಿಗೆ ಬೆಂಬಲ ಬೆಲೆ ಘೋಷಿಸಲು ಯಾವಾಗ ಕ್ರಮ ಕೈಗೊಳ್ಳುವುದು ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಅ) ಒಣಮೆಣಸಿನಕಾಯಿಯು ಹಾಳಾಗದಂತಹ ವಾಣಿಜ್ಯ ಬೆಳೆಯಾಗಿರುವುದು ಒಣಮೆಣಸಿನಕಾಯಿ ಬೆಲೆ ಕುಸಿತದಲ್ಲಿ ರೈತರಿಗೆ ಮಾರುಕಟ್ಟೆ ಪ್ರಾಂಗಣಗಳಲ್ಲಿ ಸಂಗ್ರಹಣಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ ಮತ್ತು ಒತ್ತೆ ಯೋಜನೆಯಡಿಯಲ್ಲಿ ಮೃದುಸಾಲವನ್ನು ಒದಗಿಸಲಾಗುವುದು

ಆ) ಪ್ರಸ್ತುತದಲ್ಲಿ ಒಣಮೆಣಸಿಕಾಯಿಗೆ ರೈತರು ಪಡೆಯುತ್ತಿರುವ ಬೆಳೆಗಳು ಸಮಾಧಾನಕರವಾಗಿವೆ

ಇ) ಹೌದು

ಈ) (ಎ) ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

156 (242) ಶ್ರೀ ಸಿಂಧೂರ ಬಿ ರಾಜಶೇಖರ (ಶಿಗ್ಗಾಂವ್) ಮಾನ್ಯ. ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಶಿಂಗ್ಗಾಂವ್–ಸವಣೂರ ತಾಲ್ಲೂಕುಗಳಲ್ಲಿ ಅಂತರ ಜಲ ಮಟ್ಟ ಕುಸಿದಿದ್ದು, ನೀರಿನ ಪ್ರಮಾಣ ಕಡಿಮೆ ಇರುವುದರಿಂದ, ಕಡಿಮೆ ನೀರನ್ನು ಉಪಯೋಗಿಸಿ ತೋಟಗಾರಿಕೆ ಬೆಳೆಯನ್ನು ಬೆಳೆಯಲಿಕ್ಕೆ ಇಸ್ರೇಲ್ ತಂತ್ರಜ್ಞಾನದತ್ತ ಯೋಜನೆಯಡಿಯಲ್ಲಿ ಶಿಗ್ಗಾಂವ–ಸವಣೂರ ತಾಲ್ಲೂಕು ಸೇರದೇ ಇರುವುದು ಸರ್ಕಾರದ ಗಮನದಲ್ಲಿದೆಯೇ ,

ಆ) ಹಾಗಿದ್ದಲ್ಲಿ, ಸವಣೂರ ತಾಲ್ಲೂಕು ಈಗಾಗಲೇ ಬರ ಪೀಡಿತ ಪ್ರದೇಶ ಎಂದು ಘೋಷಿಸಿದ್ದು, ಇಸ್ರೇಲ್ ತಂತ್ರಜ್ಞಾನ ದತ್ತ ಯೋಜನೆಯಡಿಯಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯಲಿಕ್ಕೆ ರೈತ ಸಮುದಾಯಕ್ಕೆ ಹೆಚ್ಚಿನ ಅನುಕೂಲ ಮಾಡಿಕೊಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ (ತೋಟಗಾರಿಕಾ ಸಚಿವರು)

ಅ) ಹೌದು

ಆ) ಸವಣೂರ ತಾಲ್ಲೂಕನ್ನು ಇಸ್ರೇಲಿ ತಂತ್ರಜ್ಞಾನ ಯೋಜನೆಯಡಿ ತರುವ ಉದ್ದೇಶ ಈ ಸಧ್ಯದಲ್ಲಿ ಇರುವುದಿಲ್ಲ

157 (243) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಶಿಗ್ಗಾಂವ್ – ಸವಣೂರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಗ್ರಾಮೀಣ ರಸ್ತೆ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆಗೊಳಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಇಲ್ಲದಿದ್ದಲ್ಲಿ ಶ್ರೀ ನಂಜುಂಡಪ್ಪ ವರದಿ ಆಧಾರದ ಮೇಲೆ ಶಿಗ್ಗಾಂವ – ಸವಣೂರ ತಾಲ್ಲೂಕುಗಳು ಹಿಂದುಳಿದ ತಾಲ್ಲೂಕುಗಳಾಗಿರುವುದರಿಂದ ಗ್ರಾಮೀಣ ಮಟ್ಟದ ರಸ್ತೆಗಳು ಹಾಳಾಗಿದ್ದು ಈ ರಸ್ತೆಗಳನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಇ) ಕಳೆದ ಮೂರು ವರ್ಷದಲ್ಲಿ ಶಿಗ್ಗಾಂವ್–ಸವಣೂರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಿರ್ಮಿಸಿದ ಕಾರ್ಯಗಳು ಹಾಗೂ ಕಾಮಗಾರಿಗಳೇನು (ಮಾಹಿತಿ ಒದಗಿಸುವುದು)

ಈ) ಶಿಗ್ಗಾಂವ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅವಧಿ ಯಾವಾಗ ಮುಗಿಯುತ್ತದೆ ,

ಉ) ಈ ಸಮಿತಿಗೆ ಚುನಾವಣೆ ನಡೆಸಲು ಸರ್ಕಾರ ತೀರ್ಮಾನಿಸಿದೆಯೇ ,

ಊ) ಆಗಿದ್ದಲ್ಲಿ, ಯಾವಾಗ ಚುನಾವಣೆ ನಡೆಸಲಾಗುವುದು ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಅ) ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಸರ್ಕಾರವು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಅನುದಾನ ನೀಡುವ ಯೋಜನೆ ಯಾವುದು ಇರುವುದಿಲ್ಲ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ನಿಯಮಗಳು 1968ರ ನಿಯಮ 60(ಸಿ) ರಡಿಯಲ್ಲಿ ಸಮಿತಿಗಳ ವತಿಯಿಂದ ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಅಬಿವೃದ್ಧಿಪಡಿಸಲು ಅವಕಾಶವಿದ್ದು, ಪ್ರಸ್ತಾಪಿತ ಸಮಿತಿಗಳಲ್ಲಿ ಆರ್ಥಿಕ ಸಂಪನ್ಮೂಲ ಕೊರತೆಯಿಂದಾಗಿ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಮಂಜೂರಾತಿ ನೀಡಿರುವುದಿಲ್ಲ

ಆ) ಅನ್ವಯಿಸುವುದಿಲ್ಲ

ಇ) ಸವಣೂರು

ಆರ್ಥಿಕ ಸಂಪನ್ಮೂಲ ಕೊರತೆಯಿಂದಾಗಿ ಸಮಿತಿಯ ಕ್ರಿಯಾ ಯೋಜನೆಗಳನ್ನು ಮಂಜೂರು ಮಾಡಿರುವುದಿಲ್ಲ.

ಶಿಗ್ಗಾಂವ

ವರ್ಷ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
2003–04	ಆಡಳಿತ ಕಛೇರಿ ಕಟ್ಟಡ ನಿರ್ಮಾಣ	4 00
2004–05	ಮೈಕ್ರೋ ಮೇನೇಜ್‌ಮೆಂಟ್ ಯೋಜನೆ ಯಡಿಯಲ್ಲಿ 2 ಗೋದಾಮುಗಳ ನಿರ್ಮಾಣ	10 00
2005–06	ಆವರಣ ಗೋಡೆ ನಿರ್ಮಾಣ	10 00
2005–06	ಎನ್ ಜಿ ಆರ್ ಜಿ ಗೋದಾಮು ದುರಸ್ತಿ	2 00

ಈ) ದಿನಾಂಕ 15–02–2006ಕ್ಕೆ ಅವಧಿ ಮುಕ್ತಾಯವಾಗಿರುತ್ತದೆ

ಉ) ಹೌದು

ಊ) ರಾಜ್ಯದ 126 ತಾಲ್ಲೂಕ್‌ಗಳನ್ನು ಬರಪೀಡಿತ ಪ್ರದೇಶಗಳೆಂದು ಸರ್ಕಾರವು ಘೋಷಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ತನ್ನ ಆದೇಶ ದಿನಾಂಕ 20–12–2006 ರಲ್ಲಿ ಶಿಗ್ಗಾಂವ್ ಸಮಿತಿಗೆ ಚುನಾವಣೆಯನ್ನು ಮುಂದಿನ ಮುಂಗಾರಿನ ನಂತರ ಅಂದರೆ 2007ನೇ ಸೆಪ್ಟೆಂಬರ್ ನಂತರ ನಡೆಸಲು ಆದೇಶಿಸಲಾಗಿದೆ

158 (433) ಶ್ರೀ ಕೆ ಶ್ರೀನಿವಾಸ ಗೌಡ (ಕೋಲಾರ) ಮಾನ್ಯ ತೋಟಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಕೋಲಾರ ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆಗೆ ಅಂಗಮಾರಿರೋಗ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಈ ರೋಗದಿಂದ ಜಿಲ್ಲೆಯಾದ್ಯಂತ ಎಷ್ಟು ಎಕರೆ ಕೃಷಿ ಜಮೀನಿನಲ್ಲಿ ಬೆಳೆ ರೋಗ ತಗುಲಿ ಬೆಳೆ ನಾಶವಾಗಿದೆ ,

ಇ) ಈ ರೋಗದಿಂದ ಬೆಳೆನಾಶವಾದುದಕ್ಕೆ ರೈತರಿಗೆ ಪರಿಹಾರ ನೀಡಲಾಗಿದೆಯೇ ,

ಈ) ಹಾಗಿದ್ದಲ್ಲಿ, ಎಕರೆವಾರು ಪರಿಹಾರ ನೀಡಿರುವುದೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು) ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ (ತೋಟಗಾರಿಕಾ ಸಚಿವರು)

ಅ) ಹೌದು

ಆ) ಅಂದಾಜು 4,500 ಹೆಕ್ಟೇರ್ ಪ್ರದೇಶದಲ್ಲಿ ರೋಗ ತಗುಲಿದೆ

ಇ) ತೋಟಗಾರಿಕೆ ಇಲಾಖೆಯ ವತಿಯಿಂದ ಬೆಳೆ ನಾಶಕ್ಕೆ ಪರಿಹಾರ ನೀಡಲು ಅವಕಾಶ ಇರುವುದಿಲ್ಲ

ಈ) ಉದ್ಭವಿಸುವುದಿಲ್ಲ

159 (263) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ವತಿಯಿಂದ ಈ ಹಿಂದೆ ವಿತರಿಸಲಾದ ತಾತ್ಕಾಲಿಕ ಪಡಿತರ ಚೀಟಿಗಳ ಅವಧಿ ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ನೂತನ ಪಡಿತರ ಚೀಟಿಗಳನ್ನು ವಿತರಿಸಲು ಸರ್ಕಾರ ಸಂಕಲ್ಪಿಸಿದೆಯೇ ,

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಬಂದಿದೆ

ಆ) ಹೌದು

ಇ) ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಅಹವಾಲುಗಳ ಪೂರ್ಣ ವಿಲೇವಾರಿಯ ನಂತರ ತಾತ್ಕಾಲಿಕ ಪಡಿತರ ಚೀಟಿಗಳ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು ` ನಂತರ ಖಾಯಂ ಪಡಿತರ ಚೀಟಿಯನ್ನು ನೀಡಲಾಗುವುದು

160 (423) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿರುವ ಸಂತೆ ಮೈದಾನಗಳನ್ನು ಆಧುನೀಕರಣ ಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ,

ಆ) ಅನೇಕ ಸಂತೆ ಮೈದಾನಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಖಾಯಂ ಸಂತೆ ಮೈದಾನಗಳನ್ನು ಸ್ಥಾಪನೆ ಮಾಡುವ ಉದ್ದೇಶವಿದೆಯೇ ,

ಈ) ಕುಡಿಯುವ ನೀರು, ರಸ್ತೆ ಹಾಗೂ ದೀಪದ ವ್ಯವಸ್ಥೆಯನ್ನು ಪರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ,

ಉ) ರಾಜ್ಯದಲ್ಲಿರುವ ಸಂತೆ ಮೈದಾನಗಳ ಸಂಖ್ಯೆ (ಎಷ್ಟು) ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)

ಅ) ನಬಾರ್ಡ್ ಧನ ಸಹಾಯದಡಿಯಲ್ಲಿ ಆರ್ ಐ ಡಿ ಎಫ್ ಯೋಜನೆ ಗಳಡಿಯಲ್ಲಿ ಗ್ರಾಮೀಣ ಸಂತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ

ಆರ್ ಐ ಡಿ ಎಫ್ ಯೋಜನೆ	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಯೋಜನಾ ಮೊತ್ತ (ರೂ ಲಕ್ಷಗಳಲ್ಲಿ)	ಆಗಿರುವ ವೆಚ್ಚ (ರೂ ಲಕ್ಷಗಳಲ್ಲಿ)	ಕಾಮಗಾರಿಗಳ ಹಂತ
VI	13	242 90	225 72	ಪೂರ್ಣಗೊಂಡಿವೆ
VII	16	200 94	202 45	ಪೂರ್ಣಗೊಂಡಿವೆ
IX	193	2216 13	1861 10	1) 179 ಭೌತಿಕವಾಗಿ ಪೂರ್ಣ ಗೊಂಡಿದೆ 2) 3 – ಪ್ರಗತಿಯಲ್ಲಿವೆ 3) 11 – ನಿವೇಶನ ಸಮಸ್ಯೆ ಒಟ್ಟು – 193
XI	99	990 00	–	1) 8 – ಭೌತಿಕವಾಗಿ ಪೂರ್ಣ ಗೊಂಡಿದೆ 2) 54 – ಪ್ರಗತಿಯಲ್ಲಿವೆ 3) 25 – ಟೆಂಡರ್ ಪ್ರಕ್ರಿಯೆ ಹಂತದಲ್ಲಿವೆ 4) 12 – ನಿವೇಶನ ಸಮಸ್ಯೆ ಒಟ್ಟು – 99
ಒಟ್ಟು	321	3649 97	2289 27	

ಮುಂದುವರೆದು ಆರ್ ಐ ಡಿ ಎಫ್– XII ರಡಿಯಲ್ಲಿ 156 ಗ್ರಾಮೀಣ ಸಂತೆಗಳನ್ನು ಮೊತ್ತ ರೂ 1,700 00 ಲಕ್ಷಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದ್ದು ನಬಾರ್ಡ್ ಸಂಸ್ಥೆಯಿಂದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ

ಆ) ಹೌದು

ಇ) ಹೌದು

ಈ) ಮೂಲಭೂತ ಸೌಕರ್ಯಗಳಾದ ಮಾರಾಟಕಟ್ಟೆಗಳ ನಿರ್ಮಾಣ ಬೀದಿದೀಪಗಳ ಅಳವಡಿಕೆ, ನೀರು ಸರಬ್ಬರಾಜು, ಶೌಚಾಲಯ ನಿರ್ಮಾಣ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಗ್ರಾಮೀಣ ಸಂತೆಗಳಲ್ಲಿ ಅವಶ್ಯಕತೆಗನುಸಾರ ಹಂತ ಹಂತವಾಗಿ ಒದಗಿಸಲು ಕ್ರಮ ಜರುಗಿಸಲಾಗುತ್ತಿದೆ

ಉ) ರಾಜ್ಯದಲ್ಲಿ 737 ಗ್ರಾಮೀಣ ಸಂತೆಗಳು ಇವೆ

162 (425) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,





163 (426) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ

ಅ) ಟಾಸ್ಕ್‌ಫೋರ್ಸ್ ಮೂಲಕ ಕರ್ನಾಟಕ ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕೊಳವೆ ಬಾವಿಗಳನ್ನು ಕೊರೆಸಲು ಬಿಡುಗಡೆಯಾಗಿರುವ ಹಣವೆಷ್ಟು ,

ಆ) ಬಾಕಿ ನೀಡಬೇಕಾಗಿರುವ ಹಣವೆಷ್ಟು ,

ಇ) ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಹಾಹಾಕಾರ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) 2006–07ರ ಸಾಲಿನಲ್ಲಿ ಟಾಸ್ಕ್‌ಫೋರ್ಸ್ ವತಿಯಿಂದ ಅನುಷ್ಠಾನಗೊಳಿಸಿರುವ ತುರ್ತು ಕುಡಿಯುವ ನೀರಿನ ಕಾಮಗಾರಿಗಳಿಗಾಗಿ ಒಟ್ಟು ರೂ 31 62 ಕೋಟಿ ಅನುದಾನ ಬಿಡುಗಡೆಯಾಗಿದೆ

ಆ) ಇನ್ನೂ ಸುಮಾರು ರೂ 63 00 ಕೋಟಿ ಅನುದಾನದ ಬೇಡಿಕೆಯಿದೆ

ಇ) ಬಂದಿದೆ ಈ ಸಂಬಂಧ ರೂ 116 34 ಕೋಟಿ ಅಂದಾಜಿನ ತುರ್ತು ಕ್ರಿಯಾ ಯೋಜನೆಯನ್ನು ಚಮರಾಜನಗರ ಜಿಲ್ಲೆಯ 118 ಸಮಸ್ಯಾತ್ಮಕ ಜನವಸತಿಗಳೂ ಸೇರಿದಂತೆ ರಾಜ್ಯದ ಎಲ್ಲಾ ತಾಲ್ಲೂಕುಗಳ

ಬೇಡಿಕೆಯನ್ನು ಒಳಗೊಂಡಂತೆ ಸಿದ್ಧಪಡಿಸಿ ಕಂದಾಯ ಇಲಾಖೆ ಮುಖೇನ CRF/NCCF ಮತ್ತು ARWSP - Scarcity ಯಡಿ ವಿಶೇಷ ಅನುದಾನ ಬಿಡುಗಡೆಗಾಗಿ ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ

164 (267) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಿಕೊಳ್ಳಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ,

ಆ) ಈ ಪ್ರಕ್ರಿಯೆ ಯಾವ ಹಂತದಲ್ಲಿದೆ , ಇದನ್ನು ತಡೆಗಟ್ಟಲು ಅಧಿಕಾರಿಗಳಿಗೆ ನೀಡಿದ ಸೂಚನೆಗಳೇನು , ವಿಳಂಬ ನೀತಿಯಿಂದ ಹಲವಾರು ನೌಕರರು ಬಡ್ತಿಯಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಇದಕ್ಕೆ ಕೆಲ ಅಧಿಕಾರಿಗಳ ವಿರೋಧವಿರುವುದು ನಿಜವೇ ,

ಈ) ಅದಕ್ಕೆ ಕಾರಣಗಳೇನು ಮತ್ತು ಅಂತಹ ಅಧಿಕಾರಿಗಳು ಯಾರ್ಯಾರು ,

ಉ) ಇವರುಗಳ ಮೇಲೆ ಕ್ರಮ ಜರುಗಿಸಲಾಗುವುದೇ ,

ಊ) ಈ ನಿಟ್ಟಿನಲ್ಲಿ ಕಾರ್ಯಕಾರಿ ಆದೇಶವನ್ನು ಯಾವ ಅಧಿಸೂಚನೆ ಆಧಾರದ ಮೇಲೆ ರೂಪಿಸಲಾಗಿದೆ (ಅಧಿನಿಯಮ ಪ್ರತಿ ಒದಗಿಸುವುದು) ,

ಋ) ಅಧಿಸೂಚನೆಯಲ್ಲಿ ನಮೂದಿಸದ ಬೆರಳಚ್ಚುಗಾರರನ್ನು ಕಾರ್ಯಕಾರಿ ಆದೇಶದಲ್ಲಿ ನಮೂದಿಸಿರುವುದು ನಿಜವೇ , ಇದರ ಔಚಿತ್ಯವೇನು (ಕಾರ್ಯಕಾರಿ ಆದೇಶದ ಪ್ರತಿ ಒದಗಿಸುವುದು) ,

ೠ) ಅಮಾಲ್ಗಮೇಷನ್ ಆದೇಶವನ್ನು ತಿರುಚಿರುವಂತಹ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಶಿಸ್ತು ಕ್ರಮ ಜರುಗಿಸುವುದು (ಅಮಾಲ್ಗಮೇಷನ್ ಆದೇಶದ ಪ್ರತಿ ಒದಗಿಸುವುದು) ?

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು):

ಅ) ಕರಡು ಅಧಿಸೂಚನೆಯನ್ನು ಪ್ರಕಟಿಸಲಾಗಿದ್ದು, ಅದರ ಮೇಲೆ ಅನೇಕ ಸಲಹೆ ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳ ಪರಿಶೀಲನೆಯಲ್ಲಿದೆ , ಹಾಗೂ ತಾಂತ್ರಿಕ ಸಿಬ್ಬಂದಿಗಳಿಗೆ ಕೆಲವು

ಮಾರ್ಪಾಡುಗಳನ್ನು ಸೇರಿಸಲು ಉದ್ದೇಶಿಸಿರುವುದರಿಂದ ಪರಿಷ್ಕೃತ ಕರಡು ಅಧಿಸೂಚನೆಯನ್ನು ಹೊರಡಿಸಲು ಉದ್ದೇಶಿಸಿದೆ

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಊ) ಅಂತಿಮವಾಗಿ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲ

ಋ) ಇಲ್ಲ

ಋೂ) ಉದ್ಭವಿಸುವುದಿಲ್ಲ ಅಮಾಲ್ಗಮೇಷನ್ ಆದೇಶದ ಪ್ರತಿಯನ್ನು ಪ್ರತ್ಯೇಕವಾಗಿ ಮಾನ್ಯ ಶಾಸಕರಿಗೆ ಒದಗಿಸಲಾಗುವುದು

* * * * *